
Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–18 | ಸಂಚಿಕೆ–33 | ಆಗಸ್ಟ್ 12–18, 2024 | ಪುಟ 16 | ರೂ.10/–
Volume-18 | Issue-33 | August 12-18, 2024 | Pages:16 | Price: 10/-





ಎಸ್.ಸಿ.-ಎಸ್.ಟಿ ಒಳ ಮೀಸಲಾತಿ ಮತ್ತು ಕೆನೆಪದರ ಪ್ರಶ್ನೆ



ಸಮರ್ಪಿತ ಕಮ್ಯೂನಿಸ್ಟ್ ನಾಯಕ
ಕಾಮ್ರೇಡ್ ಬುದ್ಧದೇವ್ ಭಟ್ಟಾಚಾರ್ಯ



ನೇರ ನಡೆ ನುಡಿಯ ಜನ ನಾಯಕ
ಕಾಮ್ರೇಡ್ ಭೀಮಶಿ ಕಲಾದಗಿ ಇನ್ನಿಲ್ಲ

ಬಾಂಗ್ಲಾದಲ್ಲಿ ಬಂಡಾಯ

ವಕ್ಫ್ ಬೋರ್ಡ್ ತಿದ್ದುಪಡಿ ಮಸೂದೆ: ದ್ವೇಷಪೂರಿತ ನಡೆ

ದ್ವೇಷ ಹುಟ್ಟಿಸುವ ಉದ್ದೇಶದಿಂದ ವಕ್ಫ್ ಬೋರ್ಡ್ (ತಿದ್ದುಪಡಿ) ಮಸೂದೆ

ವಕ್ಫ್ ಬೋರ್ಡ್ (ತಿದ್ದುಪಡಿ) ಮಸೂದೆಯು ವಿವಿಧತೆಯಲ್ಲಿ ಏಕತೆಯ ವಿರುದ್ಧ ಮಾತ್ರವಲ್ಲದೆ ಸಂವಿಧಾನದ ಭರವಸೆಯಂತೆ ಧರ್ಮದ ಹಕ್ಕಿನ ವಿರುದ್ಧವೂ ಆಗಿದೆ. ಇದು ಸಂವಿಧಾನದ 25, 26, 27, 28, 29, 30ನೇ ವಿಧಿಗಳಿಗೆ ವಿರುದ್ಧವಾಗಿದೆ. ಭೂಮಿ ರಾಜ್ಯ ಪಟ್ಟಿಗೆ ಸೇರಿದೆ. ಆದರೆ, ಕೇಂದ್ರವು ಈ ಮಸೂದೆಯನ್ನು ಮಂಡಿಸುವ ಮೂಲಕ ಒಕ್ಕೂಟ ವ್ಯವಸ್ಥೆಯ ಮೇಲೆ ದಾಳಿ ಮಾಡಿದೆ. ಬಿಜೆಪಿಯ ಏಕೈಕ ಕೆಲಸವೆಂದರೆ ಹಿಂದೂಗಳು ಮತ್ತು ಮುಸ್ಲಿಮರನ್ನು ವಿಭಜಿಸುವುದು ಮತ್ತು ಸಂವಿಧಾನವು ಮುಸ್ಲಿಮರಿಗೆ ನೀಡಿರುವ ಹಕ್ಕುಗಳನ್ನು ಕಸಿದುಕೊಳ್ಳುವುದು.



ಕೇಂದ್ರ ಸರಕಾರ ಲೋಕಸಭೆಯಲ್ಲಿ ಆಗಸ್ಟ್ 8, 2024 ರಂದು, ವಕ್ಫ್ ಬೋರ್ಡ್ (ತಿದ್ದುಪಡಿ) ಮಸೂದೆ ಹಾಗೂ ಮುಸ್ಲಿಂ ವಕ್ಫ್ (ರದ್ದತಿ) ವಿಧೇಯಕಗಳನ್ನು ತರಲು ಮುಂದಾಗಿದ್ದು ಒಂದು ಅತಿರೇಕದ ನಡೆ. ಇದು ಮುಸ್ಲಿಮರ ವಿರುದ್ಧ ವಿಷ ಉಗುಳುವ ಹಾಗೂ ಜನರ ನಡುವೆ ದ್ವೇಷ ಹುಟ್ಟಿಸುವ ಉದ್ದೇಶದಿಂದ ಕೂಡಿದೆ. ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ಕಳುಹಿಸಿದರೂ ಅದು ತಾತ್ಕಾಲಿಕ ಸಮಾಧಾನವಷ್ಟೇ. ಈ ಮಸೂದೆಯು ವಿವಿಧತೆಯಲ್ಲಿ ಏಕತೆಯ ವಿರುದ್ಧ ಮಾತ್ರವಲ್ಲದೆ ಸಂವಿಧಾನದ ಭರವಸೆಯಂತೆ ಧರ್ಮದ ಹಕ್ಕಿನ ವಿರುದ್ಧವೂ ಆಗಿದೆ. ಇದು ಸಂವಿಧಾನದ 25, 26, 27, 28, 29, 30ನೇ ವಿಧಿಗಳಿಗೆ ವಿರುದ್ಧವಾಗಿದೆ. ಭೂಮಿ ರಾಜ್ಯ ಪಟ್ಟಿಗೆ ಸೇರಿದೆ. ಆದರೆ, ಕೇಂದ್ರವು ಈ ಮಸೂದೆಯನ್ನು ಮಂಡಿಸುವ ಮೂಲಕ ಒಕ್ಕೂಟ ವ್ಯವಸ್ಥೆಯ ಮೇಲೆ ದಾಳಿ ಮಾಡಿದೆ. ಈ ಮಸೂದೆಯ ಮೂಲಕ ಮುಸ್ಲಿಮೇತರರನ್ನೂ ವಕ್ಫ್ ಆಡಳಿತ ಮಂಡಳಿಯ ಸದಸ್ಯರನ್ನಾಗಿ ಮಾಡಲಾಗುತ್ತಿದೆ. ಇದನ್ನು ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ನೇರ ದಾಳಿ ಎಂದು ಪರಿಗಣಿಸಬೇಕು. ಸಂಸತ್ತಿನಲ್ಲಿ ಮತ್ತು ಸಂಸತ್ತಿನ ಹೊರಗೆ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ವಿಶಾಲ ಏಕತೆ ಮತ್ತು ಚಳುವಳಿಯೊಂದಿಗೆ ಸಾರ್ವಜನಿಕ ವಲಯದಲ್ಲಿ ದ್ವೇಷಪೂರಿತ ಮತ್ತು ಸಂವಿಧಾನ ವಿರೋಧಿ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆಯನ್ನು ಕೇಂದ್ರವು ಹಿಂಪಡೆಯುವುದು ಅವಶ್ಯಕ.

ವಕ್ಫ್ ಆಸ್ತಿ

ಮುಸ್ಲೀಮರು ತಮ್ಮ ದೇವರ ಹೆಸರಿನಲ್ಲಿ ಧಾರ್ಮಿಕ ಉದ್ದೇಶಗಳಿಗಾಗಿ ಸಮರ್ಪಿಸುವ ಸ್ಥಿರ ಮತ್ತು ಚರ ಆಸ್ತಿಗಳನ್ನು ವಕ್ಫ್ ಆಸ್ತಿ ಎನ್ನುತ್ತಾರೆ. ವಕ್ಫ್ ಆಸ್ತಿಯನ್ನು ಯಾರಿಗೂ ಮಾರುವಂತಿಲ್ಲ ಅಥವಾ ವರ್ಗಾಯಿಸುವಂತಿಲ್ಲ. ವಕ್ಫ್‌ನಿಂದ ಬರುವ ಆದಾಯವನ್ನು ಸಾಮಾನ್ಯವಾಗಿ ಶಿಕ್ಷಣ ಸಂಸ್ಥೆಗಳು, ಸ್ಮಶಾನಗಳು, ಮಸೀದಿಗಳು, ಆಶ್ರಯ ಮನೆಗಳು ಇತ್ಯಾದಿಗಳ ನಿರ್ವಹಣೆಗೆ ಬಳಸಲಾಗುತ್ತದೆ. ವಕ್ಫ್ ಆಸ್ತಿಗಳನ್ನು ನಿರ್ವಹಿಸಲು ಸರ್ಕಾರಗಳು ನಾಮನಿರ್ದೇಶನ ಮಾಡಿದ ಸದಸ್ಯರನ್ನು ಹೊಂದಿರುವ ಶಾಸನಬದ್ಧವಾದ ಸಂಸ್ಥೆ ವಕ್ಫ್ ಬೋರ್ಡ್. ಬೋರ್ಡ್ ಪ್ರತಿ ಆಸ್ತಿಗೆ ಒಬ್ಬ ಕಸ್ಟೋಡಿಯನ್ ಅನ್ನು ನೇಮಿಸುತ್ತದೆ. ಅದರಿಂದ ಬರುವ ಆದಾಯವನ್ನು ಉದ್ದೇಶಿತ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗಿದೆ ಎಂದು ಇದು ಖಚಿತಪಡಿಸುತ್ತದೆ. 1964 ರಲ್ಲಿ ಸ್ಥಾಪಿತವಾದ ಕೇಂದ್ರೀಯ ವಕ್ಫ್ ಕೌನ್ಸಿಲ್ ದೇಶದೆಲ್ಲೆಡೆ ಇರುವ ರಾಜ್ಯ ಮಟ್ಟದ ವಕ್ಫ್ ಮಂಡಳಿಗಳನ್ನು ಮೇಲ್ವಿಚಾರಣೆ ಮಾಡುತ್ತದೆ. ಸಲಹೆ ಮತ್ತು ಸೂಚನೆಗಳನ್ನು ನೀಡುತ್ತದೆ.

ವಕ್ಫ್ ಕಾಯಿದೆಯ ಪ್ರಕಾರ, ಒಂದು ಆಸ್ತಿಯನ್ನು 'ವಕ್ಫ್ ಆಸ್ತಿ' ಎಂದು ಗುರುತಿಸುವ ಅಧಿಕಾರವನ್ನು ವಕ್ಫ್ ಬೋರ್ಡ್‌ಗೆ ಒದಗಿಲಾಗಿದೆ. ಒಂದು ಆಸ್ತಿಯನ್ನು ವಕ್ಫ್ ಎಂದು ಪರಿಗಣಿಸಬೇಕೇ ಅಥವಾ ಬೇಡವೇ ಎಂಬ ವಿವಾದ ಉದ್ಭವಿಸಿದಾಗ, ಕಾಯಿದೆಯ ಸೆಕ್ಷನ್ 6 ರ ಅಡಿಯಲ್ಲಿ ಟ್ರಿಬ್ಯುನಲ್ ನಿರ್ಣಯವೇ ಅಂತಿಮವಾಗಿರುತ್ತದೆ. ಒಂದು ಆಸ್ತಿ ವಕ್ಫ್ ಆಸ್ತಿಯೇ?, ಅಥವಾ ಸರ್ಕಾರಿ ಭೂಮಿಯೇ? ಎನ್ನುವುದನ್ನು ಜಿಲ್ಲಾಧಿಕಾರಿ ನಿರ್ಧರಿಸುತ್ತಾರೆ ಎಂದು ತಿದ್ದುಪಡಿ ವಿಧೇಯಕದಲ್ಲಿ ಪ್ರತಿಪಾದಿಸಲಾಗಿದೆ. ಹೀಗಾಗಿ, ವಕ್ಫ್ ಆಸ್ತಿಗಳ ಮೇಲೆ ಪ್ರಭುತ್ವದ ನಿಯಂತ್ರಣವನ್ನು ಸ್ಥಾಪಿಸಲಾಗಿದೆ. ಅದು ವರ್ಗಾವಣೆಗೆ ಕಾರಣವಾಗಬಹುದು. ವಕ್ಫ್ ಕಾಯಿದೆಯಲ್ಲಿನ ಮೂಲಭೂತ ಅಂಶಗಳ ಮೇಲೆ ದಾಳಿ ಮಾಡುತ್ತದೆ ಎಂದು ಈ ತಿದ್ದುಪಡಿ ಮಸೂದೆಯನ್ನು ಮುಸ್ಲಿಮರು ಮತ್ತು ಜಾತ್ಯತೀತ ಶಕ್ತಿಗಳು ವಿರೋಧಿಸುತ್ತಿವೆ.

ಕೇಂದ್ರ ಮಂತ್ರಿ ಕಿರಣ್ ರಿಜಿಜು ಮಸೂದೆಯನ್ನು ಮಂಡಿಸುವ ಸಂದರ್ಭದಲ್ಲಿ, ಇದು ವಕ್ಫ್ ಬೋರ್ಡ್ ಕಾಯ್ದೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಎಂದು ಹೇಳಿದ್ದಾರೆ. ಈ ರೀತಿ ಹೇಳುವ ಮೂಲಕ ಸಂಸತ್ತು ಮತ್ತು ದೇಶವನ್ನು ಹಾದಿ ತಪ್ಪಿಸುತ್ತಿದ್ದಾರೆ! ಇವೆಲ್ಲವೂ ದ್ವೇಷ ಸೃಷ್ಟಿಗಾಗಿ! ಸಮೀಪದಲ್ಲೇ ನಡೆಯಲಿರುವ ಹರ್ಯಾಣ ಮತ್ತು ಮಹಾರಾಷ್ಟ್ರ ಚುನಾವಣೆಯಲ್ಲಿ ಜನರಲ್ಲಿ ಧಾರ್ಮಿಕ ಒಡಕು ತಂದು ರಾಜಕೀಯ ಲಾಭ ಪಡೆಯಲು ಮಾಡಿದ ಒಂದು ಪ್ರಯತ್ನ ಎಂಬ ಮಾತು ವಾಸ್ತವದಿಂದ ದೂರವಿಲ್ಲ. ಬಿಜೆಪಿಯ ಏಕೈಕ ಕೆಲಸವೆಂದರೆ ಹಿಂದೂಗಳು ಮತ್ತು ಮುಸ್ಲಿಮರನ್ನು ವಿಭಜಿಸುವುದು ಮತ್ತು ಸಂವಿಧಾನವು ಮುಸ್ಲಿಮರಿಗೆ ನೀಡಿರುವ ಹಕ್ಕುಗಳನ್ನು ಕಸಿದುಕೊಳ್ಳುವುದು.

ಪ್ರತಿಪಕ್ಷಗಳ ಪ್ರತಿಭಟನೆ

ವಿಧೇಯಕಗಳನ್ನು ಮಂಡಿಸಲು ಸಚಿವರು ಸಿದ್ಧತೆ ನಡೆಸುತ್ತಿದ್ದಂತೆಯೇ ಪ್ರತಿಪಕ್ಷಗಳ ಪ್ರತಿಭಟನೆ ಆರಂಭವಾಯಿತು. ಆಯಾ ಪಕ್ಷಗಳ ಮುಖಂಡರು ತಿದ್ದುಪಡಿ ವಿಧೇಯಕವನ್ನು ಸಾರಾಸಗಟಾಗಿ ಖಂಡಿಸಿ ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಆಡಳಿತ ಪಕ್ಷಕ್ಕೆ ಅದನ್ನು ಮಂಡಿಸಲು ಸಾಧ್ಯವಾಗಲಿಲ್ಲ. ಮಸೂದೆಯನ್ನು 'ಇಂಡಿಯಾ' ವೇದಿಕೆಯಲ್ಲಿನ ಎಲ್ಲಾ ಪಕ್ಷಗಳು ಒಕ್ಕೊರಲಿನಿಂದ ವಿರೋಧಿಸಿದವು. ವೈಸಿಪಿ ಸಂಸದರು ಮಾತನಾಡುತ್ತ ಸಮಾಲೋಚನೆಯಿಲ್ಲದೆ ಈ ಮಸೂದೆಯನ್ನು ಮಂಡಿಸುವುದನ್ನು ನಾವು ವಿರೋಧಿಸುತ್ತೇವೆ ಎಂದು ಹೇಳಿದರು. ತಿದ್ದುಪಡಿ ಮಸೂದೆಯನ್ನು ಆ ಪಕ್ಷ ವಿರೋಧಿಸುತ್ತದೆಯೇ ಅಥವಾ ಸರ್ಕಾರಕ್ಕೆ ಭವಿಷ್ಯದಲ್ಲಿ ಒಪ್ಪಿಗೆ ನೀಡಲಿದೆಯೇ ಎಂಬುದು ಸ್ಪಷ್ಟವಾಗಬೇಕಿದೆ.

ಎನ್‌ಡಿಎ ಮಿತ್ರಪಕ್ಷಗಳಾದ ಜೆಡಿ(ಯು) ಮತ್ತು ಟಿಡಿಪಿ ಲೋಕಸಭೆಯಲ್ಲಿ ವಕ್ಫ್ (ತಿದ್ದುಪಡಿ) ಮಸೂದೆಯನ್ನು ಬೆಂಬಲಿಸಿದ್ದು, ಇದು ವಕ್ಫ್ ಮಂಡಳಿಯ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ತರುವ ಗುರಿಯನ್ನು ಹೊಂದಿದೆಯೇ ಹೊರತು ಮಸೀದಿಗಳ ಚಾಲನೆಯಲ್ಲಿ ಹಸ್ತಕ್ಷೇಪ ಮಾಡುವ ಪ್ರಯತ್ನವಲ್ಲ ಎಂದು ಹೇಳಿವೆ. ಎನ್.ಡಿ.ಎ. ಕೂಟದ ಜೆಡಿಎಸ್ ಪಕ್ಷ ತನ್ನ ನಿಲುವನ್ನು ಸ್ಪಷ್ಟಪಡಿಸಿದ ಬಗ್ಗೆ ವರದಿಯಾಗಿಲ್ಲ. ಜೆಡಿಎಸ್, ತೆಲುಗು ದೇಶಂ ಪಕ್ಷಗಳು ಈ ಮಸೂದೆಯನ್ನು ಬೆಂಬಲಿಸುವುದೆಂದರೆ, ಅವುಗಳ ಜಾತ್ಯತೀತ ತತ್ವಕ್ಕೆ ದ್ರೋಹ ಬಗೆದಂತಾಗುತ್ತದೆ.

ಬಿಜೆಪಿ ಈಗ ಮುಸ್ಲಿಮರ ಮೇಲೆ ದಾಳಿ ನಡೆಸುತ್ತಿದೆ. ನಂತರ ಕ್ರಿಶ್ಚಿಯನ್ನರು, ನಂತರ ಜೈನರು, ಸಿಖ್ಖರು, ಪಾರ್ಸಿಗಳು?. ಹೀಗೆ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುತ್ತಾ ಹೋಗಲು ನೋಡುತ್ತಿದ್ದಾರೆ. ಆದಾಗ್ಯೂ, ಇಂತಹ ದ್ವೇಷಪೂರಿತ ಮತ್ತು ವಿಭಜಕ ರಾಜಕೀಯವನ್ನು ಭಾರತದ ಜನರು ಎಂದಿಗೂ ಬೆಂಬಲಿಸುವುದಿಲ್ಲ. ರಾಷ್ಟ್ರೀಯ ಏಕತೆ, ಸಮಗ್ರತೆ ಮತ್ತು ಧಾರ್ಮಿಕ ಸಾಮರಸ್ಯವನ್ನು ಕಾಪಾಡಿಕೊಳ್ಳುತ್ತಾರೆ. ಅದಕ್ಕಾಗಿ ಆಳುವವರ ಕುತಂತ್ರಗಳನ್ನು ಜಾಗರೂಕತೆಯಿಂದ ಎದುರಿಸಬೇಕಿದೆ.

–ಶಿಶಿ

"ವಿಭಜಕ ರಾಜಕೀಯ" ಎಂದ ಸಿಪಿಐ(ಎಂ)

ಸಿಪಿಐ(ಎಂ) ಸಂಸದ ಅಮ್ರಾ ರಾಮ್, ಬಿಜೆಪಿ "ವಿಭಜಕ ರಾಜಕೀಯ" ಮಾಡುತ್ತದೆ ಮತ್ತು ವಕ್ಫ್ ಬೋರ್ಡ್‌ಗಳನ್ನು ಬಲಪಡಿಸುವ ಬದಲು ಅವರು ಅದರಲ್ಲಿ ಹಸ್ತಕ್ಷೇಪ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿದ್ದಾರೆ. "ಅಲ್ಪಸಂಖ್ಯಾತರಿಗೆ ಶಿಕ್ಷಣ ಮತ್ತು ಉದ್ಯೋಗವನ್ನು ಒದಗಿಸುವ ಬದಲು, ಯಾವಾಗಲೂ ಅವರ ಹಕ್ಕುಗಳ ಮೇಲೆ ಬಿಜೆಪಿಯವರು ದಾಳಿ ಮಾಡುತ್ತಾರೆ ... ಅವರು ಈ ವಿಭಜನೆಯ ವಾಕ್ಚಾತುರ್ಯವನ್ನು ಮುಂದುವರೆಸಿದರೆ, ನಾವು ಅವರಿಗೆ 2024 ರಲ್ಲಿ ಟ್ರೇಲರ್ ಅನ್ನು ತೋರಿಸಿದ್ದೇವೆ ಮತ್ತು ಈಗ ಅವರಿಗೆ ಪೂರ್ತಿ ಸಿನಿಮಾವನ್ನು ತೋರಿಸುತ್ತೇವೆ" ಎಂದು ಅವರು ಹೇಳಿದ್ದಾರೆ.

ಮತ್ತೊಬ್ಬ ಸಿಪಿಐ(ಎಂ) ಸಂಸದ ಸುದಾಮ ಪ್ರಸಾದ್, "ನೀವು ನಿರುದ್ಯೋಗವನ್ನು ಎದುರಿಸಲು ಮಸೂದೆಯನ್ನು ಏಕೆ ತರಬಾರದು? ಮಂದಿರ–ಮಸೀದಿ ಮತ್ತು ಹಿಂದೂಸ್ತಾನ್–ಪಾಕಿಸ್ತಾನ್ ಇಂತಹ ವಿಭಜಕ ಕಾರ್ಯಸೂಚಿಗಳನ್ನು ಮಾತ್ರ ಸದಾಕಾಲ ನೋಡುತ್ತಿದ್ದೀರಿ" ಎಂದು ಟೀಕಿಸಿದ್ದಾರೆ.

ಸಂಪಾದಕೀಯ

'ಹೋಮ್ ಸ್ಟೇ' ಪ್ರಕರಣದ ತೀರ್ಪು ಮರು ಪರಿಶೀಲನೆಗೆ ಸರಕಾರ ಕ್ರಮ ವಹಿಸಲಿ

ಜುಲೈ 28, 2012 ರಂದು ಮಂಗಳೂರಿನ 'ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇ'ಯಲ್ಲಿ ಹುಟ್ಟಿದ ಹಬ್ಬದ ಆಚರಣೆಯಲ್ಲಿ ತೊಡಗಿದ್ದ, 5 ಜನ ಯುವತಿಯರು ಸೇರಿದ 14 ಯುವಜನರ ಮೇಲೆ ಭಜರಂಗದಳದ ಗೂಂಡಾಗಳು ನಡೆಸಿದ ಕ್ರೂರ ದಾಳಿಗೆ ಸಂಬಂಧಿಸಿದ ಪ್ರಕರಣದ ಎಲ್ಲ 39 ಆರೋಪಿಗಳನ್ನು ಆರೋಪಮುಕ್ತಗೊಳಿಸಿದ ದ.ಕ. ಜಿಲ್ಲಾ ನ್ಯಾಯಾಲಯದ ನಿರಾಶಾದಾಯಕ ತೀರ್ಪು ಹೊರಬಿದ್ದಿದ್ದು, ಪ್ರಜಾಪ್ರಭುತ್ವವಾದಿಗಳಿಗೆ ತೀವ್ರವಾದ ಅಘಾತವನ್ನುಂಟು ಮಾಡಿದೆ.

ಯುವಜನರ ಮೇಲೆ ಅಂದು ದಾಳಿ ನಡೆಸಿದ್ದು ಸುಭಾಷ್ ಪಡೀಲ್ ನೇತೃತ್ವದ ಭಜರಂಗದಳದ ದುಷ್ಕರ್ಮಿಗಳ ತಂಡ. ಭಜರಂಗದಳದ ಜಿಲ್ಲಾ ಮುಖಂಡರಾದ ಜಗದೀಶ ಕಾರಂತರೇ ಮಾಧ್ಯಮಗೋಷ್ಠಿ ನಡೆಸಿ ಅದು ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಉದ್ದೇಶಕ್ಕಾಗಿ ನಡೆಸಲಾದ ದಾಳಿ ಎಂದು ಈ ದುಷ್ಕೃತ್ಯವನ್ನು ಸಮರ್ಥಿಸಿಕೊಂಡಿದ್ದರು. ಕರ್ನಾಟಕದ ಕರಾವಳಿಯಲ್ಲಿ ಹಿಂದುತ್ವವಾದಿ ಸಂಘಟನೆಗಳು ಭಾರತೀಯ ಸಂಸ್ಕೃತಿ, ಹಿಂದುತ್ವ, ನೈತಿಕತೆಗಳ ಹೆಸರಿನಲ್ಲಿ ಯುವಜನರ ಮೇಲೆ, ಅಲ್ಪಸಂಖ್ಯಾತರ ಮೇಲೆ ದಾಳಿಗಳನ್ನು ನಡೆಸುತ್ತಿರುವುದು ಈಗಾಗಲೇ ನಿರ್ವಿವಾದವಾಗಿ ಸಾಬೀತಾಗಿರುವ ವಿಚಾರ. ಈ ದಾಳಿಯೂ 'ಕರಾವಳಿಯಲ್ಲಿ ಗುಜರಾತ್ ಮಾದರಿ' ಜಾರಿಗೊಳಿಸುವ ಅಂತಹ ಒಂದು ದಾಳಿಯ ಭಾಗವಾಗಿತ್ತು. ಅಲ್ಲಿ ಸೇರಿದ್ದ ಯುವಜನರ ಪೈಕಿ ಒಬ್ಬ ಯುವಕ ಮುಸ್ಲಿಂ ಎಂದು ದಾಳಿಕೋರರು ಭಾವಿಸಿದ್ದರು. ಹಿಂದೂ-ಮುಸ್ಲಿಂ ಸಮುದಾಯಗಳ ಯುವಜನರು, ಜನರು ಯಾವ ಸಾಮಾಜಿಕ ಉದ್ದೇಶಗಳಿಗೂ ಒಂದೆಡೆ ಸೇರಬಾರದು, ನೆರೆಯಬಾರದು. ಅವರ ನಡುವೆ ಸ್ನೇಹ ಸಂಬಂಧಗಳು ಇರಬಾರದು ಎಂಬುದು ಸಂಘ ಪರಿವಾರದ ಈ ಸಂಘಟನೆಗಳ ಘೋಷಿತ ನೀತಿ. ಪ್ರೇಮ ವಿವಾಹಗಳನ್ನು, ಪ್ರೇಮಿಗಳ ದಿನಾಚರಣೆಯನ್ನು ವಿರೋಧಿಸಿ ಯುವಜನರ ಮೇಲೆ ಸರಣಿ ಹಲ್ಲೆಗಳನ್ನು ನಡೆಸಿರುವ ಕರಾಳ ಇತಿಹಾಸವೂ ಈ ಸಂಘಟನೆಗಳಿಗೆ ಇದೆ.

'ಹೋಮ್ ಸ್ಟೇ' ಪ್ರಕರಣದಲ್ಲಿ ಅದನ್ನೊಂದು 'ರೇವ್ ಪಾರ್ಟಿ' ಎಂದು ನಂಬಿಸಲು, ಅಲ್ಲಿದ್ದ ಯುವತಿಯರ ಬಟ್ಟೆಗಳನ್ನು ಕಿತ್ತು ಅವರು ತುಂಡುಡುಗೆ ಧರಿಸಿದ್ದರು ಎಂದು ಬಿಂಬಿಸಲು ಪ್ರಯತ್ನಿಸಲಾಗಿತ್ತು. ಯುವಕರು ಮತ್ತು ಯುವತಿಯರು ಎಲ್ಲರನ್ನೂ ಒಂದು ಕೋಣೆಗೆ ದಬ್ಬಿ ಕೂಡಿ ಹಾಕಿ ಅವರು ಸಾಮೂಹಿಕವಾಗಿ ಅನೈತಿಕ ಚಟುವಟಿಕೆಯಲ್ಲಿ ತೊಡಗಿದ್ದರು ಎಂದು ಚಿತ್ರಿಸಲು ಪ್ರಯತ್ನಿಸಲಾಗಿತ್ತು. ಈ ಪ್ರಯತ್ನದಲ್ಲಿ ದಾಳಿಕೋರರು ಯುವತಿಯರ ಮೈಮುಟ್ಟಿ ಎಳೆದಾಡುವ, ಅವರ ಬಟ್ಟೆ ಕೀಳುವ, ಯುವಕರ ಮೇಲೆ ಹಲ್ಲೆ ನಡೆಸುವ ದಾಳಿಯ ಸ್ಪಷ್ಟವಾದ ವಿಡಿಯೋಗಳು, ಫೋಟೋಗಳು ಸಾಕ್ಷ್ಯಗಳಾಗಿ ಈಗಲೂ ಉಳಿದಿವೆ. ಸಂತ್ರಸ್ತರ ಹೇಳಿಕೆಗಳು ಇವೆ. ಯುವಜನರ ದುಡ್ಡು, ಚಿನ್ನದ ಸರ, ಬಳೆ ಕಿತ್ತುಕೊಂಡಿರುವ ಗಂಭೀರ ಆರೋಪವೂ ದಾಳಿಕೋರರ ಮೇಲಿದೆ. ಇಷ್ಟಾದರೂ ಸಾಕ್ಷ್ಯಾಧಾರಗಳ ಕೊರತೆಯಿಂದ ಆರೋಪಿಗಳನ್ನು ಆರೋಪಮುಕ್ತ ಆಗಿರುವುದು ಆಶ್ಚರ್ಯಕರ ಸಂಗತಿ.

ದಾಳಿ ನಡೆದಾಗ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಧಿಕಾರದಲ್ಲಿತ್ತು. ಘಟನೆ ನಡೆದ ಮೇಲೆ ತೀವ್ರ ಪ್ರತಿಭಟನೆಗಳ ಬಳಿಕ ಆರೋಪಿಗಳನ್ನು ಬಂಧಿಸಲಾಗಿದೆಯಾದರೂ ಸಹ ಮುಂದೆ ಅಗತ್ಯ ಸಾಕ್ಷ್ಯಗಳನ್ನು ಸಂಗ್ರಹಿಸಿ ಸಮರ್ಥವಾಗಿ ನ್ಯಾಯಾಲಯದ ಮುಂದೆ ಮಂಡಿಸುವಲ್ಲಿ ಪೊಲೀಸರು 'ವಿಫಲ'ರಾಗಿರುವುದು ಇಲ್ಲಿ ಎದ್ದು ಕಾಣುತ್ತದೆ. ಆಗಿನ ಬಿಜೆಪಿ ಸರಕಾರವಂತೂ ದಾಳಿಯ ಸಾಕ್ಷಿಯಾದ ಪತ್ರಕರ್ತ ನವೀನ್ ಸೂರಿಂಜೆಯವರನ್ನೂ, ದಾಳಿಯ ದೃಶ್ಯಗಳನ್ನು ಮಾಧ್ಯಮದಲ್ಲಿ ಪ್ರಸಾರ ಮಾಡಿದ ನೆಪದಲ್ಲಿ ಬಂಧಿಸಿ ಅವರ ಮೇಲೂ ಪ್ರಕರಣ ದಾಖಲಿಸಿತ್ತು. ಮಾಧ್ಯಮಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ, ದಮನವನ್ನು ಖಂಡಿಸಿದ ಜನರ ಆಗ್ರಹವನ್ನು ನಂತರ ಬಂದ ಕಾಂಗ್ರೆಸ್ ಸರಕಾರ ಪರಿಗಣಿಸಿ ಮೊಕದ್ದಮೆಯನ್ನು ವಾಪಸ್ ಪಡೆಯಿತು. ಈ ಇಡೀ ಪ್ರಕರಣದ ವಿಚಾರಣೆಯಲ್ಲಿ ಸಂತ್ರಸ್ತರು ದಾಳಿಕಾರರನ್ನು ಗುರುತಿಸಲು ಸಾಧ್ಯವಾಗುವ 'ಆರೋಪಿಗಳ ಪೆರೇಡ್' ನಡೆಸಲಾಗಿಲ್ಲ ಎಂಬುದು ಪೊಲೀಸ್ ಇಲಾಖೆ ಹಾಗೂ ಸರಕಾರಗಳ ದಯನೀಯ ವೈಫಲ್ಯಕ್ಕೆ ಸಾಕ್ಷಿಯಾಗಿದೆ.

ಇಲ್ಲಿ ಏಳುವ ಪ್ರಶ್ನೆಯೆಂದರೆ 13 ಜನ ಸಾಕ್ಷಿಗಳಲ್ಲಿ 11 ಜನರು ಪ್ರತಿಕೂಲ ಸಾಕ್ಷಿಗಳಾಗಿ ಬದಲಾದ 'ಮರ್ಮ' ಏನು? ಸಾಕ್ಷಿಗಳಿಗೆ ಗಂಭೀರ ಬೆದರಿಕೆ ಒಡ್ಡಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ನ್ಯಾಯಾಲಯ ಇಂತಹ ಸಾಧ್ಯತೆಯನ್ನು ಪರಿಗಣಿಸಿ ಪ್ರಕರಣದ ಮರು ವಿಚಾರಣೆಗೆ ಆದೇಶಿಸಬಹುದಿತ್ತು.

ಈಗಲಾದರೂ ರಾಜ್ಯ ಸರಕಾರದ ಗೃಹ ಇಲಾಖೆ ಎಚ್ಚೆತ್ತುಕೊಳ್ಳಬೇಕು. ಮೇಲಿನ ನ್ಯಾಯಾಲಯದಲ್ಲಿ ತೀರ್ಪಿನ ಮರು ಪರಿಶೀಲನೆಗೆ ಮನವಿ ಮಾಡಬೇಕು. ಮತ್ತು ಸಾಧ್ಯವಿರುವ ಕಾನೂನಾತ್ಮಕ, ಆಡಳಿತಾತ್ಮಕ ಕ್ರಮಗಳನ್ನು ವಹಿಸಬೇಕು. ಸಮಾಜದಲ್ಲಿ ಸಾರ್ವಜನಿಕರ, ಯುವಜನರ ನಾಗರೀಕರ ಹಕ್ಕುಗಳು, ಕಾನೂನಿನ ಆಡಳಿತವನ್ನು ಖಾತ್ರಿ ಪಡಿಸಬೇಕು. ಕೋಮುವಾದಿ ದುಷ್ಕರ್ಮಿಗಳಿಗೆ ಪಾಠ ಕಲಿಸಬೇಕು. ●

ಈ ವಾರ

ಅಕ್ರಮಗಳ ಆರೋಪ-ಬೈಯ್ದಾಟ ಉತ್ತರದಾಯಿತ್ವ ಎಲ್ಲಿ?

ಎಸ್.ವೈ.ಗುರುಶಾಂತ್

ಹೊರಟಿದ್ದು 'ಮೂಡಾ' ಹಗರಣದ ನ್ಯಾಯಕ್ಕಾಗಿ. ಕೇಳುತ್ತಿದ್ದುದು ಮುಖ್ಯಮಂತ್ರಿ ಸಿದ್ಧರಾಮಯ್ಯನವರ ರಾಜಿನಾಮೆ. ಅದಕ್ಕಾಗಿ ಬೆಂಗಳೂರಿನಿಂದ ಮೈಸೂರಿಗೆ ಬಿಜೆಪಿ-ಜೆ.ಡಿ.ಎಸ್. ಪಕ್ಷಗಳ ಪಾದಯಾತ್ರೆ. ಹಿಂದೆ ಗಣಿಗಳ ಹಾರ ವಿರುದ್ಧ ಸಿದ್ಧರಾಮಯ್ಯ ಪಾದಯಾತ್ರೆ ನಡೆಸಿದ್ದರ ಮಾದರಿಯಾಗಿ. ಇದಕ್ಕೆ ಕೌಂಟರ್ ಕೊಡಲು ಆ ಹಾದಿಯುದ್ದಕ್ಕೂ ಪ್ರಮುಖ ಸ್ಥಳಗಳಲ್ಲಿ ಕಾಂಗ್ರೆಸ್ ಪಕ್ಷದ ಬಹಿರಂಗ ಸಮಾವೇಶಗಳು. ರಾಜಕೀಯ ಜಿದ್ದಾಜಿದ್ದಿ, ತಪ್ಪೇನಲ್ಲ. ಆದರೆ ವಿಷಯದ ಸತ್ಯಾಸತ್ಯಗಳನ್ನು ಸಮಚಿತ್ತದಿಂದ ವಿವರಿಸುವ ಬದಲು ಬಾಯಿಗೆ ಬಂದಂತೆ ಹೀನಾಯ ಬೈಯ್ದಾಟ, ಕಿರುಚಾಟಗಳದ್ದೇ ಅಬ್ಬರ!

ಈ 'ಯಾತ್ರೆ'ಗಳು ಮೈಸೂರು ತಲುಪಿವೆ. 2024 ಆಗಸ್ಟ್ 9 ರಂದು ಮೈಸೂರಿನಲ್ಲಿ ಕಾಂಗ್ರೆಸ್ ಸಮಾರೋಪದ ಸಮಾವೇಶ ನಡೆಸಿತು. 10 ರಂದು ಬಿಜೆಪಿ-ಜೆ.ಡಿ.ಎಸ್. ಪಕ್ಷಗಳ ಪಾದಯಾತ್ರೆ ಸಮಾರೋಪ.

ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಪರ್ಯಾಯವಾಗಿ 14 ನಿವೇಶನಗಳನ್ನು ಮೂಡಾವೇ ನಿಯಮಬದ್ಧವಾಗಿ ನೀಡಿದೆ ಎಂಬ ಸಮಜಾಯಿಷಿ ಸಿದ್ದರಾಮಯ್ಯನವರಿಂದ. ನಿವೇಶನ ನೀಡಿರುವುದು ತಪ್ಪು ಎಂದಾದಲ್ಲಿ ಅವುಗಳನ್ನು ವಾಪಸು ಪಡೆದುಕೊಳ್ಳಲಿ ಎನ್ನುತ್ತಾರೆ ಅವರು. ಇಲ್ಲದ ಹಗರಣವನ್ನು ಬಿಜೆಪಿ ಜೆಡಿಎಸ್‌ಗಳು ಸೃಷ್ಟಿಸಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹೊರಟಿದ್ದಾರೆ. ತಾನು ಜಗ್ಗುವುದಿಲ್ಲ ಎಂದು ಮೈಸೂರಿನ ಸಮಾವೇಶದಲ್ಲಿ ಘೋಷಿಸಿದ್ದಾರೆ. ಹಾಗೇ ಹಿಂದುಳಿದ ವರ್ಗದಿಂದ ಬಂದ ತಮ್ಮಂತಹವರನ್ನು ಸಹಿಸೋದಿಲ್ಲ ಎಂಬ ಟೀಕೆಯನ್ನೂ ಮಾಡಿದ್ದಾರೆ. ಇದರ ಪೂರ್ವಪಾದಿಯಾಗಿ 'ಅಹಿಂದ' ಜಾತಿ ಸಂಘಟನೆಗಳ ವೇದಿಕೆ ಅವರ ನೆರವಿಗೆ ಧಾವಿಸಿದೆ. ಮೈಸೂರಿನಲ್ಲಿ ಕಾಂಗ್ರೆಸ್ ನಡೆಸಿದ ಸಮಾವೇಶ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಉತ್ತರವಾಗಿ ಮತ್ತು ಹಣಾಹಣಿಗೆ ಸಿದ್ಧವಿದ್ದೇವೆ ಎನ್ನುವ ಸಂದೇಶವನ್ನು ಕೊಟ್ಟಿದೆ.

ಈ ಪ್ರಕರಣ ರಾಜಕೀಯ ಸ್ವರೂಪ ಪಡೆಯಲು ಕಾಂಗ್ರೆಸ್ ಒಳಗಿನ ಅಧಿಕಾರ ಬಯಸಿರುವ ಗುಂಪಿನ ಪಾತ್ರವಿದೆ, ನಾಯಕತ್ವದಲ್ಲಿಯೇ ಒಡಕಿದೆ ಎಂಬ ಆರೋಪಗಳನ್ನು ನಿರಾಕರಿಸಲೋ ಎಂಬಂತೆ ಬಹಿರಂಗದಲ್ಲಿ ಎಲ್ಲರೂ ಒಂದಾಗಿ ನಿಂತಿದ್ದಾರೆ, ಸಿ.ಎಂ. ಬೆನ್ನಿಗಿರುವುದನ್ನು ಘೋಷಿಸಿದ್ದಾರೆ. ಇಂತಹ ಆರೋಪ ಮಾಡಿದ ಕೇಂದ್ರ ಸಚಿವ ಕುಮಾರಸ್ವಾಮಿ ಒಳಸಂಚಿನಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಇರುವುದಾಗಿ ಹೆಸರನ್ನೇ ಹಿಡಿದು ನೇರವಾಗಿ ಪ್ರಸ್ತಾಪಿಸಿದ್ದಾರೆ. ಇದರ ವಿರುದ್ಧ ಡಿಕೆಶಿಯೂ ಹರಿಹಾಯ್ದಿದ್ದಾರೆ. ಬಿಜೆಪಿ-ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ನಾಯಕರ ಆರೋಪಗಳು ಸೌಜನ್ಯದ ಎಲ್ಲೆಗಳನ್ನೂ ಮೀರಿ ವ್ಯಕ್ತಿಗತ ನಿಂದನೆ, ನಪುಂಪಕತೆ, ಗಂಡಸ್ಥನಗಳಂತಹ ಅಸಹ್ಯಕರ ಟೀಕೆಗಳಿಗೂ ಎಳಸಿವೆ.

ಈ ಬಹಿರಂಗ ಬೈದಾಟಗಳಲ್ಲಿ ಸಾರ್ವಜನಿಕರಿಗೆ ಇವರಾರೂ ತಿಳಿಸದೆ ಹೋದ ಅನೇಕ ಸಂಗತಿಗಳು ಬಯಲಿಗೆ ಬಂದಿವೆ. ಅಧಿಕಾರದಲ್ಲಿ ಹಲವು ದಶಕಗಳಿಂದಲೂ ಬೇರೂರಿರುವ ಈ ಮಹಾನಾಯಕರು ನಡೆಸಿದ ಭಾರಿ ಭ್ರಷ್ಟಾಚಾರ ಮತ್ತು ಮಾಡಿರುವ ಆಸ್ತಿಗಳ ಕುರಿತಾದಂತೆ ಮಾಹಿತಿಗಳು ಪುಂಖಾನು ಪುಂಖವಾಗಿ ಸಾರ್ವಜನಿಕರ ಎದುರು ತೆರೆದಿವೆ. ಕನಕಪುರದ ಟೆಂಟ್ ಚಿತ್ರಮಂದಿರದಲ್ಲಿ ಸಿನಿಮಾ ತೋರಿಸುತ್ತಿದ್ದ ಶಿವಕುಮಾರ್ ಲಕ್ಷಾಂತರ ಕೋಟಿಗಳ ಒಡೆಯನಾಗಿರುವುದು ಹೇಗೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರೆ, ಹರದನಹಳ್ಳಿಯಲ್ಲಿದ್ದ ದೇವೇಗೌಡರ ಕುಟುಂಬ ಹತ್ತಾರು ಸಾವಿರ ಕೋಟಿ ರೂಪಾಯಿಗಳ ಆಸ್ತಿ ಗಳಿಸಿದ್ದು ಹೇಗೆ ಎಂದು ಡಿಕೆಶಿ ಅವರು ಪ್ರಶ್ನಿಸಿದ್ದಾರೆ. ಇಂತಹ ಆರೋಪ ಪ್ರತ್ಯಾರೋಪಗಳು ತಾರಕ್ಕೇರಿ ಬಿಜೆಪಿಯ ಯಡಿಯೂರಪ್ಪ, ವಿಜಯೇಂದ್ರ, ವಿರೋಧಪಕ್ಷದ ನಾಯಕ ಆರ್. ಅಶೋಕ್ ಅಶ್ವಥನಾರಾಯಣ, ಮುಂತಾದವರು ನಡೆಸಿದ ಭಾರಿ ಭ್ರಷ್ಟಾಚಾರದ ವಿವರಗಳು ಒಂದೊಂದಾಗಿ ಬಿಚ್ಚಿಕೊಂಡಿವೆ. ಈ ನಾಯಕರು ಅಕ್ರಮವಾಗಿ ಗಳಿಸಿರುವ ಹಣದ ಆಸ್ತಿಯ ವಿವರಗಳು ಈ ಮೂಲಕವಾದರೂ ಸಾರ್ವಜನಿಕರಿಗೆ ಗೊತ್ತಾಗಿದ್ದೆ ವಿಶೇಷ. ಒಬ್ಬರು ಮತ್ತೊಬ್ಬರ ಗಂಟು ಬಿಚ್ಚುತ್ತಾ ಒಂದಿಷ್ಟಾದರೂ ಕರಾಳ ಸತ್ಯ ಕಂಡಿದ್ದು ಆಸಕ್ತಿದಾಯಕ. ಇಂಥ ಅಕ್ರಮ ಹಗರಣಗಳನ್ನು ಅವರು ಬಲ್ಲಷ್ಟು ನಿಖರವಾಗಿ ಬೇರೆ ಯಾರು ಬಲ್ಲರು? ಮಾತ್ರವಲ್ಲ ಒಬ್ಬೊಬ್ಬರು ಒಂದೊಂದು ಕಾಲದಲ್ಲಿ ಅಧಿಕಾರ ದಲ್ಲಿರುವಾಗ ಅವರವರನ್ನು ರಕ್ಷಿಸಿಕೊಳ್ಳಲು ಮಾಡಿಕೊಂಡಿರುವ ಒಪ್ಪಂದಗಳು ಅವರಿಗೇ ಗೊತ್ತು. 'ನೀ ನನಗಿದ್ದರೆ ನಾ ನಿನಗೆ' ಎಂಬ ಒಳ ಒಪ್ಪಂದದ ಸಂಯೋಜನೆಯಲ್ಲಿದ್ದ ನಾಯಕರು ಇದೀಗ ಪೂರ್ಣ ಸತ್ಯ ಅಲ್ಲದಿದ್ದರೂ ಸ್ವಲ್ಪವಾದರೂ ಸತ್ಯಗಳನ್ನು ಹೊರಗೆ ಹಾಕುತ್ತಿದ್ದಾರೆ. ಆದರೆ ಪ್ರಶ್ನೆಯೆಂದರೆ ಇಂತಹ ಭಾರಿ ಅಕ್ರಮಗಳ ಮೂಲಕ ಆಸ್ತಿ ಮಾಡಿರುವ ವಿಷಯಗಳು ಗಾಳಿಯಲ್ಲಿ ತೇಲುತ್ತಿವೆಯೇ ಹೊರತು ಅಕ್ರಮ ಎಂದಾದಲ್ಲಿ ಇವುಗಳ ತನಿಖೆಯನ್ನು ನಡೆಸುವುದು ಮತ್ತು ಪುಟ 6 ಕ್ಕೆ



ಕಾಂ. ಭೀಮಶಿ ಕಲಾದಗಿ ಕಣ್ಮರೆಯಾದರು, ಅವರಿಗೆ ಕೆಂಪು ವಂದನೆಗಳು





ಅಣ್ಣಾರಾಯ ಈಳಗೇರ

ಛಲಗಾರ! ಹಟವಾದಿ! ಜಿಗುಟುತನದ ಹೋರಾಟಗಾರ ಬರಗಾಲ ಭೀಮಶಿ, ಬರೀಗಾಲ ಭೀಮಶಿ, ಬಿಜಾಪುರದ ಗಾಂಧಿ ಎಂದು ನಾಡಿನಾದ್ಯಂತ ಖ್ಯಾತರಾಗಿದ್ದ ಕಾಂಮ್ರೇಡ್ ಭೀಮಶಿ ಕಲಾದಗಿಯವರು ಇನ್ನಿಲ್ಲ. ಅವರು ವಯೋಸಹಜ ಕಾಯಿಲೆಯಿಂದ ಇದೆ (2024) ಅಗಸ್ಟ್ 5ರ ರಾತ್ರಿ ನಿಧನರಾದರು. ಅತ್ಯಂತ ಸರಳ ಜೀವನ ಅಳವಡಿಸಿಕೊಂಡಿದ್ದ ಅವರು ನೇರನುಡಿಯ ಬಿಜಾಪುರದ ಅಪ್ಪಟ ಗ್ರಾಮೀಣ ಕನ್ನಡದ ಜವಾರಿ ಭಾಷಣಕಾರ. ಎಲ್ಲರನ್ನು ನಗು ಮೊಗದಿಂದ ಮತನಾಡಿಸುವ ಎಲ್ಲರ ಆತ್ಮೀಯ ಅಜ್ಜೊರು ಎನಿಸಿಕೊಂಡಿದ್ದ ಭೀಮಶಿ ಕಲಾದಗಿಯವರು ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆ ದೌರ್ಜನ್ಯಗಳ ಸುದ್ದಿ ತಮ್ಮ ಕಿವಿಗೆ ಬಿದ್ದರೆ ಸಿಡಿಲ ಮರಿಯಂತಾಗಿ ಅಬ್ಬರಿಸುತ್ತಿದರು. ಕಳೆದ ನಾಲ್ಕೈದು ದಶಕಗಳಿಂದ ಜಿಲ್ಲೆಯಲ್ಲಿ ನಿರಂತರ ರೈತರು ಹಾಗೂ ಕಾರ್ಮಿಕರಿಗಾಗಿ, ಶೋಷಿತರಿಗಾಗಿ ಹೋರಾಟ ನಡೆಸಿದ ಭೀಮಶಿ ಕಲಾದಗಿಯವರು ಕಳೆದ ಒಂದು ತಿಂಗಳಿಂದ ತೀವ್ರ ಅನಾರೋಗ್ಯ ಪೀಡಿತರಾಗಿದ್ದರು. ಮರುದಿನ ಬೆಳಿಗ್ಗೆ ಭೀಮಸಿಯವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಜಿಲ್ಲೆಯ ಜನ ತಂಡೋಪ ತಂಡವಾಗಿ ಬರತೊಡಗಿದರು. ಶೋಕತಪ್ತರಾಗಿದ್ದ ಜನ ಭೀಮಶಿ ಕಲಾದಗಿಯವರ ಪಾರ್ಥಿವ ಶರೀರದ ಮುಂದೆ ಕಣ್ಣೀರು ಸುರಿಸಿದರು. ಅವರ ಅಂತಿಮ ದರ್ಶನಕ್ಕೆ ನಗರದಲ್ಲಿ ಎರಡು ಕಡೆಗೆ ವ್ಯವಸ್ಥೆ ಮಾಡಲಾಗಿತ್ತು.

ಅವರ ಸ್ವಗೃಹದ ಮುಂದೆ ಹಾಗೂ ಇಂಡಿ ರೋಡ ಎಪಿಎಂಸಿ ಆವರಣದ ಪ್ರಾಂತ ರೈತ ಸಂಘದ ಕಾರ್ಯಾಲಯದಲ್ಲಿ ಮಂಟಪ ಹಾಕಲಾಗಿತ್ತು. ಮದ್ಯಾಹ್ನ ಒಂದೂವರೆ ಗಂಟೆಗೆ ಅವರ ಮನೆಯಿಂದ ಪಾರ್ಥಿವ ಶರೀರದ ಮೆರವಣಿಗೆ ಹೊರಡಿಸಿ, ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು, ರೈತ ಸಂಘದ ಕಛೇರಿಯ ಮುಂದೆ ಹಾಕಿದ ಮಂಟಪದಲ್ಲಿ ಪಾರ್ಥಿವ ಶರೀರವನ್ನು ಇಡಲಾಯಿತು. ನಂತರ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾದ ಯು.ಬಸವರಾಜ, ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕೆ.ನೀಲಾ, ಕೊಪ್ಪಳದ ಜಿ.ನಾಗರಾಜ, ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಗೇರ ಅವರು ಭೀಮಶಿ ಕಲಾದಗಿಯವರ ಪಾರ್ಥಿವ ಶರೀರಕ್ಕೆ ಪಕ್ಷದ ಕೆಂಪು ಧ್ವಜವನ್ನು ಹೊದಿಸಿ ಮಾಲಾರ್ಪಣೆ ಮಾಡುವ ಮೂಲಕ ಗೌರವ ಅರ್ಪಣೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಸೋಮಲಿಂಗ ಗೆಣ್ಣೂರ ಅವರು ಪಾರ್ಥಿವ ಶರೀರಕ್ಕೆ ಮಾಲಾರ್ಪಣೆ ಮಾಡಿ ಕರ್ನಾಟಕ ಸರಕಾರದ ಆದೇಶ ಪತ್ರವನ್ನು ಓದಿ ಹೇಳಿ, ಭೀಮಶಿ ಕಲಾದಗಿಯವರ ಅಂತ್ಯ ಸಂಸ್ಕಾರವನ್ನು ಸರಕಾರದ ಸಕಲ ಗೌರವದೊಂದಿಗೆ ಮಾಡಲಾಗುವುದು ಎಂದು ಹೇಳಿದರು.

ಸಚಿವ ಶಿವಾನಂದ ಪಾಟೀಲ ಅವರಿಂದ ಶ್ರದ್ಧಾಂಜಲಿ

ಇದಕ್ಕೂ ಮೊದಲು ಕಾಂ. ಭಿಮಶಿ ಕಲಾದಗಿಯವರ ಮನೆಯ ಮುಂದೆ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಸಕ್ಕರೆ ಹಾಗೂ ಒಕ್ಕಲುತನ ಹುಟ್ಟುವಳಿ ಮಾರುಕಟ್ಟೆಯ ಸಚಿವರಾದ ಶಿವಾನಂದ ಪಾಟಿಲ ಅವರು ಭೀಮಶಿಯವರ ಪಾರ್ಥಿವ ಶರೀರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡುತ್ತ, ಜಿಲ್ಲೆಯ ಸಮಗ್ರ ನೀರಾವರಿಗೆ ನಡೆಸಿದ ಭಿಮಶಿಯವರ ಹೋರಾಟವನ್ನು ನೆನಪಿಸಿದರು. ಮುಳವಾಡ ಏತ ನೀರಾವರಿ, ಭೀಮಾ ನದಿ ಬಾಂದಾರ ಯೋಜನೆ, ಕೆರೆಗೆ ನೀರು ತುಂಬುವ ಯೋಜನೆ ಮುಂತಾದ ನೀರಾವರಿಗಾಗಿ ಹೋರಾಟ ನಡೆಸಿದ ಭೀಮಶಿಯವರ ಹೋರಾಟದ ಗುಣಗಾನ ಮಾಡಿದ ಅವರು, ಜಿಲ್ಲೆಯ ರೈತರು ಈ ನೀರಾವರಿಯಿಂದಾಗಿ ನಾಲ್ಕು ಚೀಲ ಧಾನ್ಯ ಹೆಚ್ಚಿಗೆ ಬೆಳೆಯುತ್ತಿದ್ದರೆ ಅದು ಭೀಮಶಿಯವರ ಹೋರಾಟದ ಕೊಡುಗೆ ಎಂದರೆ ತಪ್ಪಾಗಲಿಕ್ಕಿಲ್ಲ ಎಂದರು.

ಮುಳವಾಡ ಏತ ನೀರಾವರಿ ಕಾಲುವೆಯ ಮೊದಲ ಹಂತದ ಯೋಜನೆಯ ನೀರು ಹರಿಸುವ ಕಾರ್ಯಕ್ರಮದ ಉದ್ಘಾಟನೆಗೆ ಭೀಮಶಿ ಕಲಾದಗಿಯವರೆ ಯೋಗ್ಯರೆಂದು, ಅವರಿಂದ ಉದ್ಘಾಟನೆಯನ್ನು ಮಾಡಿಸಿದೆ ಎಂದ ಅವರು, ಕೃಷ್ಣಾ ಯೋಜನೆಯ ಒಂದು ಕಾಲುವೆಗೆ ಅವರ ಹೆಸರು ಇಡಲಾಗುವುದು ಎಂದರು. 'ಮುಳುವಾಡ ಏತ ನೀರಾವರಿಯ ಯೋಜನೆಯ ಕನಸು ಈಡೇರಿದೆಯಲ್ಲ, ಬರಿಗಾಲಿನಿಂದ ನಡೆಯುವುದು ನಿಲ್ಲಿಸಬೇಕು' ಎಂದು ಭೀಮಶಿ ಕಲಾದಗಿಯವರ ಕಾಲಿಗೆ ಚಪ್ಪಲಿ ತೊಡಸಲು ಮುಂದಾದೆ. ಆದರೆ ಅವರು ಜಿಲ್ಲೆಯ ಸಮಗ್ರ ನೀರಾವರಿ ಆಗಿರುವದಿಲ್ಲವೆಂದು ಚಪ್ಪಲಿ ಧರಿಸುವದನ್ನು ನಯವಾಗಿ ನಿರಾಕರಿಸಿದರು' ಎಂದರು.

ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ನಾಯಕರಾದ ಭೀಮಾತೀರದ ನೀರಾವರಿ ಹೋರಾಟಗಾರ ಪಂಚಪ್ಪ ಕಲಬುರಗಿ, ಸಿಂದಗಿಯ ಶಾಸಕರಾದ ಅಶೋಕ ಮನಗೂಳಿ ಜನತಾ ದಳ(ಜ್ಯಾ)ದ ನಾಯಕ ಬಿಡಿ ಪಾಟೀಲ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೂ ಜೆಡಿಎಸ್ ಜಿಲ್ಲಾ ಮುಖಂಡರೂ ಆದ ಮಲ್ಲಿಕಾರ್ಜುನ ಯಂಡಿಗೇರಿ ಹಾಗೂ ಡಾ.ರಿಯಾಜ ಫರೂಖಿ, ಬಿಜೆಪಿಯ ಮುಖಂಡ ಹಾಗೂ ಮಾಜಿ ಸಚಿವರಾದ ಅಪ್ಪು ಪಟ್ಟಣಸೆಟ್ಟಿ, ಜೆಡಿಎಸ್ ನ ಮಾಜಿ ಶಾಸಕ ದೇವಾನಂದ ಚವ್ಹಾಣ, ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಎಸ್.ಎಂ. ಪಾಟೀಲ, ಗಣಸಂಸ್ಥೆಯ ಕಾಂಗ್ರೆಸ್‌ನ ಮಾಜಿ ಶಾಸಕ ಹಮೀದ್ ಮುಶ್ರಫ್, ಮಹಾನಗರ ಪಾಲಿಕೆಯ ಮಾಜಿ ಅಧ್ಯಕ್ಷ ಅಬ್ದುಲ್ ರಜ್ಜಾಕ ಹೋರ್ತಿ, ಎಸ್.ಯು.ಸಿ.ಐ. ಜಿಲ್ಲಾ ಕಾರ್ಯದರ್ಶಿ ಬಿ.ಭಗವಾನರೆಡ್ಡಿ, ಮಲ್ಲಿಕಾರ್ಜುನ ಎಚ್.ಟಿ., ಭರತ ಕುಮಾರ್, ಅನೌಪಚಾರಿಕ ಶಿಕ್ಷಣ ಸಂಸ್ಥೆಯ ಫಾಧರ್, ಪಿಟರ್ ಅಲೆಕ್ಸಾಂಡರ್, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಜಿಲ್ಲಾ ಅಧ್ಯಕ್ಷ ಸಂಗಮೇಶ ಸಗರ, ಅಖಂಡ ಕರ್ನಾಟಕದ ಜಿಲ್ಲಾ ಕಾರ್ಯದರ್ಶಿ ಅರವಿಂದ ಕುಲಕರ್ಣಿ, ಮಾಜಿ ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಶ್ರೀಧರ್ ಕುಲಕರ್ಣಿ ಹಾಗೂ ಭೀಮನಗೌಡ ಪಾಟೀಲ, ರಾಜ್ಯ ಸರಕಾರಿ ನೌಕರರ ಒಕ್ಕೂಟದ ಜಿಲ್ಲಾ ಅಧ್ಯಕ್ಷ ಚಂದ್ರಶೇಖರ್ ಲೆಂಡಿ, ಕಾರ್ಯದರ್ಶಿ ಸುರೇಶ ಜಿ.ಬಿ. ಹಾಗೂ ಆರ್.ಎಸ್. ಮೆಣಸಗಿ, ಗ್ರಾಮಿಣ ಬ್ಯಾಂಕ್ ನೌಕರರ ಸಂಘದ ಕೇಂದ್ರ ಸಮಿತಿ ಕಾರ್ಯದರ್ಶಿ ಜಿ.ಜಿ. ಗಾಂಧಿ, ಡಿ.ವೈ. ಎಫ್.ಐ. ನ ಮಾಜಿ ಜಿಲ್ಲಾ ಸಂಚಾಲಕ ಬಸಲಿಂಗ ಕಪಾಳಿ, ಹಾಲಿ ರಾಜ್ಯ ಸಮಿತಿ ಸದಸ್ಯ ರಮೇಶ ತಳವಾರ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ, ಗ್ರಾಮ ಪಂಚಾಯತ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಅಯ್ಯನಗೌಡ ಬಿರಾದಾರ, ಕಾರ್ಯದರ್ಶಿ ಚಂದ್ರಶೇಖರ ವಾಲಿಕಾರ, ಖಜಾಂಜಿ ಲಾಲಾಹ್ಮದ ಶೇಕ, ಎಂ.ಕೆ. ಚಳ್ಳಗಿ, ಎಸ್.ಎಸ್. ಕೊಂಡಗೂಳಿ, ಮುರಗೇಂದ್ರ ಹುಣಶ್ಯಾಳ, ಮುದ್ದೇಬಿಹಾಳದ ಅಬ್ದುಲ್ ತಮದಡ್ಡಿ, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಗೌರವ ಅಧ್ಯಕ್ಷೆ ಸರಸ್ವತಿ ಮಠ, ಕಾರ್ಯದರ್ಶಿ ಪ್ರತಿಭಾ ಕುರುಡೆ ಅಶ್ವಿನಿ ತಳವಾರ, ಶೋಭಾ ಕಬಾಡೆ, ಬಿಸಿ ಊಟ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಕಾಳಮ್ಮ ಬಡಿಗೇರ, ಬಿಸ್ಮಿಲ್ಲಾ ಇನಾಮದಾರ, ಜಯಶ್ರೀ ಪಾರತನಳ್ಳಿ, ಸುಮಂಗಲಾ ಆನಂದ ಸೆಟ್ಟಿ, ಸುರೇಖಾ ವಾಗಮೋರೆ, ರೇಣುಕಾ ಸುಣಗಾರ, ಜನವಾದಿ ಮಹಿಳಾ ಸಂಘದ ಜಿಲ್ಲಾ ಅಧ್ಯಕ್ಷ ಅನಸೂಯಾ ಹಜೇರಿ, ಸೊನಾಬಾಯಿ ಬ್ಯಾಳಿ ಸಾಯೆಬ್ಬಿ ಶೇಖ, ಸುಮಿತ್ರಾ ಗೋಣಸಗಿ ಮುಂತಾದ ಮುಖಂಡರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಂತಿಮ ನಮನಗಳು ಸಲ್ಲಿಸಿದರು.

ನಂತರ ಇಂಡಿ ತಾಲೂಕಿನ ಹಂಜಗಿ ಗ್ರಾಮದ ಭೀಮಶಿ ಕಲಾದಗಿ ಯವರ ತೋಟದಲ್ಲಿ ಅವರ ಅಂತ್ಯ ಸಂಸ್ಕಾರವು ಸರಕಾರಿ ಸಕಲ ಗೌರವ ದೊಂದಿಗೆ ಹಾಗೂ ಕ್ರಾಂತಿಕಾರಿ ಘೋಷಣೆಯೊಂದಿಗೆ ಸಂಜೆ ಆರು ಘಂಟೆಗೆ ನಡೆಯಿತು.

●



ಕೈಗಾರಿಕೆಗೆ ಭೂಸ್ವಾಧೀನ: 596 ದಿನಗಳ ರೈತರ ಹೋರಾಟ ಬೆಂಬಲಿಸಿ ಕುಡಿತಿನಿ ಸ್ವಯಂ ಪ್ರೇರಿತ ಹರತಾಳ: ಬಂದ್ ಸಂಪೂರ್ಣ ಯಶಸ್ವಿ

ಬಳ್ಳಾರಿ ಜಿಲ್ಲೆಯ ಕುಡಿತಿನಿ ಪಟ್ಟಣ ಪಂಚಾಯತ್ ಸುತ್ತಲೂ ಇರುವ ಹರಗಣಿಡೋಣಿ, ಜಾನೇಕುಂಟೆ, ವೇಣಿವೀರಾಪುರ, ಕೊಳಗಲ್ಲು, ಯರಂಗಳಿ, ಸಿದ್ದಮ್ಮನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ಇರುವ ಕೃಷಿ, ಅರೆ ಕೃಷಿ ಭೂಮಿಗಳನ್ನು ಉದ್ದೇಶಿತ ಬೃಹತ್ ಕೈಗಾರಿಕೆಗಳ ಸ್ಥಾಪನೆ ಮಾಡಲು 1) ಆರ್ಷಲ್ ಮಿತ್ತಲ್ ಪ್ರೈವೇಟ್ ಲಿಮಿಟೆಡ್, 2) ಉತ್ತಮ್ ಗಾಲ್ವಾ ಫೇರೋಸ್ ಲಿಮಿಟೆಡ್ (ಬ್ರಾಹ್ಮಣಿ), 3) ಏನ್.ಎಂ.ಡಿ.ಸಿ. ಈ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲು ಭೂಮಿಯನ್ನು ಸ್ವಾಧೀನಪಡಿಸಿಕೊಂಡು 14 ವರ್ಷಗಳು ಕಳೆದಿವೆ. ರೈತರ ಭೂಮಿಯನ್ನು ರಾಜ್ಯ ಸರ್ಕಾರದ ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾಸ್ ಡೆವಲಪ್ಮೆಂಟ್ ಭೋರ್ಡ್ (ಕೆಐಎಡಿಬಿ) ಮುಖಾಂತರ ಮೋಸದ ಭೂ ಬೆಲೆ ನೀಡಿ ಬಲವಂತವಾಗಿ ಭೂಮಿಯನ್ನು ವಶಪಡಿಸಿಕೊಂಡಿದ್ದಾರೆ. ಆರ್ಷಲ್ ಮಿತ್ತಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರು ಒಂದು ಎಕರೆಗೆ 8 ಲಕ್ಷ, 12 ಲಕ್ಷ, ಬ್ರಾಹ್ಮಣಿ ಕಾರ್ಖಾನೆಗಾಗಿ ರೂ.5 ಲಕ್ಷ, ಎನ್.ಎಂ.ಡಿ.ಸಿ. ಕಾರ್ಖಾನೆಗಾಗಿ 8 ಲಕ್ಷ 16 ಲಕ್ಷ, ಎನ್.ಎ. ಗಾಗಿ 42 ಲಕ್ಷ ಭೂ ಬೆಲೆ ನೀಡಿ ಭೂಮಿಯನ್ನು ವಶಪಡಿಸಿಕೊಂಡಿದ್ದಾರೆ. ಅಂದು ರೈತರ ವಿರೋಧದ ನಡುವೆಯೂ ಬಲವಂತವಾಗಿ ಭೂ ಸ್ವಾಧೀನವನ್ನು ಮಾಡಲಾಯಿತು. ಮೋಸದ ಭೂ ಬೆಲೆಯನ್ನು ವಿರೋಧಿಸಿ ಅಂದಿನಿಂದ ಹಲವು ಹೋರಾಟಗಳು ನಡೆದಿವೆ. ಪ್ರತಿಭಟನೆಗಳು, ರಸ್ತೆ ಬಂದ್, ಕುಡಿತಿನಿಯಿಂದ ಬಳ್ಳಾರಿಗೆ ಪಾದಯಾತ್ರೆ ಮತ್ತು ಬೆಂಗಳೂರುವರಗೆ ಪಾದಯಾತ್ರೆಗಳನ್ನು ಕಳೆದ 10 ವರ್ಷಗಳ ಹಿಂದೆ ಭೂ ಸಂತ್ರಸ್ತ ಹೋರಾಟ ಸಮಿತಿಯಿಂದ ನಡೆಸಲಾಗಿದೆ.

ಜೆ.ಸತ್ಯಬಾಬು

ರೈತರಿಗೆ 5 ಲಕ್ಷ ಕೊಟ್ಟು 16 ಲಕ್ಷಕ್ಕೆ ಮಾರಿದರು

ಮುಖ್ಯವಾಗಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಈ ಹೋರಾಟಗಳು ನಡೆದಿವೆ. ಬಿಜೆಪಿ ಸರ್ಕಾರ ಆಡಳಿತದಲ್ಲಿದ್ದಾಗ ಯಡಿಯೂರಪ್ಪ ಮುಖ್ಯಮಂತ್ರಿ, ಕೈಗಾರಿಕಾ ಮಂತ್ರಿ ಮುರಗೇಶ್ ನಿರಾಣಿ ಅವರು ಕೇವಲ ಭರವಸೆಗಳನ್ನು ನೀಡಿದ್ದು ಇಲ್ಲಿಯವರೆಗೂ ಯಾವುದೇ ಭರವಸೆ ಈಡೇರಲಿಲ್ಲ, ಅಂದು 'ಬಳ್ಳಾರಿ ರಿಪಬ್ಲಿಕ್' ಗಾಲಿ ರೆಡ್ಡಿಗಳ ಬ್ರಾಹ್ಮಣಿ ಇಂಡಸ್ಟ್ರಿ ಹೆಸರಿನಲ್ಲಿ ಗಾಲಿ ಜನಾರ್ಧನರೆಡ್ಡಿ ಅವರು ರೈತರಿಗೆ ಒಂದು ಎಕರೆಗೆ 5 ಲಕ್ಷ ರೂ. ಪರಿಹಾರ ನೀಡಿ ಭೂಮಿ ವಶಪಡಿಸಿಕೊಂಡಿದ್ದು, 5 ವರ್ಷಗಳ ನಂತರ ಉತ್ತಮ್ ಗಾಲ್ವಾ ಫೇರೋಸ್ ಲಿಮಿಟೆಡ್ ಕಂಪನಿಗೆ ಒಂದು ಎಕರೆಗೆ ರೂ. 16 ಲಕ್ಷಕ್ಕೆ ಮಾರಾಟ ಮಾಡಿದರು. ಹೀಗೆ ರೈತರನ್ನು ತೀವ್ರವಾಗಿ ವಂಚನೆ ಮಾಡಲಾಯಿತು. ತಮ್ಮ ಭೂಮಿಯನ್ನು ಕಡಿಮೆ ಭೂ ಬೆಲೆಗೆ ನೀಡಲು ವಿರೋಧಿಸಿ ನ್ಯಾಯವಾದ ಭೂ ಬೆಲೆಗಾಗಿ ಬಳ್ಳಾರಿ ನ್ಯಾಯಾಲಯದಲ್ಲಿ ರೈತರು ದಾವಾ ಹಾಕಿದ್ದಾರೆ. ನ್ಯಾಯಾಲಯ ರೈತರ ಪರವಾದ ತೀರ್ಪು ನೀಡಿತು. ಒಂದು ಎಕರೆಗೆ ರೂ 30,20,204 ಬೆಲೆಯನ್ನು ನೀಡಲು ತೀರ್ಪು ನೀಡಿತು. ದೇಶದ ಸರ್ವೋಚ್ಚ ನ್ಯಾಯಾಲಯವು ಜಿಲ್ಲಾ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದಿದೆ.



ಸರ್ವೋಚ್ಚ ನ್ಯಾಯಲಯದ ತೀರ್ಪಿನಂತೆ ಎಲ್ಲಾ ರೈತರಿಗೆ ಭೂ ಪರಿಹಾರ ನೀಡಬೇಕು ಮತ್ತು ಅದಕ್ಕೆ ಶೇ.30 ಸಲ್ಯೂಷನ್ ಸೇರಿಸಿ ಬಡ್ಡಿ ಸಮೇತ ರೈತರಿಗೆ ನೀಡಬೇಕೆಂದು ಅಂತಿಮ ತೀರ್ಪು ನೀಡಿದೆ.

596 ದಿನಗಳಿಂದ ಧರಣಿ ಹೋರಾಟ

ಸಿಪಿಐ(ಎಂ) ಪಕ್ಷದ ಬಳ್ಳಾರಿ ಜಿಲ್ಲಾ ಸಮಿತಿಯು ಅಧ್ಯಯನ ಮಾಡಿ ಚರ್ಚಿಸಿ, ಆ ಭಾಗದಲ್ಲಿ ರೈತರ ಪರ ಮದ್ಯಪ್ರವೇಶ ಮಾಡಲು ತೀರ್ಮಾನಮಾಡಿತು. ಹೋರಾಟದ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು), ಭೂ ಸಂತ್ರಸ್ತ ಹೋರಾಟ ಸಮಿತಿ, ಕನ್ನಡ ಪರ ಸಂಘಟನೆಗಳು ಜಂಟಿಯಾಗಿ ವಹಿಸಿಕೊಂಡು ಹೋರಾಟ ಪ್ರಾರಂಭಮಾಡಿದವು.

1. ಉದ್ದೇಶಿತ ಕೈಗಾರಿಕೆಗಳನ್ನು ಕೂಡಲೇ ಪ್ರಾರಂಭಮಾಡಬೇಕು.
2. ಮೋಸದ ಭೂ ಬೆಲೆ ರದ್ದು ಮಾಡಿ ನ್ಯಾಯವಾದ ಭೂ ಬೆಲೆ ನೀಡಬೇಕು.
3. ಭೂ ಸಂತ್ರಸ್ತ ಕುಟುಂಬದವರಿಗೆ ಉದ್ಯೋಗ ನೀಡಬೇಕು, ಅಲ್ಲಿಯವರೆಗೆ ನಿರುದ್ಯೋಗ ಭತ್ಯೆ ನೀಡಬೇಕು ಎಂದು ಕುಡಿತಿನಿಯಿಂದ ಬಳ್ಳಾರಿಗೆ ಸಂಘಟನೆಗಳ ನೇತೃತ್ವದಲ್ಲಿ ಯಶಸ್ವಿ ಪಾದಯಾತ್ರೆ ಮತ್ತು 596 ದಿನಗಳಿಂದ ಕುಡಿತಿನಿಯಲ್ಲಿ ಯಶಸ್ವಿ ಧರಣಿ ಹೋರಾಟವನ್ನು ನಡೆಸಲಾಗುತ್ತಿದೆ.

ಹೋರಾಟದ ಸ್ಥಳಕ್ಕೆ ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಪಕ್ಷಗಳ ಪ್ರಮುಖ ಮುಖಂಡರುಗಳು, ಎಚ್.ಡಿ.ಕುಮಾರ್‌ಸ್ವಾಮಿ, ಬಿ.ಶ್ರೀರಾಮುಲು ಮುಂತಾದವರು ಭೇಟಿ ನೀಡಿ ಭರವಸೆಗಳನ್ನು ನೀಡಿದ್ದರಾದರೂ ಇದುವರೆಗೆ ಯಾವುದೇ ಪ್ರಯೋಜನವಾಗಲಿಲ್ಲ. ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ಸೇರಿದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೈಗಾರಿಕೆ ಮಂತ್ರಿ ಎಂ.ಬಿ.ಪಾಟೀಲ್, ಬಳ್ಳಾರಿ ಜಿಲ್ಲಾ ಮಾಜಿ ಉಸ್ತುವಾರಿ ಸಚಿವರಾದ ಬಿ. ನಾಗೇಂದ್ರ, ಸಂಡೂರ್ ಶಾಸಕರಾಗಿದ್ದ ಎಲ್.ತುಕಾರಾಮ್, ಬಳ್ಳಾರಿ ನಗರ ಶಾಸಕರಾದ ಭರತ್ ರೆಡ್ಡಿ, ಕಂಪ್ಲಿ ಶಾಸಕರಾದ ಗಣೇಶ್, ಕೆಐಎಡಿಬಿ ಅಧಿಕಾರಿಗಳು, ಬಳ್ಳಾರಿ ಜಿಲ್ಲಾಧಿಕಾರಿ, ರೈತ ಮುಖಂಡರುಗಳು, ಯು.ಬಸವರಾಜ್, ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಜೆ.ಸತ್ಯಬಾಬು, ಜಂಗ್ಲಿ ಸಾಬ್ ಒಳಗೊಂಡು ಜಂಟಿ ಸಭೆ ನಡೆಸಲಾಯಿತು. ಆದರೂ, ರೈತರಿಗೆ ನೀಡಿದ್ದ ನ್ಯಾಯ ಕೊಡುವ ಭರವಸೆ ಜಾರಿಯಾಗಲಿಲ್ಲ.

ಈ ನಡುವೆ ಸಮಸ್ಯೆಗೆ ಪ್ರಾಯೋಗಿಕ ಪರಿಹಾರ ಸಿಗುವಂತಾಗಲು ಬಳ್ಳಾರಿಯಲ್ಲಿ ಜಸ್ಟಿಸ್ ವಿ.ಗೋಪಾಲಗೌಡ ಅವರನ್ನು ಆಹ್ವಾನಿಸಿ, ಮಾಜಿ ಲೋಕಸಭಾ ಸದಸ್ಯರಾದ ವಿ.ಎಸ್.ಉಗ್ರಪ್ಪ, ಜಿಲ್ಲಾ ಉಸ್ತವಾರಿ ಸಚಿವರಾದ ಬಿ.ನಾಗೇಂದ್ರ, ಅದಿವಾಸಿ ಹಕ್ಕುಗಳ ರಾಜ್ಯ ಮುಖಂಡರಾದ ಎಸ್.ವೈ. ಗುರುಶಾಂತ್ ಒಳಗೊಂಡು ರೈತರ ಬೃಹತ್ ಸಮಾವೇಶ ನಡೆಸಲಾಯಿತು. ಸಮಾವೇಶದಲ್ಲಿ ನೂರಾರು ರೈತರು ಭಾಗವಹಿಸಿದ್ದರು. ಕಳೆದ 596 ದಿನಗಳಲ್ಲಿ ಹಲವು ರೀತಿಯಲ್ಲಿ ಹೋರಾಟಗಳು ನಡೆಸುತ್ತಾ ಬಂದಿದ್ದು, ಆ ಭಾಗದಲ್ಲಿ ಹೋರಾಟದ ಪ್ರಭಾವ ಹೆಚ್ಚಿದೆ. ಆ ಭಾಗದ ಅಭಿವೃದ್ಧಿ ಹಾಗೂ ಕುಡಿತಿನಿ ಅಭಿವೃದ್ಧಿ ಪ್ರಶ್ನೆಗಳೂ ಹೋರಾಟದಲ್ಲಿ ಅಡಗಿವೆ.

ಸರ್ಕಾರದ ನಿರ್ಲಕ್ಷ್ಯವನ್ನು ವಿರೋಧಿಸಿ ಆಗಸ್ಟ್ 6, 2024 ರಂದು ಕುಡಿತಿನಿ ಪಟ್ಟಣದಲ್ಲಿ ಹರತಾಳ ಸಂಪೂರ್ಣ ಮುಷ್ಕರ, ಸ್ವಯಂ ಪ್ರೇರಿತ ಬಂದ್ ಮಾಡಲು ಸಂಘಟನೆಗಳು ತೀರ್ಮಾನ ಮಾಡಿದವು. ಅದರ ತಯಾರಿ ಭಾಗವಾಗಿ 10 ದಿನಗಳ ಕಾಲ ಭೂಮಿ ವಶಪಡಿಸಿಕೊಂಡಿರುವ ಹಳ್ಳಿಗಳಲ್ಲಿ ಪ್ರಚಾರ ನಡೆಸಿ ಹೋರಾಟಕ್ಕೆ ಬೆಂಬಲ ನೀಡಲು ಮನವಿ ಮಾಡಲಾಯಿತು.

ಕುಡುತಿನಿಯಲ್ಲಿ ಆಗಸ್ಟ್ 6, 2024 ರಂದು ಬೆಳಿಗ್ಗೆ 6 ಗಂಟೆಯಿಂದ ಹೋಟೆಲ್ ಗಳು, ಅಂಗಡಿ ಮುಂಗಟ್ಟುಗಳು, ಶಾಲೆ ಕಾಲೇಜುಗಳು, ಬ್ಯಾಂಕ್, ಆಟೋ, ಇನ್ನಿತರ ಎಲ್ಲಾ ವಿಭಾಗಗಳಿಗೆ ಹರತಾಳ ಬೆಂಬಲಿಸಲು, ಸ್ವಯಂ ಪ್ರೇರಿತವಾಗಿ ಬೆಂಬಲ ನೀಡಲು ಮನವಿ ಮಾಡಲಾಯಿತು, ಕುಡಿತಿನಿ ಪಟ್ಟಣದಲ್ಲಿ ಎಐಕೆಎಸ್, ಸಿಐಟಿಯು ನೂರಾರು ಕೆಂಬಾವುಟಗಳನ್ನು ಮತ್ತು ಕನ್ನಡಪರ ಸಂಘಗಳ ಬಾವುಟಗಳನ್ನು ಮುಖ್ಯ ರಸ್ತೆ, ಬೀದಿಗಳಲ್ಲಿ ಅಲಂಕಾರ ಮಾಡಲಾಗಿತ್ತು. ಇವೆಲ್ಲವೂ ಹೋರಾಟಕ್ಕೆ ಸ್ಫೂರ್ತಿ ನೀಡಿದವು. ಪಟ್ಟಣವೆಲ್ಲಾ ಕೆಂಪುಮಯವಾಗಿತ್ತು.

ಆಗಸ್ಟ್ 6ರ ಮುಷ್ಕರ ಯಶಸ್ವಿ

ಆಗಸ್ಟ್ 6ರಂದು ಕುಡುತಿನಿಯಲ್ಲಿ ಬೆಳಗ್ಗೆ 6 ಗಂಟೆಯಿಂದ ಸಾಯಂಕಾಲ 5 ಗಂಟೆವರೆಗೆ ಸಂಪೂರ್ಣ ಮುಷ್ಕರಕ್ಕೆ ಸಂಘಟನೆಗಳು ಕರೆ ನೀಡಿದ್ದವು. ಆ ಭಾಗದ ರೈತರು, ಕೂಲಿಕಾರರು, ಕಾರ್ಮಿಕರು, ಊರಿನ ಪ್ರಮುಖರು, ಪಟ್ಟಣ ಪಂಚಾಯತ್ ಸದಸ್ಯರುಗಳು, ಸಾವಿರಾರು ಮಹಿಳೆಯರು, ದೇವದಾಸಿ ವಿಮೋಚನಾ ಸಂಘ, ಭೂಸಂತ್ರಸ್ಥರು, ಕನ್ನಡಪರ ಸಂಘಟನೆಗಳು, ಮುಂತಾದವರು ದೊಡ್ಡ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಭಾಗವಹಿಸಿದರು. ಇಡೀ ಊರಿನ ಎಲ್ಲ ವಹಿವಾಟುಗಳು, ಬ್ಯಾಂಕ್‌ಗಳು ಬೆಳಿಗ್ಗೆ 6 ಗಂಟೆಯಿಂದ ಸಾಯಂಕಾಲ 5 ಗಂಟೆವರೆಗೆ ಮುಚ್ಚಿದ್ದವು. ವಾಹನ ಸಂಚಾರ ಸ್ಥಬ್ದವಾಗಿತ್ತು. ಕುಡಿತಿನಿ ಬಸ್ ನಿಲ್ದಾಣ, ರಸ್ತೆಗಳು ಬಿಕೋ ಅನ್ನುತ್ತಿದ್ದವು. ಹೋರಾಟಕ್ಕೆ ಎಲ್ಲಾ ವಿಭಾಗಗಳಿಂದ ಅಭೂತ ಪೂರ್ಣ ಬೆಂಬಲ ವ್ಯಕ್ತವಾಯಿತು.

ಅಂದು ಬೆಳಿಗ್ಗೆ 6 ಗಂಟೆಗೆ ರಸ್ತೆಗಳ ಮೇಲೆ ನೂರಾರು ರೈತರು ಎಐಕೆಎಸ್, ಸಿಐಟಿಯು, ಕನ್ನಡ ಪರ ಸಂಘಟನೆಗಳ ಬಾವುಟಗಳನ್ನು ಹಿಡಿದು, ಪಕ್ಷಬೇದ ಮರೆತು, ಧರ್ಮ, ಜಾತಿ ಯಾವುದನ್ನೂ ಲೆಕ್ಕಿಸಿದೇ ಒಗ್ಗಟ್ಟಾಗಿ ರಸ್ತೆಯ ಮೇಲೆ ಕುಳಿತಿದ್ದು ಮತ್ತು ಅಲ್ಲಿಯೇ ಉಪಹಾರ ಸೇವನೆ ಮಾಡಿದ್ದೂ ಸ್ಮರಣೀಯ.

ಈ ಸಂದರ್ಭದಲ್ಲಿ ಸಂಗಾತಿಗಳಾದ ಯು.ಬಸವರಾಜ್, ಡಾ.ಎಸ್.ವೈ.ಗುರುಶಾಂತ್, ಹೋರಾಟದ ನೇತೃತ್ವ ವಹಿಸಿದ್ದ ಜೆ.ಸತ್ಯಬಾಬು ಜನತೆಯನ್ನು ಉದ್ದೇಶಿಸಿ ಮಾತನಾಡಿದರು. ಅಲ್ಲದೇ ಸಿಐಟಿಯು ಜಿಲ್ಲಾ ಪ್ರದಾನ ಕಾರ್ಯದರ್ಶಿ ಜೆ.ಎಂ.ಚನ್ನಬಸಯ್ಯ, ಕೆಪಿಆರ್‌ಎಸ್ ಜಿಲ್ಲಾ ಅಧ್ಯಕ್ಷರಾದ ವಿ.ಎಸ್.ಶಿವಶಂಕರ, ದೇವದಾಸಿ ಮಹಿಳಾ ವಿಮೋಚನಾ ಸಂಘ ಜಿಲ್ಲಾ ಅಧ್ಯಕ್ಷರಾದ ಎ.ಸ್ವಾಮಿ, ಡಿ.ವೈ.ಎಫ್.ಐ. ಮುಖಂಡರಾದ ಕಾಲೂಬಾ, ಕನ್ನಡ ಹೋರಾಟಗಾರರಾದ ಜಂಗ್ಲಿ ಸಾಬ್, ತಿಮ್ಮಪ್ಪ, ಭಾವಿ ಶಿವಕುಮಾರ್, ಗೋಪಾಲ್, ಕನಕಪ್ಪ, ಸುರೇಶ್, ಧರ್ಮಣ್ಣ ಹರಗನ ಡೋಣಿ, ಗಂಗಾಧರ್ ಗೌಡ ಕೊಳಗಲ್ಲು, ನಾರಾಯಣರೆಡ್ಡಿ, ಗೋವಾರ್ಧನ್ ವೇಣಿ ವೀರಾಪುರ, ತಿಮ್ಮರೆಡ್ಡಿ ಎಸ್.ಡಿ. ಹಳ್ಳಿ, ದೊಡ್ಡಬಸವನಗೌಡ, ಶೇಖರ್ ಜಾನೇ ಕುಂಟೆ, ಕನ್ನಡ ಪರ ಸಂಘಟನೆಗಳ ಮುಖಂಡರು, ದಲಿತ ನಾಯಕರು, ಮುಂತಾದವರು ಹೋರಾಟ ಯಶಸ್ವಿಗಾಗಿ ಶ್ರಮಿಸಿದ್ದರು.

ಪರಿಹಾರದ ಭರವಸೆ

ಸ್ವಯಂ ಪ್ರೇರಿತ ಹರತಾಳ ಮುಷ್ಕರ ಸಂಪೂರ್ಣ ಬಂದ್ ಆಗಿ ಯಶಸ್ವಿಯಾಗಿದ್ದು ಮುಂದಿನ ಹೋರಾಟಕ್ಕೆ ಸ್ಫೂರ್ತಿಯಾಗಿದೆ. ಜಿಲ್ಲಾಧಿಕಾರಿಗಳ ಪರವಾಗಿ ಮನವಿ ಸ್ವೀಕರಿಸಿದ ತಹಶೀಲ್ದಾರ್ ಅವರು ಆದಷ್ಟು ಬೇಗ ಸಮಾಲೋಚನಾ ಸಭೆ ಕರೆದು ಉನ್ನತ ಮಟ್ಟದಲ್ಲಿ ಪರಿಹಾರ ದೊರಕಿಸಲು ಜಿಲ್ಲಾಡಳಿತ ಪ್ರಯತ್ನಿಸಲಿದೆ ಎಂದರು. ಸಂಸದರು, ಶಾಸಕರು, ಸಚಿವರು ಈ ಕೂಡಲೇ ಮುತುವರ್ಜಿ ವಹಿಸದಿದ್ದಲ್ಲಿ ಜಿಲ್ಲಾ ಮಟ್ಟದಲ್ಲಿ ಹೋರಾಟ ನಡೆಸಲಾಗುವುದು ಮತ್ತು ಮುಖ್ಯಮಂತ್ರಿ, ಕೈಗಾರಿಕಾ ಮಂತ್ರಿಗಳ ಮನೆ ಚಲೋ ಪಾದಯಾತ್ರೆ ಕಾರ್ಯಕ್ರಮ ನಡೆಸಲಾಗುವುದು ಎಂದು ಎಚ್ಚರಿಸಲಾಯಿತು. ●





ಸ್ವತಂತ್ರ ಭಾರತದಲ್ಲಿ ನಾವೆಷ್ಟು ಸ್ವತಂತ್ರರು?

ನಿತ್ಯಾನಂದಸ್ವಾಮಿ

ಭಾರತದ ರಾಷ್ಟ್ರೀಯ ವಿಮೋಚನಾ ಸಮರ ಯಶಸ್ವಿಯಾಗಿ ಮುಕ್ತಾಯಗೊಂಡು ದೇಶಕ್ಕೆ ಸ್ವಾತಂತ್ರ್ಯ ದೊರೆತು 78 ವರ್ಷಗಳಾಗಿವೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಶಕ್ತಿಯನ್ನು ನಿರ್ಣಾಯಕವಾಗಿ ಸೋಲಿಸಿ ಸ್ವಾತಂತ್ರ್ಯವನ್ನು ಪಡೆದದ್ದು ಒಂದು ಸಣ್ಣ ಘಟನೆಯಲ್ಲ. ಜಾಗತಿಕವಾಗಿ ಅತ್ಯಂತ ಮಹತ್ವ ಪೂರ್ಣವಾದ ಬೆಳವಣಿಗೆ ಇದಾಗಿತ್ತು. ಸಾವಿರಾರು ಜನ ದೇಶ ಪ್ರೇಮಿಗಳ ಅಪಾರ ತ್ಯಾಗ ಬಲಿದಾನಗಳಿಂದ ಪಡೆದ ಸ್ವಾತಂತ್ರ್ಯ ಇದಾಗಿತ್ತು. ವಿಶ್ವದ ಅನೇಕ ದೇಶಗಳ ವಿಮೋಚನೆಗೆ ನಾಂದಿಯಾದ ಘಟನೆ ಇದು. ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವುದು ನಮ್ಮೆಲ್ಲರಿಗೆ ಸಹಜವೂ, ಸಂಭ್ರಮಿಸಲು ಯೋಗ್ಯವೂ ಆಗಿದೆ. ಆದ್ದರಿಂದ ಆಗಸ್ಟ್ 15 ಎಲ್ಲಾ ದೇಶಪ್ರೇಮಿಗಳಲ್ಲಿ ಪ್ರತಿ ವರ್ಷ ಖುಷಿಯನ್ನು ಉಂಟುಮಾಡುತ್ತದೆ.

ಭಾರತದ ಸ್ವಾತಂತ್ರ್ಯ ಚಳುವಳಿ ಒಂದು ಪ್ರಜಾಸತಾತ್ಮಕ ಕ್ರಾಂತಿಯಾಗಿದೆ. ಪ್ರಜಾಪ್ರಭುತ್ವ ಸ್ಥಾಪನೆಗಾಗಿ ನಡೆದ ಸಂಘರ್ಷವಾಗಿದೆ. ಪ್ರಭುಗಳ ಪ್ರಭುತ್ವದ ಬದಲಾಗಿ ಪ್ರಜೆಗಳ ಪ್ರಭುತ್ವ ಸ್ಥಾಪನೆ ಅದರ ಉದ್ದೇಶವಾಗಿತ್ತು. ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದಾಗಿ ನಡೆಸಿದ ಮಹಾನ್ ಆಂದೋಲನ ಅದಾಗಿತ್ತು. ರೈತರು, ಕಾರ್ಮಿಕರು, ಯುವಜನರು, ಮಹಿಳೆಯರು, ಬರಹಗಾರರು ಮಾತ್ರವಲ್ಲ ದೇಶದ ಅಂದಿನ ಬಂಡವಾಳಿಗರೂ ಒಳಗೊಂಡಂತೆ ಎಲ್ಲರೂ ಭಾಗವಹಿಸಿದ್ದ ಚರಿತ್ರಾರ್ಹ ಚಳುವಳಿ ಅದಾಗಿತ್ತು. ಹೊಸ ಬದುಕಿನ ಕನಸುಗಳೊಂದಿಗೆ, ಸ್ವಂತಕ್ಕೆ ಲಾಭದ ಆಸೆ ಇಲ್ಲದೆ ಅವರು ಸ್ವಾತಂತ್ರ್ಯ ಸಮರದ ಸಾಗರಕ್ಕೆ ದುಮುಕಿದ್ದರು. ಎಲ್ಲಾ ಜನ ವಿಭಾಗಗಳ ಪಾಲ್ಗೊಳ್ಳುವಿಕೆಯೇ ಹೋರಾಟದ ಯಶಸ್ವಿಗೆ ಕಾರಣವಾಯಿತು.

ಆದರೆ ದೇಶದ ವಿಮೋಚನಾ ಚಳುವಳಿಯಲ್ಲಿ ಪಾಲ್ಗೊಂಡ ಲಕ್ಷಾಂತರ ದೇಶ ಪ್ರೇಮಿಗಳ ಕನಸುಗಳು ಇಂದಿಗೂ ನನಸಾಗದಿರುವುದು ಅತ್ಯಂತ ಕಳವಳಕಾರಿ ವಿಷಯವಾಗಿದೆ. ನಮ್ಮ ಸ್ವಾತಂತ್ರ್ಯ ಸಮರದಲ್ಲಿ ಎಲ್ಲಾ ಜನ ವಿಭಾಗಗಳು ಪಾಲ್ಗೊಂಡು ಯಶಸ್ವಿಗೊಳಿಸಿದರೂ ಚಳುವಳಿಯ ನೇತೃತ್ವ ಅಂದಿನ ದೊಡ್ಡ ಬಂಡವಾಳಗಾರರ ಕೈಯಲ್ಲಿ ಉಳಿಯಿತು. ದೊಡ್ಡ ಬಂಡವಾಳ ಶಾಹಿ ವರ್ಗವು ಪ್ರಜಾಸತಾತ್ಮಕ ಕ್ರಾಂತಿಯ ಮೂಲಭೂತ ಕರ್ತವ್ಯಗಳನ್ನು ಪೂರ್ಣಗೊಳಿಸಲು ಮುಂದಾಗಲೇ ಇಲ್ಲ. ದೇಶದಲ್ಲಿ ಲಭ್ಯವಿದ್ದ ಅಪಾರ ನೈಸರ್ಗಿಕ ಸಂಪನ್ಮೂಲಗಳನ್ನು ಹಾಗೂ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವ ಬದಲು ದೊಡ್ಡ ಬಂಡವಾಳಶಾಹಿ ವರ್ಗವು ತನ್ನ ಸ್ವಂತ ಸಂಕುಚಿತ ಹಿತಾಶಕ್ತಿಯನ್ನು ಸಾಧಿಸಿಕೊಳ್ಳಲು ಬಳಸಿಕೊಂಡಿತು. ಪಾಳೆಗಾರಿ ಪದ್ಧತಿಯನ್ನು ನಿರ್ಮೂಲನೆ ಮಾಡುವ ಬದಲು ಅದರೊಂದಿಗೆ ಮೈತ್ರಿ ಮಾಡಿಕೊಡಲಾಯಿತು. ಸಾಮ್ರಾಜ್ಯಶಾಹಿಗಳೊಂದಿಗೆ ತಮ್ಮ ಸಂಬಂಧವನ್ನು ಕಡಿದುಕೊಳ್ಳುವ ಬದಲು ಅವರೊಂದಿಗೆ ರಾಜಿ ಮಾಡಿಕೊಳ್ಳಲಾಯಿತು. ಹೀಗೆ ಭಾರತದಲ್ಲಿ ವಿದೇಶಿ ಹಣಕಾಸು ಬಂಡವಾಳದೊಂದಿಗೆ ಹೆಚ್ಚೆಚ್ಚು ಕೈಜೋಡಿಸುತ್ತಿರುವ ದೊಡ್ಡ ಬಂಡವಾಳಿಗರ ನೇತೃತ್ವದ ಬಂಡವಾಳಶಾಹಿ ಭೂಮಾಲಿಕರ ವರ್ಗ ಆಳ್ವಿಕೆ ಆರಂಭವಾಯಿತು. ಹೀಗೆ ಪ್ರಭುತ್ವಾಧಿಕಾರವನ್ನು ವಹಿಸಿಕೊಂಡ ಭಾರತದ ಆಳುವ ವರ್ಗಗಳು ಬಂಡವಾಳ ಶಾಹಿ ಬೆಳವಣಿಗೆಯ ಒಂದು ವಿಶಿಷ್ಟ ದಾರಿಯನ್ನು ಅನುಸರಿಸ ತೊಡಗಿದರು.

ಭಾರತದ ಸ್ವಾತಂತ್ರ್ಯ ನನಸಾಗದ ಕನಸಾಗಿದೆ. ಇಲ್ಲಿ ಸ್ವಾತಂತ್ರ್ಯವೆಂದರೆ ಒಂದು ಶೋಷಕ ವರ್ಗದ ಕೈಯಿಂದ ಇನ್ನೊಂದು ಶೋಷಕ ವರ್ಗದ ಕೈಗಳಿಗೆ ಅಧಿಕಾರ ಹಸ್ತಾಂತರವಾಗಿದೆ. ಹೀಗೆ 1947ರ ಕ್ರಾಂತಿ ಒಂದು ವಿಫಲಗೊಂಡ ಕ್ರಾಂತಿಯಾಗಿದೆ. ನಮ್ಮ ಸ್ವಾತಂತ್ರ್ಯದಲ್ಲಿ ಜನಸಾಮಾನ್ಯರ ಕನಸುಗಳು ನುಚ್ಚು ನೂರಾಗಿವೆ. ಸ್ವತಂತ್ರ ಭಾರತದಲ್ಲಿ ಸಾಮಾಜಿಕ ನ್ಯಾಯ ಕೇವಲ ಒಂದು ಆದರ್ಶವಾಗಿ ಉಳಿದಿದೆ. ಜಾತಿ ಆಧಾರಿತ ತಾರತಮ್ಯ ಇನೂ ಜೀವಂತವಾಗಿದೆ. ಇಲ್ಲಿ ಮನುಷ್ಯರನ್ನು ಪಶುಗಳಿಗಿಂತ ಕೀಳಾಗಿ ಕಾಣಲಾಗುತ್ತದೆ. ಸಮಾಜದಲ್ಲಿ ಕೆಲವರನ್ನು ಅವರ ಬಣ್ಣ, ಆಹಾರ ಪದ್ಧತಿಗಳಿಗಾಗಿ ಹೀಯಾಳಿಸಲಾಗುತ್ತದೆ. ಸಾಮಾಜಿಕ ಸಮಾನತೆಯನ್ನು ನಿರಾಕರಿಸುವ ಸ್ವಾತಂತ್ರ್ಯ ಅದೆಂತಹ ಸ್ವಾತಂತ್ರ್ಯ!

ಭಾರತ ಎಂಬ ಈ ದೇಶದಲ್ಲಿ ವಿದ್ಯಾವಂತ ಮತ್ತು ಅವಿದ್ಯಾವಂತ ಯುವಜನರು ಲಕ್ಷಾಂತರ ಸಂಖ್ಯೆಯಲ್ಲಿ ಇದ್ದಾರೆ. ಅವರು ಬೆವರು ಸುರಿದು ದುಡಿಯಲು ಸಿದ್ದರಿದ್ದಾರೆ. ಅವರಿಗೆಲ್ಲಿದೆ ಸ್ವಾತಂತ್ರ್ಯ? ಒಪ್ಪತ್ತಿನ ಊಟಕ್ಕಾಗಿ ಅವರು ಅಲೆಯುತ್ತಿರುತ್ತಾರೆ. ಕುಟುಂಬದಲ್ಲಿಯೂ ಸಮಾಜದಲ್ಲಿಯೂ ಅವರನ್ನು ದಂಡ ಪಿಂಡಗಳೆಂದು ಅವಮಾನಕ್ಕೆ ಗುರಿಪಡಿಸಲಾಗುತ್ತದೆ. ಇವರಿಗೆ ಸಿಕ್ಕಿದೆಯಾ ಸ್ವಾತಂತ್ರ್ಯ? ಪುರುಷ ಪ್ರಧಾನ ಸಮಾಜದಲ್ಲಿ ದಮನವನ್ನು ಅನುಭವಿಸುತ್ತಿರುವ ನಮ್ಮ ಅಕ್ಕ-ತಂಗಿಯರಿಗೆ ಎಲ್ಲಿದೆ ಸ್ವಾತಂತ್ರ? ಇದೆಯಾ ನಮಗೆ ಧಾರ್ಮಿಕ ಸ್ವಾತಂತ್ರ? ಇದೆಯಾ ನಮಗೆ ವಾಕ್ ಸ್ವಾತಂತ್ರ್ಯ? ನಮ್ಮ ದೇಶದ ಸಂವಿಧಾನ ನಮಗೆ ಸ್ವಾತಂತ್ರ್ಯದ ಭರವಸೆ ನೀಡಿದೆ. ಆದರೆ ಈ ಸ್ವಾತಂತ್ರ್ಯವನ್ನು ಸಾಮಾನ್ಯ ಪ್ರಜೆಗಳಿಗೆ ನಿರಾಕರಿಸುತ್ತಾ ಬರಲಾಗಿದೆ. ಭೂ ಸುಧಾರಣೆಗಳ ಮೂಲಕ ಭೂಮಿಯ ಹಕ್ಕನ್ನು ಪಡೆಯುವ ಹಕ್ಕು ನಮಗೆ ದೊರೆಯಬೇಕಾಗಿದ್ದರೂ ಅದು ಕೇವಲ ಘೋಷಣೆಯಾಗಿ ಉಳಿದಿದೆ. ಪ್ರಜಾಪ್ರಭುತ್ವದಲ್ಲಿ ನಾವೇ ಪ್ರಭುಗಳಾಗಿದ್ದರೂ ನಮಗೆ ವಾಸಕ್ಕೆ ಯೋಗ್ಯವಾದ ಮನೆ ಇಲ್ಲ. ಉಚಿತ ಆರೋಗ್ಯ, ಗುಣಮಟ್ಟದ ಔಷಧಿಗಳನ್ನು ಪಡೆಯುವ ಹಕ್ಕು ನಮಗಿಲ್ಲ. ಕೆಲವರು ಸಮಾನರು, ಇನ್ನೂ ಕೆಲವರು ಹೆಚ್ಚು ಸಮಾನರು ಆಗಿರುವ ಈ ಸಮಾಜದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮುಂದುವರಿಯಬೇಕಾಗಿದೆ. ಅಪೂರ್ಣಗೊಂಡ ಕ್ರಾಂತಿಯನ್ನು ಪೂರ್ಣಗೊಳಿಸಬೇಕಾಗಿದೆ. ಯಾರು ಯಾವುದರಿಂದಲೂ ವಂಚಿತರಾಗಿರಬಾರದು ಕೇವಲ ರಾಜಕೀಯ ಸ್ವಾತಂತ್ರ್ಯಕ್ಕೆ ತೃಪ್ತಿ ಪಡದೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ವಾತಂತ್ರ್ಯವನ್ನು ನಮ್ಮದಾಗಿಸಬೇಕಾಗಿದೆ. 1947ರ ಸ್ವಾತಂತ್ರ್ಯ ನಮಗೆ ಕನಾಸಾಗಿಯೇ ಉಳಿದಿದೆ. ಬಡತನ, ಹಸಿವು, ನಿರುದ್ಯೋಗ, ಜಾತಿ ತಾರತಮ್ಯ ಮುಂತಾದ ಅನಿಷ್ಟಗಳಿಂದ ವಿಮೋಚನೆಯಾಗದ ನಮ್ಮ ಈ ಸಮಾಜದಲ್ಲಿ ನಾವು ಸ್ವಾತಂತ್ರ್ಯವನ್ನು ಪಡೆಯುವುದು ಇನ್ನೂ ಬಾಕಿ ಇದೆ. ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳು, ವ್ಯಕ್ತಿಗಳು ಒಟ್ಟಾಗಿ ಅಪೂರ್ಣಗೊಂಡ ಕ್ರಾಂತಿಯನ್ನು ಪೂರ್ಣಗೊಳಿಸಬೇಕು. ●

ಅಕ್ರಮಗಳ ಆರೋಪ-ಬೈಯ್ದಾಟ........ ಪುಟ 3 ರಿಂದ

ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಅವಶ್ಯಕ. ಆದರೆ ಇದರ ಬದಲು ಕೇವಲ ವಾದ ಪ್ರತಿವಾದಗಳ ಮನೋರಂಜನೆ ಸೃಷ್ಟಿಸುವುದರಿಂದ ಕರ್ನಾಟಕದ ಜನತೆಗೆ ಏನು ಪ್ರಯೋಜನ? ಆದ್ದರಿಂದ ಸರ್ಕಾರದ ಏಜೆನ್ಸಿಗಳು ಎಲ್ಲಾ ಆರೋಪಗಳಿಗೆ ಕಾನೂನಾತ್ಮಕ ಕ್ರಮಗಳನ್ನು ಕೈಗೊಂಡರೆ ಏನಾದರೂ ಪ್ರಯೋಜನವಾದೀತು. ಆದರೆ ಇಂತಹ ಸಂಸ್ಥೆಗಳ ಸಂವಿಧಾನಾತ್ಮಕ ಪಾತ್ರವನ್ನು ದುರ್ಬಲಗೊಳಿಸಿ ಸಾಕು ನಾಯಿಗಳಂತೆ ಮಾಡಿಕೊಂಡು ಬೇಡವಾದವರ ಮೇಲೆ ಬಳಸುತ್ತಿರುವುದು ಅವುಗಳ ಅಸ್ತಿತ್ವವನ್ನೇ ಪ್ರಶ್ನಿಸುವಂತೆ ಮಾಡಿದೆ. ಅವಕ್ಕೆ ಪುರುಸೊತ್ತಾದರೂ ಎಲ್ಲಿದೆ?

ಬಿಜೆಪಿ ಜೆಡಿಎಸ್ ಪಕ್ಷಗಳು ನಡೆಸಿರುವ ಈ ಪಾದಯಾತ್ರೆಗೆ ಸಾರ್ವಜನಿಕರಿಂದ ಸ್ಪಂದನ ಅಷ್ಟಾಗಿ ಇಲ್ಲ ಎನ್ನುವುದು ಸಹ ಎದ್ದು ಕಾಣುತ್ತಿದೆ. ಹೊರಗಿನ ಜಿಲ್ಲೆಗಳಿಂದ ಬಂದವರು ಹೆಚ್ಚಿದ್ದಾರೆ ಎನ್ನುವ ವರದಿಗಳು ಇವೆ. ಹಾಗೆಯೇ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ನಾಯಕರು ಕಲೆತು ಹೆಜ್ಜೆ ಹಾಕುತ್ತಿದ್ದರೂ ಭಿನ್ನಾಭಿಪ್ರಾಯಗಳು ಎದ್ದು ಕಾಣುತ್ತಿವೆ. ಕುಮಾರಸ್ವಾಮಿಯವರು ತೀವ್ರ ಆಕ್ಷೇಪಿಸಿದ ನಂತರದಲ್ಲೂ ಮಾಜಿ ಶಾಸಕ ಪ್ರೀತಂ ಗೌಡ ಈ ಪಾದಯಾತ್ರೆಯಲ್ಲಿ ಕಾಣಿಸಿಕೊಂಡು ಜೆಡಿಎಸ್ ನವರ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಒಂದು ಹಂತದಲ್ಲಿ ಅವರ ಫ್ಲೆಕ್ಸ್ ಕಟೌಟಿಗೆ ಬೆಂಕಿ ಹಚ್ಚಲಾಗಿದೆ. ಹಾಗೇ ಪಾದಯಾತ್ರೆಯ ಒಂದು ಹಂತದಲ್ಲಿ ಬಿಜೆಪಿ ನಾಯಕರ ತಂಡದೊಂದಿಗೆ ಜೆಡಿಎಸ್ ನಾಯಕರು ಹೆಜ್ಜೆ ಹಾಕದೆ ತಮ್ಮದೇ ಆದ ಪ್ರತ್ಯೇಕ ಗುಂಪಾಗಿಯೂ ನಡೆದಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ನೆಲೆಯನ್ನು ಮಾಡಿಕೊಳ್ಳಲು ಶತಾಯಗತಾಯ ಹೊರಟಿರುವ ಬಿಜೆಪಿ ಬಾಯಿಗೆ ಜೆಡಿಎಸ್ ತುತ್ತಾಗುವ ಎಲ್ಲ ಸಾಧ್ಯತೆಗಳು ಇವೆ. ಇದರ ಸುಳಿವಿರುವ ಜೆಡಿಎಸ್ ನಾಯಕರು ಅಂತರ ಕಾಯ್ದುಕೊಳ್ಳಲು ಪ್ರಯತ್ನಿಸಿದ್ದಾರೆಯೇ? ಆದರೆ ಅದು ಎಷ್ಟು ಸಾಧ್ಯವಾದೀತು ಎನ್ನುವುದೇ ಪ್ರಶ್ನೆ!

ಒಂದಂತೂ ನಿಜ. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಗೊಳಿಸಬೇಕು ಎನ್ನುವ ವಿಷಯದಲ್ಲಿ ಒಂದಾಗಿದ್ದಾರೆ.

ರಾಜ್ಯಪಾಲರು ಇನ್ನೂ ಪ್ರಾಸಿಕ್ಯೂಷನ್ ಗೆ ಅನುಮತಿಯನ್ನು ಕೊಟ್ಟಿಲ್ಲ. ಅವರು ಸಹ ಈ ಕೆಲವು ಬೆಳವಣಿಗೆಗಳಿಗಾಗಿ ಕಾಯುತ್ತಿದ್ದಾರಂತೆ. ಈ ನಡುವಿನಲ್ಲಿ ಕುಮಾರಸ್ವಾಮಿ, ಆರ್ ಅಶೋಕ್, ವಿಜಯೇಂದ್ರ, ಇಂಥವರ ಮೇಲೆ ತನಿಖೆಗೆ ಅನುಮತಿ ಕೊಡುವಂತೆ ಕೋರಲಾಗಿದ್ದದ್ದಕ್ಕೆ ರಾಜ್ಯಪಾಲರು ಅವನ್ನು ಹಾಗೇ ಮುಚ್ಚಿಟ್ಟಿದ್ದು ಮತ್ತು ಸಿದ್ದರಾಮಯ್ಯನವರ ವಿಷಯದಲ್ಲಿ ಆತುರ ತೋರಿರುವುದು ಕೂಡ ಚರ್ಚೆಗೆ ಗ್ರಾಸವಾಗಿದೆ. ಅಂದರೆ ಕೇಂದ್ರ ಸರ್ಕಾರ ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವನ್ನು ಅಸ್ತಿರಗೊಳಿಸುವ ಯೋಜನೆಯ ಅನಾವರಣಕ್ಕೆ ಇದು ಒಂದು ಸಾಕ್ಷಿ.

ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಈ ಕೆಲಸಗಳಲ್ಲಿ ಪೂರ್ಣ ನಿರತರಾಗಿರುವುದರಿಂದ ವಿಧಾನಸೌಧ ಬಿಕೋ ಎನ್ನುತ್ತಿದೆ ಎನ್ನುವುದು ಬಹು ಅರ್ಥಪೂರ್ಣ ಸಂಕೇತ. ●

ವಿವಾದಿತ ಮರಕಡ ಟಿಡಿಆರ್ ಜಮೀನಿಗೆ ಸಿಪಿಐ(ಎಂ) ನಿಯೋಗ ಭೇಟಿ, ಹೋರಾಟ ಮುಂದುವರಿಸಲು ನಿರ್ಧಾರ

ಬಿಜೆಪಿ ಆಡಳಿತದ ಮಂಗಳೂರು ನಗರ ಪಾಲಿಕೆ ಭ್ರಷ್ಟಾಚಾರ, ಹಗರಣಗಳ ಕೂಪ. ಬಲಾಢ್ಯ ರಿಯಲ್ ಎಸ್ಟೇಟ್, ಬಿಲ್ಡರ್ ಲಾಭಿಗಳ ಮೂಗಿನ ನೇರಕ್ಕೆ ಎಲ್ಲವೂ ನಡೆಯುತ್ತಿದೆ. ರಿಯಲ್ ಎಸ್ಟೇಟ್ ಲಾಭಿಗಳ ಹಿತಾಸಕ್ತಿಗಳಿಗೆ ಪೂರಕವಾಗಿ ಟಿಡಿಆರ್ ನೀಡಿ ಜಮೀನು ಖರೀದಿಸುವುದು ದೊಡ್ಡ ದಂಧೆಯಾಗಿ ಮಾರ್ಪಟ್ಟಿದೆ. ಆ ಮೂಲಕ ನಗರ ಪಾಲಿಕೆಯ ನೂರಾರು ಕೋಟಿ ಆದಾಯ ಬಿಲ್ಡರ್ ಲಾಭಿಗಳ ಖಜಾನೆ ಸೇರುತ್ತಿದೆ. ಇತ್ತೀಚೆಗಂತೂ ಹತ್ತಾರು ಎಕರೆ ನಿರುಪಯೋಗಿ ಜಮೀನು ಟಿಡಿಆರ್ ಅಡಿ ಖರೀದಿಸುವುದು ಯಾವ ಮುಲಾಜೂ ಇಲ್ಲದೆ ನಡೆಯುತ್ತಿದೆ.

ಕಳೆದ ಕೌನ್ಸಿಲ್ ನಲ್ಲಿ ಬಡವರಿಗೆ ವಸತಿ ನಿರ್ಮಿಸಲು ಜಮೀನು ಖರೀದಿಸುವ ನೆಪ ಮುಂದಿಟ್ಟು ಬಲಾಢ್ಯ ರಿಯಲ್ ಎಸ್ಟೇಟ್ ಮಾಲಕರಿಗೆ ಸೇರಿದ ಹತ್ತು ಎಕರೆಗೂ ಹೆಚ್ಚು ನಿರುಪಯೋಗಿ ಜಮೀನು ಖರೀದಿಸುವ ಪ್ರಸ್ತಾಪವನ್ನು ನಾಗರಿಕ ಸಂಘಟನೆಗಳ ವಿರೋಧದ ನಡುವೆ, ವಿರೋಧ ಪಕ್ಷ ಕಾಂಗ್ರೆಸ್ ನ ನಗರ ಪಾಲಿಕೆ ಸದಸ್ಯರ ಮೌನ ಬೆಂಬಲದೊಂದಿಗೆ ಬಿಜೆಪಿ ಆಡಳಿತದ ಪಾಲಿಕೆ ಅಂಗೀಕರಿಸಿತ್ತು. (ಈ ಜಮೀನು ಬಡವರ ವಸತಿ ಯೋಜನೆಗೆ ಪೂರಕ ಅಲ್ಲ ಎಂದು ಅಧಿಕಾರಿಗಳು ಈಗಾಲಗೆ ಟಿಪ್ಪಣಿ ನೀಡಿರುತ್ತಾರೆ) ಇದು ದೊಡ್ಡ ಹಗರಣ. ಪಾಲಿಕೆಗೆ ನೂರು ಕೋಟಿ ರೂಪಾಯಿ ನಷ್ಟ ಆಗುತ್ತದೆ ಎಂದು ನಾವು ಅಪಾದಿಸಿದ್ದೆವು. ಈ ಟಿಡಿಆರ್ ಫೈಲ್ ದೊಡ್ಡ ವಿವಾದ ಹುಟ್ಟು ಹಾಕಿದೆ.

ಮರಕಡ ಗ್ರಾಮದಲ್ಲಿರುವ ಆ ವಿವಾದಾತ್ಮಕ ಜಮೀನಿಗೆ ಇಂದು ಸಿಪಿಐ(ಎಂ) ಮುಖಂಡರ ನಿಯೋಗ ಭೇಟಿ ನೀಡಿ ಪರಿಶೀಲಿಸಿತು. ಉದ್ದಕ್ಕೂ ಇಳಿಜಾರು, ಕಂದಕ ಸ್ವರೂಪದಲ್ಲಿರುವ ಜಮೀನು ವಸತಿ ಯೋಜನೆಗೆ ಸಿದ್ದಪಡಿಸುವುದು ತೀರಾ ದುಬಾರಿ ಬಾಬತ್ತು ಎಂಬುದು ಮೇಲ್ನೋಟಕ್ಕೆ ಗೋಚರಿಸುತ್ತದೆ. ಅದರಲ್ಲೂ ಸಿರಿವಂತರ ಪಾದಸೇವೆಯಲ್ಲಿಯೇ ಸ್ವರ್ಗ ಕಾಣುವ, ಹತ್ತಾರು ವರ್ಷಗಳಲ್ಲಿ ಬಡವರಿಗೆ ಒಂದು ಸಿಂಗಲ್ ಮನೆಯನ್ನೂ ಕಟ್ಟಿಕೊಡದ ಮಂಗಳೂರು ನಗರ ಪಾಲಿಕೆ ಈ ಕಂದಕದಂತಹ ಜಮೀನನ್ನು ಹತ್ತಾರು ಕೋಟಿ ಖರ್ಚು ಮಾಡಿ ನಡವರ ವಸತಿ ಯೋಜನೆಗೆ ಸಿದ್ದಪಡಿಸುವುದು ಕನಸಿನ ಮಾತೇ ಸರಿ. ಉಚಿತ ವಸತಿ ಯೋಜನೆಗೆ ತೀರಾ ದುಬಾರಿಯಾಗಬಲ್ಲ ಈ ಜಮೀನು ದಶಕಗಳ ಕಾಲ ಪಾಲು ಬೀಳುವುದು ಖಂಡಿತಾ. ಇದು ಬಿಲ್ಡರ್‌ಗಳಿಗೆ ನಗರದ ಆಯಕಟ್ಟಿನ ಜಾಗದಲ್ಲಿ ನಿರ್ಮಾಣಹಂತದಲ್ಲಿರುವ ಅವರ ಗಗನ ಚುಂಬಿ ವಸತಿ ಸಂಕೀರ್ಣಗಳಿಗೆ ಟಿಡಿಆರ್ ಸರ್ಟಿಫಿಕೇಟ್‌ಗಳನ್ನು ಒದಗಿಸಲಿಕ್ಕಾಗಿ ಮಾಡಿಕೊಂಡಿರುವ ಕೋಟ್ಯಾಂತರ ರೂಪಾಯಿಗಳ "ಡೀಲ್" ಎಂಬುದು ಈ ಜಮೀನು ನೋಡಿದ ಯಾರಿಗಾದರೂ ಅರ್ಥವಾಗುತ್ತದೆ.

ಬಿಜೆಪಿ ಆಡಳಿತದ ಮರಕಡದ ವಿವಾದಾತ್ಮಕ ಜಮೀನಿನ ಟಿಡಿಆರ್ ಡೀಲ್ ಅನ್ನು ಕೈ ಬಿಡಬೇಕು ಎಂದು ಸಿಪಿಐ(ಎಂ) ಮಂಗಳೂರು ನಗರ ಉತ್ತರ ಸಮಿತಿ ಇಂದು ಜಮೀನು ವೀಕ್ಷಿಸಿದ ತರುವಾಯ ಮಂಗಳೂರು ನಗರ ಪಾಲಿಕೆಯನ್ನು ಆಗ್ರಹಿಸಿತು. ಹಾಗೆಯೆ, ಸಮಾನ ಮನಸ್ಕ ಸಂಘಟನೆಗಳ ಜೊತೆ ಸೇರಿ ಟಿಡಿಆರ್ ಹಗರಣದ ವಿರುದ್ಧ ಪ್ರಬಲ ಹೋರಾಟ ಸಂಘಟಿಸುವುದಾಗಿ ತೀರ್ಮಾನಿಸಿದೆ.

ನಿಯೋಗದಲ್ಲಿ ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಮುನೀರ್ ಕಾಟಿಪಳ್ಳ, ಡಾ.ಕೃಷ್ಣಪ್ಪ ಕೊಂಚಾಡಿ, ಮಂಗಳೂರು ನಗರ ಉತ್ತರ ಸಮಿತಿ ಕಾರ್ಯದರ್ಶಿ ಪ್ರಮೀಳಾ ಕೆ., ಮಾಜಿ ಕಾರ್ಪೊರೇಟರ್ ದಯಾನಂದ ಶೆಟ್ಟಿ, ಶ್ರೀನಾಥ್ ಕುಲಾಲ್, ನ್ಯಾಯವಾದಿ ಚರಣ್ ಶೆಟ್ಟಿ ಪಂಜಿಮೊಗರು ಉಪಸ್ಥಿತರಿದ್ದರು. ●

ಜನ ನಾಯಕ ಕಾಮ್ರೇಡ್ ಭೀಮಶಿ ಕಲಾದಗಿ

ಕಾಮ್ರೇಡ್ ಭೀಮಸಿ ಕಲಾದಗಿಯವರು ಮತ್ತು ವಿಜಾಪುರ ಜಿಲ್ಲೆಯ ಪಕ್ಷ ಮತ್ತು ಜನತೆಯ ಚಳುವಳಿಯ ಜೊತೆಗೆ ಹಲವು ದಶಕಗಳ ಒಡನಾಟ ಹೊಂದಿರುವ ಸಿಪಿಐ(ಎಂ)ನ ಮಾಜಿ ಕಾರ್ಯದರ್ಶಿ ಜಿ.ಎನ್. ನಾಗರಾಜ್ ರವರು ಸಂಗಾತಿ ಕಲಾದಗಿ ಅವರ ಕುರಿತಾಗಿ ಶ್ರದ್ಧಾಂಜಲಿ ಸಲ್ಲಿಸುತ್ತಾ ಅಲ್ಲಿಯ ಚಳುವಳಿ ಮತ್ತು ಅವರ ಕುರಿತಾದ ವಿಶ್ಲೇಣಾತ್ಮಕ ಒಳ ನೋಟವನ್ನು ನೀಡಿದ್ದಾರೆ ಇಲ್ಲಿ.

ಜಿ.ಎನ್. ನಾಗರಾಜ್

ಭೀಮಸಿ ಕಲಾದಗಿ, ಕರ್ನಾಟಕದ ರೈತ ಚಳುವಳಿಯಲ್ಲಿ ಒಂದು ದೊಡ್ಡ ಹೆಸರು. ಬಾಗಲಕೋಟೆ ಜಿಲ್ಲೆಯೂ ಸೇರಿದ ಬಿಜಾಪುರ ಜಿಲ್ಲೆಯಲ್ಲಿ ಯಾವುದೇ ರಾಜಕೀಯ ನಾಯಕರಿಗಿಂತ ಹೆಚ್ಚು ಜನಪ್ರಿಯ ನಾಯಕ, ಜನ ಸಮೂಹಗಳ ನಾಯಕ, ಬಡಜನ ಸಮೂಹಗಳ ನಾಯಕ–ಮಾಸ್ ಲೀಡರ್.

ಹಾಗೆಂದ ಕೂಡಲೆ ನಮ್ಮ ಮನಸ್ಸಿನಲ್ಲಿ ಮೂಡುವ ನಾಯಕರ ಕಾರುಬಾರುಗಳ ಚಿತ್ರ ಏನಿದೆ ಅದಕ್ಕೆ ಪೂರ್ಣವಾಗಿ ವಿರುದ್ಧವಾದುದು ಭೀಮಸಿಯವರ ಚಿತ್ರ. ಅವರ ಬಗ್ಗೆ ಜನಜನಿತವಾದ ಸುದ್ದಿ, ಹೋರಾಟಗಳ ಯಶಸ್ಸಿನ ಸುದ್ದಿಯನ್ನು ಕೇಳಿದವರು ಮೊದಲ ಬಾರಿಗೆ ಅವರನ್ನು ನೋಡಿದಾಗ ಅವಕ್ಕಾಗುವುದು ಸಹಜ. ಬಿಜಾಪುರಕ್ಕೆ ಹೋದ ಡಿಸಿ ಪಾಸಿಗಳು ಮಂತ್ರಿ ಮಾನ್ಯರುಗಳಿಗೆ ಇಂತಹ ಹಲವು ಅನುಭವ.

ಒಬ್ಬ ಟಿಪಿಕಲ್ ರಾಜಕಾರಣಿಯ ಗರಿ ಗರಿ ಬಿಳಿ ಉಡುಪು, ದೊಡ್ಡ ಹೊಟ್ಟೆಯ ಸೊಂಪಾಗಿ ಬೆಳೆದ ಮೈಕಟ್ಟಿನ ನಾಯಕ ಸೋಗಿನ ವ್ಯಕ್ತಿಯನ್ನು ನಿರೀಕ್ಷಿಸುತ್ತಿದ್ದವರಿಗೆ ಸೋಪು ಹಾಕಿ ಒಗೆಯದ ಮಾಸಲು ಬಿಳಿ ಬಣ್ಣದ ಜುಬ್ಬಾ, ಧೋತಿಗಳ ಹಾಗೂ ಚಪ್ಪಲಿಯಿಲ್ಲದೆ ಒಡೆದ ಕಾಲುಗಳ ವ್ಯಕ್ತಿ ಅವರ ಮುಂದೆ ಧುತ್ತೆಂದು ಎದುರಾದಾಗ ಏನೆನ್ನಿಸಬಹುದು? ಹಾಗೆ ಅವರ ಈ ಉಡುಪು, ವ್ಯಕ್ತಿತ್ವವನ್ನು ನೋಡಿ ಲಘುವಾಗಿ ಭಾವಿಸಿದವರಿಗೆ, ಬಿಜಾಪುರ ಮತ್ತು ಸುತ್ತ ಮುತ್ತಲಿನ ಜಿಲ್ಲೆಗಳಲ್ಲಿ ಇಂತಹ ವ್ಯಕ್ತಿಗಳಿಂದ ಬರುವ ಸಾಹೇಬ್ರೇ ದಯಾ ತೋರಿ ಎಂಬಂತಹ ದೈನ್ಯದಿಂದ ಬೇಡುವ ಮಾತುಗಳನ್ನು ನಿರೀಕ್ಷಿಸುತ್ತಿದ್ದವರಿಗೆ ಅವರ ಗಡುಸಾದ, ಹಕ್ಕಿನಿಂದ ಜಬರಿಸುವ ಮಾತುಗಳನ್ನು ಕೇಳಿದ ಈ ಅಧಿಕಾರಿ, ರಾಜಕಾರಣಿ ವರೇಣ್ಯರು ಕಕ್ಕಾಬಿಕ್ಕಿಯಾಗುವುದು ಸಹಜವೇ!



ಬಿಜಾಪುರ ಜಿಲ್ಲೆ ದೊಡ್ಡ ವತನದಾರ ದೇಸಾಯರ ದೇಸಗತಿಗಳು, ವಾಡೆಗಳಿಂದ ತುಂಬಿರುವ ಜಿಲ್ಲೆ. ದೇಸಗತಿಯೆಂದರೆ ಒಡೆಯರು, ಧಣಿಗಳು ಅವರ ಕುಟುಂಬ, ವಾಸಮಾಡುವ ಒಂದು ಅರಮನೆಯಂತಹ ವಾಡೆ, ಅವರ ಮಾಲೀಕತ್ವ ಅಥವಾ ಹಿಡಿತದ ಹಲವು ಸಾವಿರ ಎಕರೆ ಎರೆ ಮಣ್ಣಿನ ಫಲವತ್ತಾದ ಭೂಮಿ, ಅದರಲ್ಲಿ ಗೇಯುವ ಗೇಣಿದಾರರು, ಅರಮನೆಯ ಒಳಗೂ ಹೊರಗೂ ತಲತಲಾಂತರದಿಂದ ಒಡೆಯರ ಸೇವೆಯಲ್ಲಿ ಹಗಲಿರುಳೂ ದುಡಿಯುವ ಜೀತಗಾರ ಕುಟುಂಬಗಳು.

ಈಗಲೂ ಕೂಡಾ ಇಲ್ಲ ಈ ಊರ ಗೌಡ ಪಾಟೀಲ ಅಲ್ಲವೇ ಆ ಊರ ಗೌಡ ಪಾಟೀಲರೇ ಅಲ್ಲಿಯ ಶಾಸಕರು, ಶೋಷಕರು. ಅವರ ದೌಲತ್ತು, ದರ್ಬಾರು. ಬಸನಗೌಡ ಯತ್ನಾಳ ಎಂಬುವನ ಬಾಯಿಂದ ಉದುರುವ ಸೊಕ್ಕಿನ ಮಾತುಗಳನ್ನು ನೋಡಿದರೆ ಸಾಕು ಈ ಗೌಡ ಪಾಟೀಲರ ಟಿಪಿಕಲ್ ಮಾದರಿ.


ಒಂದು ಕಡೆ ಜಮೀನುದಾರಿ ದರ್ಬಾರು ಮತ್ತೊಂದು ಕಡೆ ಅನಕ್ಷರಸ್ಥ ಬಡ ರೈತ, ಕೂಲಿಕಾರರ ದೈನ್ಯ ಇಂತಹ ವಾತಾವರಣದಲ್ಲಿ ಕಮ್ಯುನಿಸ್ಟ್ ನಾಯಕರಾಗಿ ಮೂಡಿದವರು ಭೀಮಸಿ ಕಲಾದಗಿ. ಸ್ವಾತಂತ್ರ್ಯ ಬರುವ ಮೊದಲೇ ಅಲ್ಲಿ ಆರಂಭವಾಗಿದ್ದ ಕಮ್ಯುನಿಸ್ಟ್ ಚಳುವಳಿಯಿಂದ ಆಕರ್ಷಿತರಾದರು ಬಡ ಕುಟುಂಬದಲ್ಲಿ ಹುಟ್ಟಿದ ಭೀಮಸಿ. ಒಂದು ಸೈಕಲ್ ಶಾಪನ್ನು ನಡೆಸುತ್ತಾ ಜೀವನ ಪ್ರಾರಂಭಿಸಿ ಈ ಜಿಲ್ಲೆಯ ದನಿಯಿಲ್ಲದ ಬಡ ರೈತರು, ಗೇಣಿದಾರ ರೈತರ ದನಿಯಾದರು. ಇಲ್ಲಿಯ ಕೂಲಿಕಾರರು, ಬಡ ರೈತರು ತಮ್ಮ ಭೂಮಿಯನ್ನು ಈ ಧಣಿಗಳ ಆಕ್ರಮಣದಿಂದ ಉಳಿಸಿಕೊಳ್ಳುವುದಕ್ಕಾಗಿ, ಅವರ ದಬ್ಬಾಳಿಕೆ ದೌರ್ಜನ್ಯಗಳಿಂದ ರಕ್ಷಿಕೊಳ್ಳುವುದಕ್ಕಾಗಿ ಭೀಮಸಿ ಅಣ್ಣಾರವರ ಸುತ್ತ ಮುಕುರುತ್ತಿದ್ದರು.

ಬಿಜಾಪುರದ ಕೃಷಿ ಮಾರುಕಟ್ಟೆ ಆವರಣದ ಒಂದು ಕಡೆ ಆರಂಭಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ಕಚೇರಿಯಲ್ಲಿ ಬೆಳಗಿನಿಂದ ಸಂಜೆಯವರೆಗೆ ಇಂತಹ ಜಿಲ್ಲೆಯ ವಿವಿಧ ಭಾಗಗಳಿಂದ ಬಂದ ಸಣ್ಣ ರೈತರು, ಕೂಲಿಕಾರರದ್ದೇ ಗಿಜಿಗಿಜಿ. ಅದರಲ್ಲೂ ಗಣನೀಯ ಸಂಖ್ಯೆಯಲ್ಲಿ ಮಹಿಳೆಯರು.

ಬಿ ೀ ವ್ ಂ ಸಿ ಂ ್ ಂ ವ ್ ರ ಮಂಜರಪಟ್ಟೆಯ ಜುಬ್ಬಾ ಧೋತಿಯ ದಿರಿಸು ಇಂತಹ ಶೋಷಿತ ಜನ ಸಮೂಹಕ್ಕೆ ಇವರು ನಮ್ಮವರೇ, ಇವರನ್ನು ನೆಚ್ಚಬಹುದು ಎಂಬ ಭರವಸೆ ಮೂಡಿಸುತ್ತಿತ್ತು. ಭೀಮಸಿ ಕಲಾದಗಿಯವರು ಹಲವು ಬಡ ರೈತರ ಭೂಮಿ ಪ್ರಶ್ನೆಗಳನ್ನು ಎತ್ತಿಕೊಂಡು ಈ ಧಣಿಗಳನ್ನು ಎದುರಿಸಿದರು. ರೈತ ಚಳುವಳಿ ಬೆಳೆಯಿತು. ಬೆಳೆಯುತ್ತಿರುವ ಈ ರೈತ ಶಕ್ತಿಯನ್ನು ನೋಡಿ ಹಲವು ಮಧ್ಯಮ ರೈತರು, ಶ್ರೀಮಂತ ರೈತರೂ ತಮಗೆ ಆಸರೆಯಾಗುವ ಆದರೆ ಪಾಳೆಯಗಾರಿ ಭೂಮಾಲಿಕರಿಗೆ ಪ್ರಿಯವಲ್ಲದ ನೀರಾವರಿ ಯೋಜನೆಗಳಿಗಾಗಿ ಇವರ ಸುತ್ತ ನೆರೆದರು. ಭೀಮಸಿ ಇಂತಹ ಹೋರಾಟಗಳನ್ನೂ ಕೈಗೆತ್ತಿಕೊಂಡರು. ಮುಳವಾಡ ಏತ ನೀರಾವರಿ, ಆಲಮಟ್ಟಿ ಅಣೆಕಟ್ಟಿನ ನೀರಾವರಿ ಇಂತಹ ಯೋಜನೆಗಳಿಗಾಗಿ ನೂರಾರು ದಿನಗಳ ಕಾಲದ ಸರದಿ ಸತ್ಯಾಗ್ರಹ, ಉಪವಾಸ ಸತ್ಯಾಗ್ರಹಗಳನ್ನೂ ಮಾಡಿದರು. ಆದರೆ ಈ ರೈತ ವಿಭಾಗ ಇವರಿಂದ ತತ್ಕಾಲದ ಪ್ರಯೋಜನ ಬಯಸಿತೇ ಹೊರತು ಇವರ ನಾಯಕತ್ವವನ್ನು ಒಪ್ಪಿಕೊಳ್ಳಲಿಲ್ಲ. ಭೀಮಸಿಯವರ ಜೊತೆಗೆ ಕೊನೆಯವರೆಗೂ ಉಳಿದವರು ಬಡ ರೈತರು, ಕೂಲಿಕಾರರು ಈ ಜನ ವಿಭಾಗಗಳ ಮಹಿಳೆಯರು.

ಭೀಮಸಿಯವರಿಗೆ ಜನರ ಸಮಸ್ಯೆಗಳನ್ನು ಗುರುತಿಸುವುದು, ಅದನ್ನು ಪರಿಹರಿಸುವ ಮಾರ್ಗಗಳು ಕರಗತವಾಗಿತ್ತು. ಆದರೆ ಅವರನ್ನು ರೈತ ಸಂಘದಲ್ಲಿ ಒಳಗೊಳ್ಳುವ, ವಿವಿಧ ಹಂತಗಳ ಸಮಿತಿಗಳನ್ನು ರೂಪಿಸುವ

ಪುಟ 10 ಕ್ಕೆ



ಕಾಮ್ರೇಡ್ ಬುದ್ದದೇಬ್ ಭಟ್ಟಾಚಾರ್ಯ ನಿಧನ

ಪಕ್ಷದ ಅಪ್ರತಿಮ ನಾಯಕ ಮತ್ತು ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಕಾಮ್ರೇಡ್ ಬುದ್ಧದೇಬ್ ಭಟ್ಟಾಚಾರ್ಯ ಆಗಸ್ಟ್ 8 ರಂದು ನಿಧನರಾಗಿದ್ದಾರೆ. ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ಆಳವಾದ ದುಃಖವನ್ನು ವ್ಯಕ್ತಪಡಿಸಿದೆ. ಅವರು 80 ವರ್ಷ ವಯಸ್ಸಿನವರಾಗಿದ್ದರು ಮತ್ತು ಸ್ವಲ್ಪ ಸಮಯದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಬುದ್ಧದೇಬ್ ಭಟ್ಟಾಚಾರ್ಯ 1966 ರಲ್ಲಿ ತಮ್ಮ ವಿದ್ಯಾರ್ಥಿ ದಿನಗಳಲ್ಲಿ ಪಕ್ಷಕ್ಕೆ ಸೇರಿದರು. ವಿದ್ಯಾರ್ಥಿ ಮತ್ತು ಯುವಜನ ಚಳುವಳಿಗಳ ವಿವಿಧ ಹೋರಾಟಗಳಲ್ಲಿ ಭಾಗವಹಿಸಿದ್ದರು. ಅವರು 1968 ರಲ್ಲಿ ಪಶ್ಚಿಮ ಬಂಗಾಳ ಡೆಮಾಕ್ರಟಿಕ್ ಯೂತ್ ಫೆಡರೇಶನ್‌ನ ರಾಜ್ಯ ಕಾರ್ಯದರ್ಶಿಯಾದರು. ಅವರು 1971 ರಲ್ಲಿ ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಸಮಿತಿಗೆ ಆಯ್ಕೆಯಾದರು ಮತ್ತು 1982 ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದರು. ಈ ಅವಧಿಯಲ್ಲಿ, ಬುದ್ಧದೇಬ್ ಅವರು ಪಕ್ಷದ ಪ್ರಮುಖ ನಾಯಕರಾಗಿ ಹೊರಹೊಮ್ಮಿದರು.

ಬುದ್ಧದೇಬ್ ಅವರು 1985 ರಲ್ಲಿ ಪಕ್ಷದ 12 ನೇ ಮಹಾಧಿವೇಶನದಲ್ಲಿ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದರು. ಅವರು 2000 ರಲ್ಲಿ ಪೊಲಿಟ್‌ಬ್ಯೂರೋಗೆ ಆಯ್ಕೆಯಾದರು. 2015 ರವರೆಗೆ ಪೊಲಿಟ್‌ಬ್ಯೂರೋ ಸದಸ್ಯರಾಗಿ, ಪಕ್ಷದ ನೀತಿಗಳನ್ನು ರೂಪಿಸುವಲ್ಲಿ ಅವರು ಪ್ರಮುಖ ಕೊಡುಗೆಗಳನ್ನು ನೀಡಿದರು.

ಬುದ್ಧದೇಬ್ ಅವರ ವಿಶಿಷ್ಟ ಪಾತ್ರವೆಂದರೆ ಎಡರಂಗ ಸರ್ಕಾರದ ಮಂತ್ರಿ ಮತ್ತು ಮುಖ್ಯಮಂತ್ರಿಯಾಗಿ ಅವರು ಸುಮಾರು ಮೂರು ದಶಕಗಳ ಕಾಲ ಸೇವೆ ಸಲ್ಲಿಸಿರುವುದು. ಅವರು ನವೆಂಬರ್ 2000 ರಲ್ಲಿ ಜ್ಯೋತಿ ಬಸು ಅವರ ನಂತರ ಮುಖ್ಯಮಂತ್ರಿಯಾದರು ಮತ್ತು ಅದರ ನಂತರ ಮತ್ತೆ ಎರಡು ಅವಧಿಗೆ ಪ್ರಮಾಣ ವಚನ ಸ್ವೀಕರಿಸಿದರು. ಹೀಗಾಗಿ ಎಡರಂಗದ ಸರ್ಕಾರದ ವಿಧಾನ ಮತ್ತು ನೀತಿಗಳಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಬುದ್ಧದೇಬ್ ಅವರು ಸಾಂಸ್ಕೃತಿಕ ಸಂಸ್ಥೆಗಳ ಅಭಿವೃದ್ಧಿಗೆ ಮತ್ತು ಪ್ರಗತಿಶೀಲ ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿಕೊಳ್ಳಲು ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಒಲವು ಸಾಹಿತ್ಯದ ಕಡೆಗಿತ್ತು. ಅವರು ಕವಿ, ನಾಟಕಕಾರ ಮತ್ತು ಬರಹಗಾರರಾಗಿದ್ದರು. ಅವರು ಅನೇಕ ಅಂತರರಾಷ್ಟ್ರೀಯ ಸಾಹಿತ್ಯ ಕೃತಿಗಳನ್ನು ಬಂಗಾಳಿ ಭಾಷೆಗೆ ಅನುವಾದಿಸಿದರು. ಅವರು ಚೀನಾದಲ್ಲಿನ ಬದಲಾವಣೆಗಳ ಬಗ್ಗೆ ವ್ಯಾಪಕವಾಗಿ ಬರೆದರು ಮತ್ತು ಈ ವಿಷಯದ ಬಗ್ಗೆ ಪುಸ್ತಕವನ್ನು ಪ್ರಕಟಿಸಿದರು.

ಬುದ್ಧದೇಬ್, ಒಬ್ಬ ಸಮರ್ಪಿತ ಕಮ್ಯುನಿಸ್ಟ್ ಆಗಿ, ಸರಳ ಜೀವನವನ್ನು ನಡೆಸಿದರು ಮತ್ತು ಮುಖ್ಯಮಂತ್ರಿಯಾಗಿ ಅವರ ಅಧಿಕಾರಾವಧಿಯಲ್ಲಿ ಮತ್ತು ತರುವಾಯ, ಸಾಧಾರಣ ಎರಡು ಕೋಣೆಗಳ ಅಪಾರ್ಟ್ಮೆಂಟ್‌ನಲ್ಲಿ ವಾಸಿಸುತ್ತಿದ್ದರು.

ಅವರ ನಿಧನದೊಂದಿಗೆ ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಮತ್ತು ಎಡ ಚಳವಳಿಯ ಒಂದು ಅಧ್ಯಾಯ ಕೊನೆಗೊಂಡಿದೆ. ಪೊಲಿಟ್‌ಬ್ಯೂರೋ ಅವರ ನೆನಪಿಗೆ ಕ್ರಾಂತಿಕಾರಿ ಗೌರವ ಸಲ್ಲಿಸಿದೆ ಮತ್ತು ಅವರ ಪತ್ನಿ ಮೀರಾ ಹಾಗೂ ಮಗ ಸುಚೇತನ್ ಅವರಿಗೆ ತನ್ನ ಆಳವಾದ ಸಂತಾಪವನ್ನು ತಿಳಿಸಿದೆ.

ಬುದ್ದದೇವ್ ಭಟ್ಟಾಚಾರ್ಯ ಹಾಗೂ ಭೀಮಶಿ ಕಲಾದಗಿ ಅವರಿಗೆ ಸಿಪಿಐ(ಎಂ) ರಾಜ್ಯ ಸಮಿತಿಯಿಂದ ಶ್ರದ್ಧಾಂಜಲಿ

ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ, ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾಗಿದ್ದ ಬುದ್ದದೇವ್ ಭಟ್ಟಾಚಾರ್ಯ (80 ವರ್ಷ) ಅವರು ಆಗಸ್ಟ್ 8 ರಂದು ನಿಧನರಾರದರು. ಹಾಗೂ ರಾಜ್ಯದ ಸಿಪಿಐ(ಎಂ) ಮುಖಂಡರಾದ ಭೀಮಶಿ ಕಲಾದಗಿ (82 ವರ್ಷ) ಅವರು ಆಗಸ್ಟ್ 5 ರಂದು ನಿಧನರಾದರು. ಈ ಇಬ್ಬರು ಹಿರಿಯ ನಾಯಕರಿಗೆ ಸಿಪಿಐ(ಎಂ) ನ ರಾಜ್ಯ ಸಮಿತಿ ಶ್ರದ್ಧಾಂಜಲಿ ಅರ್ಪಿಸಿತು.

ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ನಲ್ಲಿರುವ ಪಕ್ಷದ ರಾಜ್ಯ ಸಮಿತಿ ಕಚೇರಿಯಲ್ಲಿ ಆಗಸ್ಟ್ 8 ರಂದು ನಡೆದ ಶ್ರದ್ಧಾಂಜಲಿ

ಪುಟ 10 ಕ್ಕೆ





ಬಿಡಿಎ ಕಾಂಪ್ಲೆಕ್ಸ್‌ಗಳ ಖಾಸಗೀಕರಣಕ್ಕೆ ಸರ್ಕಾರ ನಿರ್ಧಾರ

20 ಸಾವಿರ ಕೋಟಿ ಆಸ್ತಿ ಖಾಸಗಿಗೆ!

ಲಿಂಗರಾಜು ಮಳವಳ್ಳಿ

ಬೆಂಗಳೂರು ನಗರದ ಏಳು ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಮರು ನಿರ್ಮಾಣ ಮಾಡುವ ಹೆಸರಿನಲ್ಲಿ ಖಾಸಗಿ ಕಂಪನಿಗಳಿಗೆ ಗುತ್ತಿಗೆಗೆ ಕೊಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಇಂದಿರಾನಗರ ವಾಣಿಜ್ಯ ಸಂಕೀರ್ಣವನ್ನು Mavrick Holidings Investments Pvt, Ltd ಕಂಪನಿಗೂ ಹಾಗೂ ಕೋರಮಂಗಲ, ಹೆಚ್‌ಎಸ್‌ಆರ್ ಬಡಾವಣೆ, ಆರ್.ಟಿ.ನಗರ, ಆಸ್ಟಿನ್ ಟೌನ್, ಸದಾಶಿವನಗರ ಮತ್ತು ವಿಜಯನಗರ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು M-FAR Developers Pvt Ltd ಕಂಪನಿಗೆ ಸಾರ್ವಜನಿಕ – ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಮರು ನಿರ್ಮಾಣ ಮಾಡುವ ಗುತ್ತಿಗೆ ನೀಡಲಾಗಿದೆ.

ಈ ಏಳೂ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಟೆಂಡರ್ ಪಡೆದ ಖಾಸಗಿ ಕಂಪನಿಗಳು ಮರು ನಿರ್ಮಾಣ ಮಾಡಿ, ಅದರಲ್ಲಿ 70:30 ಅನುಪಾತದಲ್ಲಿ 30 ವರ್ಷಕ್ಕೆ ಗುತ್ತಿಗೆ ನೀಡುವುದೆಂದೂ; ಮುಂದಿನ 30 ವರ್ಷಕ್ಕೆ ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ.

ಮೇವರಿಕ್–ಎಂಫಾರ್ ಯಾರು?

ಮೇವರಿಕ್ ಕಂಪನಿಯು ಬೆಂಗಳೂರಿನ ಬಿಜೆಪಿ ಶಾಸಕರೊಬ್ಬರಿಗೆ ಸೇರಿದ್ದರೆ, ಎಂ–ಫಾರ್ ಕಂಪನಿಯಲ್ಲಿ ಕಾಂಗ್ರೆಸ್ ನ ಮಂತ್ರಿಯೊಬ್ಬರು ಹಾಗು ಕೆಲ ಶಾಸಕರು ಹೂಡಿಕೆ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಹೀಗಾಗಿ 2008ರಲ್ಲೇ ಆರಂಭವಾದ ಈ ಪ್ರಕ್ರಿಯೆ ಇದೀಗ ತರಾತುರಿಯಲ್ಲಿ ಜಾರಿಯಾಗಿದೆ. ಈಗಾಗಲೇ ಸದಾಶಿವನಗರ, ವಿಜಯನಗರ ಬಿಡಿಎ ಕಾಂಪ್ಲೆಕ್ಸ್ ನ್ನು ಕೆಡಹುವ ಕೆಲಸವೂ ನಡೆದಿದೆ. ಎಲ್ಲ ವಾಣಿಜ್ಯ ಸಂಕೀರ್ಣಗಳ ಎಲ್ಲ ವರ್ತಕರಿಗೆ ಮಳಿಗೆಗಳನ್ನು ಒಂದು ತಿಂಗಳಲ್ಲಿ ಖಾಲಿ ಮಾಡುವಂತೆ ನೋಟೀಸ್ ಕೂಡ ನೀಡಲಾಗಿದೆ.

2008ರಲ್ಲಿ ಇಂದಿರಾನಗರ ಬಿಡಿಎ ವಾಣಿಜ್ಯ ಸಂಕೀರ್ಣವನ್ನು ಮರು ನಿರ್ಮಾಣ ಮಾಡಲು ಪಿಪಿಪಿ ಮಾದರಿಯಲ್ಲಿ ಮೇವರಿಕ್ ಕಂಪನಿಗೆ ಗುತ್ತಿಗೆಯ ಟೆಂಡರ್ ನೀಡಲಾಗಿತ್ತು. ಆದರೆ ಅಲ್ಲಿನ ನಿವಾಸಿಗಳ ವಿರೋಧದ ಕಾರಣ, ಈ ಪ್ರಕ್ರಿಯೆ ಅಲ್ಲಿಗೆ ನಿಂತಿತ್ತು. ಬಸವರಾಜ ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ಅಂದರೆ 28 ಏಪ್ರಿಲ್ 2022 ರಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಅಧಿಕಾರಿಗಳ ಸಭೆಯಲ್ಲಿ ಹಿಂದಿನ ಟೆಂಡರ್ ಅನ್ನು ಮುಂದುವರೆಸಲು ಕ್ರಮಕೈಗೊಳ್ಳುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೂಚಿಸಲಾಗಿದೆ. ಅದರಂತೆ ಮುಂದುವರಿದು, 2023 ಜೂನ್ ನಂತರ ಬಂದ ಹೊಸದಾಗಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಅವಧಿಯಲ್ಲಿ, ಅಂದರೆ 26 ಸೆಪ್ಟೆಂಬರ್ 2023 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ಬಿಡಿಎ ಆಯುಕ್ತರಿಗೆ ಪತ್ರ ಬರೆದು, ಸದರಿ ಟೆಂಡರ್ ಅನ್ನು ಮುಂದುವರಿಸಿ, ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವಂತೆ ಸೂಚಿಸಿದ್ದಾರೆ.

ಹೀಗಾಗಿ ಇಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸರ್ಕಾರಗಳು ಈ ಯೋಜನೆಗೆ ಅಧಿಕೃತ ಮುದ್ರೆ ಒತ್ತಿವೆ ಎಂಬುದು ಸ್ಪಷ್ಟ. ಮಾತ್ರವಲ್ಲದೇ 2008 ರಿಂದ 2024ರವರೆಗೆ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಈ ಯೋಜನೆಯನ್ನು ತಾತ್ವಿಕವಾಗಿ ವಿರೋಧಿಸಿಲ್ಲ, ಜತೆಗೆ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಾಗಿದ್ದವು.

ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆದ ತೀರ್ಮಾನವು ಗೊಂದಲಮಯವೂ, ಸ್ವಾರಸ್ಯಕರವೂ ಆಗಿದೆ. ನಡಾವಳಿಯಲ್ಲಿ ಹೀಗೆ ಹೇಳಲಾಗಿದೆ. ‘2017–18ರಲ್ಲಿ ಇಂದಿರಾನಗರ ಬಿಡಿಎ ವಾಣಿಜ್ಯ ಸಂಕೀರ್ಣವನ್ನು ಮೇವರಿಕ್ ಕಂಪನಿಗೂ, ಕೋರಮಂಗಲ, ಹೆಚ್‌ಎಸ್‌ಆರ್ ಬಡಾವಣೆ, ಆರ್.ಟಿ.ನಗರ, ಆಸ್ಟಿನ್ ಟೌನ್, ಸದಾಶಿವನಗರ ಮತ್ತು ವಿಜಯನಗರ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು M-FAR Developers Pvt Ltd ಕಂಪನಿಗೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಮರು ನಿರ್ಮಾಣ ಮಾಡುವ ಗುತ್ತಿಗೆ ನೀಡಲಾಗಿದ್ದು, ಇದಕ್ಕೆ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾದ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಅನ್ನು ತಡೆಹಿಡಿಯಲು ಆದೇಶಿಸಲಾಗಿತ್ತು. ಆದರೆ ತಡೆಹಿಡಿಯಲಾದ/ರದ್ದುಪಡಿಸಲಾದ ಆದೇಶವನ್ನು ಟೆಂಡರ್ ಪಡೆದ ಕಂಪನಿಗಳಿಗೆ ಮಾಹಿತಿ ತಿಳಿಸಲಾಗಿರುವುದಿಲ್ಲ. ಆದಕಾರಣ, ಇದೇ ಟೆಂಡರ್ ಅನ್ನು ಮುಂದುವರಿಸಿ, ಯೋಜನೆಯನ್ನು ಕಾರ್ಯಗತಗೊಳಿಸಲು ಆದೇಶಿಸಲಾಗಿದೆ’ ಎಂದು ಹೇಳಲಾಗಿದೆ.

ಅಂದರೆ ಈ ತೀರ್ಮಾನವು ಹಿಂದಿನ ಸರ್ಕಾರದ ಅವಧಿಯಲ್ಲೇ ಆಗಿದ್ದು, ತಮ್ಮದೇನು ಪಾತ್ರವಿಲ್ಲ ಎಂಬಂತೆ ಬಿಂಬಿಸಿಕೊಳ್ಳಲು ಬೊಮ್ಮಾಯಿ ಸರ್ಕಾರ ಯತ್ನಿಸಿದರೆ, ಇದೀಗ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಇದು ಬಿಜೆಪಿ ಸರ್ಕಾರದ ಅವಧಿಯಲ್ಲೇ ಆಗಿರುವ ಆದೇಶ ಎಂದು ನುಣುಚಿಕೊಳ್ಳುವ ಪ್ರಯತ್ನ ನಡೆಸಿದೆ.

20 ಸಾವಿರ ಕೋಟಿ ರೂಪಾಯಿ ಆಸ್ತಿ ಖಾಸಗಿಗೆ!

ಏಳೂ ಬಿಡಿಎ ಕಾಂಪ್ಲೆಕ್ಸ್‌ಗಳ ಒಟ್ಟು ವಿಸ್ತೀರ್ಣ 25 ಎಕರೆಯಷ್ಟಿದೆ. ಈ ಆಸ್ತಿಯ ಮೌಲ್ಯ ಸುಮಾರು 20 ಸಾವಿರ ಕೋಟಿ ಬಾಳುತ್ತದೆ! ಇಂತಹ ಸಾರ್ವಜನಿಕರ ಸ್ವತ್ತನ್ನು ಖಾಸಗಿಯವರಿಗೆ ನೀಡುವ ತೀರ್ಮಾನದ ಹಿಂದೆ ನೂರಾರು ಕೋಟಿ ರೂಪಾಯಿಗಳ ಕಿಕ್ ಬ್ಯಾಕ್ ವ್ಯವಹಾರ ನಡೆದಿರುವ ಕುರಿತು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ.

ಈ ಏಳೂ ಬಿಡಿಎ ಕಾಂಪ್ಲೆಕ್ಸ್‌ಗಳು ಆಯಕಟ್ಟಿನ ಜಾಗದಲ್ಲಿವೆ. ಉದಾಹರಣೆಗೆ ಹೆಚ್‌ಎಸ್‌ಆರ್ ಮತ್ತು ಕೋರಮಂಗಲ ಬಿಡಿಎ ಕಾಂಪ್ಲೆಕ್ಸ್ ಇರುವ ಜಾಗ ಪ್ರಸ್ತುತ ಚದರ ಅಡಿಗೆ 50 ಸಾವಿರ ರೂಪಾಯಿವರೆಗೂ ಇದೆ. ಹೀಗಾಗಿ ಇಂತಹ ಬೆಲೆಬಾಳುವ ಆಸ್ತಿಗಳನ್ನು ಖಾಸಗಿಯವರಿಗೆ ವಹಿಸುವುದು ಅಕ್ಷರಶಃ ಆತ್ಮಾಹುತಿ ನಿರ್ಧಾರವಾಗುತ್ತದೆ. ಮಾತ್ರವಲ್ಲದೇ ಸಾರ್ವಜನಿಕ ಆಸ್ತಿಗಳನ್ನು ಮಾರಾಟ ಮಾಡುತ್ತಾ ಹೋದಲ್ಲಿ ಭವಿಷ್ಯದ ಪೀಳಿಗೆಗೆ ಆಸ್ಪತ್ರೆ, ಶಾಲೆ, ಆಟದ ಮೈದಾನ ಇತ್ಯಾದಿಗಳಿಗಾಗಿ ಜಮೀನುಗಳೇ ಇಲ್ಲದ ಸ್ಥಿತಿ ನಿರ್ಮಾಣವಾಗಬಹುದು.

ಶಾಪಿಂಗ್ ಮಾಲ್ ಕಟ್ಟಲು ಬಿಡಿಎ ಗೆ ಸಾಮರ್ಥ್ಯ ಇಲ್ಲವೇ?

ಬಿಡಿಎ ಕಾಂಪ್ಲೆಕ್ಸ್‌ಗಳನ್ನು ಸರಿಯಾಗಿ ನಿರ್ವಹಣೆ ಮಾಡಿದ್ದೇ ಆದಲ್ಲಿ ಇವುಗಳಿಂದಲೇ ಸಾಕಷ್ಟು ಆದಾಯವನ್ನು ಗಳಿಸಲು ಸಾಧ್ಯವಿದೆ. ಆದಾಯ ಸೋರಿಕೆ ಮತ್ತು ಲಂಚಗುಳಿತನವನ್ನು ನಿಯಂತ್ರಣಕ್ಕೆ ತರಲು ಕಟ್ಟುನಿಟ್ಟಿನ ಕ್ರಮ ಆಗಬೇಕು. ಉದಾಹರಣೆಗೆ ಹೆಚ್‌ಎಸ್‌ಆರ್ ಬಿಡಿಎ ಕಾಂಪ್ಲೆಕ್ಸ್ ಸಾಕಷ್ಟು ಮಳಿಗೆಗಳು ಖಾಲಿ ಬಿದ್ದಿವೆ. ಇತ್ತೀಚೆಗೆ ಈ ವಾಣಿಜ್ಯ ಸಂಕೀರ್ಣವನ್ನು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ದುರಸ್ತಿಗೊಳಿಸಲಾಗಿದೆ. ಹೀಗಿದ್ದೂ ಖಾಸಗಿ ಕಂಪನಿಗೆ ಪರಬಾರೆ ಮಾಡುವ ತೀರ್ಮಾನದ ಹಿಂದೆ ಸಾರ್ವಜನಿಕ ಹಿತಾಸಕ್ತಿಯಂತೂ ಕಾಣುತ್ತಿಲ್ಲ! ಬದಲಾಗಿ ವ್ಯಕ್ತಿಗತ ಹಿತಾಸಕ್ತಿಗಳು ಕೆಲಸ ಮಾಡಿವೆ.

ಶಿಥಿಲಾವಸ್ಥೆಯಲ್ಲಿರುವ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಮರು ನಿರ್ಮಾಣ ಮಾಡುವುದೇ ಆದಲ್ಲಿ, ಸರ್ಕಾರವೇ ಬ್ಯಾಂಕ್ ಸಾಲ ಪಡೆದು ಮರು ನಿರ್ಮಾಣ ಮಾಡಲು ಸಾಧ್ಯವಿದೆ. ಇದರ ಬದಲು ಖಾಸಗಿ ಕಂಪನಿಗೆ ಕೊಡುವ ಉದ್ದೇಶವು ಜನಹಿತದ ತೀರ್ಮಾನ ಆಗಲಾರದು. ಜೊತೆಗೆ ಹೆಚ್‌ಎಸ್‌ಆರ್ ಮತ್ತು ಕೋರಮಂಗಲ ಬಿಡಿಎ ಕಾಂಪ್ಲೆಕ್ಸ್‌ಗಳು ಸೇರಿದಂತೆ ಕೆಲ ಬಿಡಿಎ ಕಾಂಪ್ಲೆಕ್ಸ್‌ಗಳು ಇನ್ನೂ ಹತ್ತಾರು ವರ್ಷ ಬಾಳಿಕೆ ಬರುವಷ್ಟು ಸದೃಢವಾಗಿವೆ ಮತ್ತು ಸುಸ್ಥಿತಿಯಲ್ಲಿವೆ. ಹೀಗಿರುವಾಗ ಒಡೆದು ಕಟ್ಟುವುದಾದರೂ ಏಕೆ? ಎಂಬುದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಾರ್ವಜನಿಕರಿಗೆ ಸ್ಪಷ್ಟನೆ ನೀಡುವ ಗೋಜಿಗೆ ಹೋಗಿಲ್ಲ.

ಬಿಡಿಎ ವಸತಿ ಬಡಾವಣೆ ನಿರ್ಮಾಣ ಮಾಡುವಾಗ ನಿವಾಸಿಗಳ ಅನುಕೂಲಕ್ಕಾಗಿ ಅಲ್ಲಿನ ಸಿ.ಎ. ನಿವೇಶನಗಳಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಾಣ ಮಾಡಲಾಗಿತ್ತು. ಹೀಗಿರುವಾಗ ಬಡಾವಣೆಯ ನಿವಾಸಿಗಳ ಅಭಿಪ್ರಾಯವನ್ನೂ ಸಂಗ್ರಹಿಸದೇ, ಜನರನ್ನು ಕತ್ತಲಲ್ಲಿ ಇಟ್ಟು ನಾಲ್ಕು ಗೋಡೆಯ ಮಧ್ಯೆ ಏಕಾಏಕಿ ತೀರ್ಮಾನ ಮಾಡುವುದು ಜನವಿರೋಧಿ ತೀರ್ಮಾನವಾಗುತ್ತದೆ. ಜೊತೆಗೆ ಕಾನೂನಿನ ಉಲ್ಲಂಘನೆಯೂ ಆಗುತ್ತದೆ.

ಉದಾಹರಣೆಗೆ, ಕೋರಮಂಗಲ ಬಿಡಿಎ ವಾಣಿಜ್ಯ ಸಂಕೀರ್ಣದಲ್ಲಿ ಬೆಸ್ಕಾಂ, ರೈಲ್ವೆ, ಉಪ ನೋಂದಣಾಧಿಕಾರಿ ಕಚೇರಿಗಳು ಇರುವುದರಿಂದ ಸಾರ್ವಜನಿಕರಿಗೆ ಬಹಳಷ್ಟು ಅನುಕೂಲವಾಗಿದೆ. ಜೊತೆಗೆ ಬಿಡಿಎ ವಾಣಿಜ್ಯ ಸಂಕೀರ್ಣಗಳಲ್ಲಿ ಗ್ರಾಹಕರಿಗೆ ಕೈಗೆಟುಕುವ ಬೆಲೆಯಲ್ಲಿ ಸರಕುಗಳನ್ನು ಖರೀದಿಸಬಹುದಾಗಿದೆ. ಅಷ್ಟು ಮಾತ್ರವಲ್ಲದೇ, ಅಲ್ಲಿನ ನಿವಾಸಿಗಳಿಗೆ ಬಿಡಿಎ ವಾಣಿಜ್ಯ ಸಂಕೀರ್ಣಗಳು, ಕೇವಲ ವಾಣಿಜ್ಯ ವ್ಯವಹಾರದ ಕೇಂದ್ರವಾಗಿರದೇ, ಬಹಳ ಧೀರ್ಘಕಾಲದಿಂದ ಭಾವನಾತ್ಮಕ ಸಂಬಂಧವನ್ನು ಬೆಸೆದಿವೆ. ಇದು ಸಾಧ್ಯವಾಗಿದ್ದು ಸಾರ್ವಜನಿಕ ಸ್ವತ್ತಾಗಿದ್ದ ಕಾರಣಕ್ಕೆ. ಜನರಲ್ಲಿ ಇದು ನಮ್ಮದು ಎಂಬ ಭಾವನೆ ಮೂಡಿರುತ್ತದೆ. ಹೀಗಾಗಿಯೇ ಬೆಂಗಳೂರು ನಗರದ ನಾಗರಿಕರು ಭಾವನಾತ್ಮಕ ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ. ಹೀಗಿರುವಾಗ ಸರ್ಕಾರದ ಈ ತೀರ್ಮಾನ ಬಿಡಿಎ ಕಾಂಪ್ಲೆಕ್ಸ್ ಜತೆಗಿನ ಜನರ ಭಾವನಾತ್ಮಕ ಸಂಬಂಧವನ್ನು ನಿರ್ದಯವಾಗಿ ಕತ್ತರಿಸಿಹಾಕುವ ಕಟುಕತನದ ತೀರ್ಮಾನವಲ್ಲವೇ!

ಸಾರ್ವಜನಿಕ–ಖಾಸಗಿ ಸಹಭಾಗಿತ್ವ (Public Private Partnership) ಎಂಬುದು ಹೆಸರಿಗಷ್ಟೇ ಸಹಭಾಗಿತ್ವ. ಬದಲಾಗಿ ಇದು ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಪ್ರಕ್ರಿಯೆಯೇ ಆಗಿದೆ. ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲೇ ಪಿಪಿಪಿ ಯೋಜನೆಯನ್ನು ಪ್ರಸ್ತಾಪಿಸಿದ್ದಾರೆ. ಬಿಡಿಎ ಕಾಂಪ್ಲೆಕ್ಸ್ ಮಾತ್ರವಲ್ಲದೇ ಹಲವು ರಂಗಗಳಲ್ಲಿ ಪಿಪಿಪಿ ಯೋಜನೆಯನ್ನು ತರುವುದನ್ನು ಪ್ರಸ್ತಾಪಿಸಿದ್ದಾರೆ. ಸರ್ಕಾರಿ ಆಸ್ತಿಗಳ ಮಾರಾಟಕ್ಕೆ ನಗದೀಕರಣ ಯೋಜನೆಯನ್ನೂ ತರಲು ಹೊರಟಿದ್ದಾರೆ. ಹೀಗಾಗಿ ಸರ್ಕಾರದ ಆರ್ಥಿಕ ನೀತಿಗಳ ಭಾಗವಾಗಿ ಈ ಪ್ರಕ್ರಿಯೆ ನಡೆಯುತ್ತಿದೆ ಎಂಬುದು ಸ್ಪಷ್ಟ. ರಾಜ್ಯದ ಜನರ ತೆರಿಗೆ ಹಣದಿಂದ ಕಟ್ಟಿ ಬೆಳೆಸಲಾದ ಆಸ್ತಿ, ಸಂಪತ್ತನ್ನು ಖಾಸಗಿಯವರಿಗೆ ಒತ್ತೆ ಇಡುವ ಜನವಿರೋಧಿಯನ್ನು ಒಪ್ಪಲಾಗದು.

ಪಿಪಿಪಿ ಮಾದರಿ ಮತ್ತು ನಗದೀಕರಣ ಯೋಜನೆಗಳು ಕೇಂದ್ರದ ಮೋದಿ ಸರ್ಕಾರ ಕಳೆದ ಹತ್ತು ವರ್ಷಗಳಿಂದಲೂ ಅನುಸರಿಕೊಂಡು ಬಂದ ನೀತಿಗಳೇ ಆಗಿವೆ. ಇವು ನವ ಉದಾರೀಕರಣ ನೀತಿಗಳ ಉಪ ಉತ್ಪನ್ನಗಳಷ್ಟೆ. ಇಂತಹ ಕಾರ್ಪೋರೇಟ್ ಬಂಡವಾಳದಾರರ ತುಷ್ಟೀಕರಣದ ಮಾದರಿಗಳನ್ನೇ ರಾಜ್ಯದ ಕಾಂಗ್ರೆಸ್ ಸರ್ಕಾರವೂ ಅನುಸರಿಸುತ್ತಿರುವುದು ವಿಪರ್ಯಾಸ.

ಬಾಂಗ್ಲಾದೇಶದಲ್ಲಿ ಬಂಡಾಯ

ಪ್ರಕಾಶ್ ಕಾರತ್



ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ವಾಜೆದ್‌ರ ಸರ್ವಾಧಿಕಾರಿ ಸರಕಾರದ ವಿರುದ್ಧ ಎದ್ದ ಸಾಮೂಹಿಕ ಬಂಡಾಯ, ಸರಕಾರದ ಪತನ ಹಾಗೂ ಶೇಖ್ ಹಸೀನಾ ಪಲಾಯನ ಮಾಡುವುದರೊಂದಿಗೆ ನಾಟಕೀಯ ಫಲಿತಾಂಶದಲ್ಲಿ ಕೊನೆಗೊಂಡಿದೆ. ಆಗಸ್ಟ್ 5ರ ಸೋಮವಾರ ಕರೆ ನೀಡಲಾಗಿದ್ದ "ಢಾಕಾ ಮಾರ್ಚ್" ವೇಳೆ ಪ್ರತಿಭಟನಾ ನಿರತ ಸಾವಿರಾರು ವಿದ್ಯಾರ್ಥಿಗಳು ರಾಜಧಾನಿ ತಲುಪಿ ಪ್ರಧಾನಿ ನಿವಾಸಕ್ಕೆ ಮುತ್ತಿಗೆ ಹಾಕಿದರು. ಪ್ರತಿಭಟನೆ ನಡೆಸುತ್ತಿರುವ ನಾಗರಿಕರ ಮೇಲೆ ಒಂದೇ ಒಂದು ಗುಂಡನ್ನೂ ಹಾರಿಸುವುದಿಲ್ಲ ಎಂದು ಸೇನೆಯ ಮುಖ್ಯಸ್ಥ ಹೇಳಿದ್ದು ಹಸೀನಾರ ಅತಂತ್ರ ಸರಕಾರಕ್ಕೆ ಕೊನೆಯ ಹೊಡೆತವಾಗಿತ್ತು.

ಸ್ವಾತಂತ್ರ್ಯ ಹೋರಾಟಗಾರರ ವಂಶಸ್ಥರಿಗೆ ಸರಕಾರಿ ಉದ್ಯೋಗಗಳಲ್ಲಿ ಕಲ್ಪಿಸಿದ ಶೇಕಡ 30ರಷ್ಟು ಮೀಸಲಾತಿ ವಿರುದ್ಧ ವಿದ್ಯಾರ್ಥಿ ಚಳವಳಿಯಾಗಿ ಈ ಜನಾಂದೋಲನ ಆರಂಭವಾಗಿತ್ತು. ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸುವ ಬದಲು ಹಸೀನಾ ಸರಕಾರ ಪ್ರತಿಭಟನೆಯನ್ನು ದಮನಿಸಲು ಹೊರಟಿತ್ತು. ಈ ನಡುವೆ, ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಿ ಮೀಸಲಾತಿಯನ್ನು ಶೇಕಡ 5ಕ್ಕೆ ಇಳಿಸುವ ಹೊತ್ತಿಗೆ ಪೊಲೀಸ್ ಫೈರಿಂಗ್ ಹಾಗೂ ಆಳುವ ಪಕ್ಷದ ಗೂಂಡಾಗಳ ದಾಳಿಗಳಿಂದ ಸುಮಾರು 200 ವಿದ್ಯಾರ್ಥಿಗಳು ಮತ್ತು ನಾಗರಿಕರು ಮೃತಪಟ್ಟಿದ್ದರು.

ಸಾವುಗಳಿಗೆ ಹೊಣೆಯಾದವರನ್ನು ಶಿಕ್ಷಿಸಬೇಕು ಮತ್ತು ಬಂಧಿತ ಎಲ್ಲಾ ಚಳವಳಿಕಾರರನ್ನು ಬಿಡುಗಡೆ ಮಾಡಬೇಕು ಹಾಗೂ ಹೊಣೆಯನ್ನು ನಿಗದಿಪಡಿಸಬೇಕೆಂಬ ಹೊಸ ಬೇಡಿಕೆಯೊಂದಿಗೆ ಅಲ್ಪಾವಧಿಯ ವಿರಾಮದ ನಂತರ ಚಳವಳಿಯನ್ನು ಪುನರುಜ್ಜೀವನ ಗೊಳಿಸಲಾಗಿತ್ತು. ಶೀಘ್ರವೇ ಅದು ಪ್ರಧಾನಿ ಹಸೀನಾರ ರಾಜೀನಾಮೆ ಬೇಡಿಕೆಯಾಗಿ ಪರಿವರ್ತನೆಗೊಂಡಿತು.

2009ರ ಸಂಸತ್ ಚುನಾವಣೆಗಳಲ್ಲಿ ಹಸೀನಾ ನಾಯಕತ್ವದ ಆವಾಮಿ ಲೀಗ್ ಪಕ್ಷ ಅಧಿಕಾರಕ್ಕೆ ಮರಳಿದ ನಂತರ, ಆಕೆಯ 15 ವರ್ಷಗಳ ಆಡಳಿತ ಕ್ರಮೇಣ ಸರ್ವಾಧಿಕಾರದತ್ತ ಹೆಜ್ಜೆ ಹಾಕಿತು. 2024ರ ಜನವರಿಯಲ್ಲಿ ನಡೆದದ್ದು ಒಳಗೊಂಡಂತೆ ಮೂರು ಸಂಸದೀಯ ಚುನಾವಣೆಗಳು ಆವಾಮಿ ಲೀಗ್ ಪಕ್ಷದ ಪರವಾಗಿ ಏಕಪಕ್ಷೀಯವಾಗಿ ನಡೆದವು. ಪ್ರತಿಪಕ್ಷಗಳನ್ನು ವ್ಯಾಪಕವಾಗಿ ದಮನಿಸಲಾಯಿತು ಮತ್ತು ಪ್ರಭುತ್ವ ಸಂಸ್ಥೆಗಳು ಬಹಿರಂಗವಾಗಿಯೇ ಸರಕಾರದ ಪರವಾಗಿ ಕೆಲಸ ಮಾಡಿದವು. ಉಕ್ಕಿನ–ಮುಷ್ಟಿಯ ಸರ್ವಾಧಿಕಾರ ರೂಪುಗೊಂಡು ಮಾಧ್ಯಮ, ನಾಗರಿಕ ಸಮಾಜ ಮತ್ತು ಎಲ್ಲಾ ಭಿನ್ನಮತಗಳು ದಬ್ಬಾಳಿಕೆಯನ್ನು ಎದುರಿಸಿದವು, ಭಿನ್ನಮತೀಯರು ಬಂಧಿತರಾದರು ಮತ್ತು ಜೈಲು ಸೇರಿದರು.

ಹಸೀನಾ ಆಡಳಿತದ ಮೊದಲ ದಶಕದಲ್ಲಿ ಬಾಂಗ್ಲಾದೇಶ ಆರ್ಥಿಕ ಪ್ರಗತಿಯನ್ನು ಸಾಧಿಸಿತು. ಗಾರ್ಮೆಂಟ್ ರಫ್ತು ಬೆಳವಣಿಗೆಯಿಂದ ಆದ ಅಭಿವೃದ್ಧಿಯಿಂದ ಜಿಡಿಪಿ ಬೆಳೆಯಿತು. ಆದರೆ ಅಭಿವೃದ್ಧಿಯ ಈ ಫಲವು ಒಂದು ಸಣ್ಣ ವಿಭಾಗಕ್ಕಷ್ಟೇ ತಲುಪಿತು. ಅವರಲ್ಲಿ ಬಹಳಷ್ಟು ಜನರು ಆವಾಮಿ ಲೀಗ್‌ನಲ್ಲಿ ಮತ್ತು ಹಸೀನಾರ ಆಪ್ತ–ವಲಯದಲ್ಲಿ ಕಾಣಿಸಿಕೊಂಡರು.

ಮುಂದಿನ ಐದು ವರ್ಷಗಳಲ್ಲಿ ಜಗತ್ತಿನಲ್ಲಿ ಹೆಚ್ಚು ಸಂಪತ್ತು (ಹೈ–ನೆಟ್‌ವರ್ತ್; ಎಚ್‌ಎನ್‌ಡಬ್ಲ್ಯು) ಹೊಂದಿರುವವರ ವಿಚಾರದಲ್ಲಿ ಬಾಂಗ್ಲಾದೇಶ ಮೂರನೇ ತ್ವರಿತ ಬೆಳವಣಿಗೆಯ ದೇಶವಾಗಲಿದೆ ಎಂದು 2019ರಲ್ಲಿ ಅಂದಾಜು ಮಾಡುವಷ್ಟರ ಮಟ್ಟಿಗೆ ಬೆಳವಣಿಗೆಯಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ, ಪ್ರಸ್ತುತ ಬಾಂಗ್ಲಾದಲ್ಲಿ 18 ದಶಲಕ್ಷ ಯುವಜನರು ನಿರುದ್ಯೋಗಿಗಳಾಗಿದ್ದು ಉದ್ಯೋಗಕ್ಕಾಗಿ ಅಲೆದಾಡುತ್ತಿದ್ದಾರೆ. ಭ್ರಷ್ಟಾಚಾರ ವ್ಯಾಪಕವಾಗಿತ್ತು. ಭ್ರಷ್ಟಾಚಾರಿ ವಾಣಿಜ್ಯೋದ್ಯಮಿಗಳ ಕೂಟ ಮತ್ತು ಆಳುವ ಪಕ್ಷದ ಭ್ರಷ್ಟ ರಾಜಕಾರಣಿಗಳ ಸಖ್ಯದಿಂದಾಗಿ ಮಧ್ಯಮ ವರ್ಗದವರು ಮತ್ತು ಬುದ್ಧಿಜೀವಿಗಳು ಪ್ರತ್ಯೇಕಗೊಳ್ಳತೊಡಗಿದರು. ಆಳುವ ಪಕ್ಷಕ್ಕೆ ವರದಾನ ಎಂದು ಬಿಂಬಿಸಲಾದ ಉದ್ಯೋಗದಲ್ಲಿ ಮೀಸಲಾತಿಯ ವಿರುದ್ಧ ಆರಂಭವಾದ ವಿದ್ಯಾರ್ಥಿ ಚಳವಳಿಯು ಸರ್ಕಾರದ ದಬ್ಬಾಳಿಕೆಯಿಂದಾಗಿ ಇನ್ನಷ್ಟು ವಿಸ್ತರಣೆಗೊಂಡು ಶೇಖ್ ಹಸೀನಾ ಸರಕಾರವನ್ನೇ ಬುಡಮೇಲು ಮಾಡುವ ಸಾಮೂಹಿಕ ಚಳವಳಿಯಾಗಿ ಪರಿವರ್ತನೆಗೊಂಡಿತು.

ಇಂಥ ಒಂದು ಚಳವಳಿಯ ಲಕ್ಷಣವನ್ನು ನೋಡಿದರೆ, ಜಮಾತ್–ಎ–ಇಸ್ಲಾಮಿ ಇದರ ವಿದ್ಯಾರ್ಥಿ ವಿಭಾಗದಂಥ ಮೂಲಭೂತವಾದಿ ಶಕ್ತಿಗಳು ಪ್ರತಿಭಟನೆಗಳಲ್ಲಿ ಭಾಗವಹಿಸಲು ಸಾಧ್ಯವಾಯಿತು. ಹಸೀನಾ ಹಠಾತ್ತನೆ ನಿರ್ಗಮಿಸಿದ ನಂತರ ಮತ್ತು ಸರಕಾರಿ ಯಂತ್ರ ಕುಸಿದ ನಂತರ ದೇಶದಲ್ಲಿ ಅರಾಜಕ ವಾತಾವರಣ ಉಂಟಾಗಿದೆ. ನೂರಾರು ಸಾವುಗಳಿಗೆ ಕಾರಣವಾದ ಪೊಲೀಸರೇ ಈಗ ಜನರ ಆಕ್ರೋಶಕ್ಕೆ ತುತ್ತಾಗುತ್ತಿದ್ದಾರೆ. ಅನೇಕ ಪೊಲೀಸ್ ಠಾಣೆಗಳ ಮೇಲೆ ದಾಳಿ ಮಾಡಲಾಗಿದೆ ಅಥವಾ ಮುಚ್ಚಲಾಗಿದೆ. ಆವಾಮಿ ಲೀಗ್ ಕಚೇರಿಗಳ ಮೇಲೆ ವ್ಯಾಪಕ ದಾಳಿಗಳು ನಡೆಯುತ್ತಿವೆ. ಹಸೀನಾ ನೇತೃತ್ವದ ಆ ಪಕ್ಷದ ಕಾರ್ಯಕರ್ತರ ವ್ಯಾಪಾರೋದ್ಯಮಗಳು ಮತ್ತು ಮನೆಗಳೂ ದಾಳಿಗೀಡಾಗಿದ್ದು ಹಲವರನ್ನು ಕೊಲ್ಲಲಾಗಿದೆ.

ಸರಕಾರ ಪತನಗೊಂಡ ನಂತರ ಎರಡು ದಿನಗಳ ಕಾಲ ಅನೇಕ ಜಿಲ್ಲೆಗಳಲ್ಲಿ ಹಿಂದೂ ದೇವಾಲಯಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಹಲವು ದಾಳಿಗಳು ನಡೆದಿವೆ.

ಮೂಲಭೂತವಾದಿಗಳ ಹುನ್ನಾರ

ಆವಾಮಿ ಲೀಗ್ ನಾಯಕರು ಮತ್ತು ವಾಣಿಜ್ಯೋದ್ಯಮಿಗಳ ವಿರುದ್ಧ ಮುಖ್ಯವಾಗಿ ದಾಳಿ ನಡೆಯುತ್ತಿದ್ದರೂ ಮೂಲಭೂತವಾದಿ ಶಕ್ತಿಗಳು ಅರಾಜಕತೆಯ ಲಾಭ ಪಡೆದು ಅಲ್ಪಸಂಖ್ಯಾತರನ್ನು ಟಾರ್ಗೆಟ್ ಮಾಡುತ್ತಿರುವುದು ಸ್ಪಷ್ಟವಾಗಿದೆ.

ಹೃದಯಸ್ಪರ್ಶಿ ನಿಲುವು

ಏನೇ ಇದ್ದರೂ, ಅಲ್ಪಸಂಖ್ಯಾತರ ಪೂಜಾ ಸ್ಥಳಗಳ ರಕ್ಷಣೆಗೆ ಮತ್ತು ಅಲ್ಪಸಂಖ್ಯಾತರನ್ನು ರಕ್ಷಿಸಲು ವಿದ್ಯಾರ್ಥಿ ನಾಯಕತ್ವ, ನಾಗರಿಕ ಸಮಾಜ ಮತ್ತು ಹಲವು ರಾಜಕೀಯ ಪಕ್ಷಗಳು ಕರೆ ಕೊಟ್ಟಿರುವುದು ನಿಜಕ್ಕೂ ಹೃದಯಸ್ಪರ್ಶಿಯಾಗಿದೆ. ವಿದ್ಯಾರ್ಥಿ ಸಮನ್ವಯ ಸಮಿತಿಯ ಕರೆಯ ಮೇರೆಗೆ, ಅನೇಕ ಸ್ಥಳಗಳಲ್ಲಿ ದೇವಸ್ಥಾನಗಳನ್ನು ರಕ್ಷಿಸಲು ಮುಸ್ಲಿಮರು ಮತ್ತು ಹಿಂದೂಗಳನ್ನು ಒಳಗೊಂಡ ದಳಗಳನ್ನು ರಚಿಸಲಾಗಿದೆ.

ಆಡಳಿತ ಮತ್ತು ಕಾನೂನು–ಸುವ್ಯವಸ್ಥೆಯ ಸುಳಿವನ್ನಾದರೂ ಮರುಸ್ಥಾಪಿಸಲು ಮಧ್ಯಂತರ ಸರಕಾರವೊಂದನ್ನು ಸ್ಥಾಪಿಸುವುದು ಅನಿವಾರ್ಯವಾಗಿದೆ. ವಿದ್ಯಾರ್ಥಿಗಳ ಬೇಡಿಕೆಯಂತೆ ಮಧ್ಯಂತರ ಸರಕಾರದಲ್ಲಿ ಪ್ರಧಾನ ಸಲಹೆಗಾರರಾಗಿರಲು ಗ್ರಾಮೀಣ ಬ್ಯಾಂಕ್ ಸಂಸ್ಥಾಪಕ ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ಮಹಮದ್ ಯೂನಸ್ ಸಮ್ಮತಿಸಿದ್ದಾರೆ. ಸರಕಾರದ ಇತರ ಸಲಹೆಗಾರರನ್ನೂ ಕೂಡಲೇ ನೇಮಿಸಬೇಕಿದೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಸುಗಮವಾಗಿ ಸ್ಥಿತ್ಯಂತರಗೊಳ್ಳಲು ನಾಗರಿಕ ಸಮಾಜದ ಸಂಸ್ಥೆಗಳು ಮತ್ತು ಜನತಾಂತ್ರಿಕ–ಜಾತ್ಯತೀತ ಮತ್ತು ಎಡ ಶಶಕ್ತಿಗಳೊಂದಿಗೆ ಸೇರಿಕೊಂಡು ವಿದ್ಯಾರ್ಥಿ ನಾಯಕತ್ವ ಒಟ್ಟಾಗಿ ಕೆಲಸ ಮಾಡಬೇಕಿದೆ. ಜಮಾತ್–ಎ–ಇಸ್ಲಾಮಿ ಮತ್ತು ಮೂಲಭೂತವಾದಿ ಶಕ್ತಿಗಳು ಸಮಾಜದಲ್ಲಿ ಬೇರೂರಿರುವುದರಿಂದ ಹೀಗೆ ಮಾಡಬೇಕಾದುದು ವಿಶೇಷವಾಗಿ ಅಗತ್ಯವಾಗಿದೆ. ಪ್ರಜಾಸತ್ತಾತ್ಮಕ ಶಕ್ತಿಗಳ ವಿಶಾಲ ಏಕತೆ ಮಾತ್ರವೇ ಬಲಪಂಥೀಯ ಮೂಲಭೂತವಾದಿ ಶಕ್ತಿಗಳು ಬಾಂಗ್ಲಾದ ಆಡಳಿತದ ನಿಯಂತ್ರಣವನ್ನು ತೆಗೆದುಕೊಳ್ಳುವುದನ್ನು ತಡೆಯಲು ಸಾಧ್ಯ.

ಪ್ರಸ್ತುತ ಸನ್ನಿವೇಶದಲ್ಲಿ ಅಮೆರಿಕದ ಪಾತ್ರದ ಮೇಲೆ ಬಾಂಗ್ಲಾದೇಶದ ಪ್ರಗತಿಪರ ಮತ್ತು ಎಡ ಶಕ್ತಿಗಳು ನಿಕಟವಾಗಿ ನಿಗಾ ಇಡಬೇಕಿದೆ. ಹಸೀನಾ–ನಂತರದ ಅವಧಿಯಲ್ಲಿ ಬಾಂಗ್ಲಾದ ಕಾರ್ಯಸೂಚಿಯನ್ನು ಮರುರೂಪಿಸುವಲ್ಲಿ ಪಾಕಿಸ್ತಾನ ಅಥವಾ ಚೀನಾಕ್ಕಿಂತ ಅಮೆರಿಕವೇ ಹೆಚ್ಚು ಸಕ್ರಿಯವಾಗಿ ಹಸ್ತಕ್ಷೇಪ ನಡೆಸುವ ಸಾಧ್ಯತೆಯಿದೆ. ತನ್ನ ಇಂಡೋ–ಪೆಸಿಫಿಕ್ ಕಾರ್ಯವ್ಯೂಹಕ್ಕೆ ಬಾಂಗ್ಲಾದೇಶವನ್ನು ಸೆಳೆದುಕೊಳ್ಳುವುದು ಅಮೆರಿಕದ ಹುನ್ನಾರವಾಗಿದೆ.

ಪಿತೂರಿ ಕತೆಗಳು


ಭಾರತದಲ್ಲಿ ಎಂದಿನಂತೆ, ಆರೆಸ್ಸೆಸ್–ಬಿಜೆಪಿ ವಲಯಗಳು ಮತ್ತು ಕಾರ್ಪೊರೇಟ್ ಮಾಧ್ಯಮವು ಬಾಂಗ್ಲಾದ ವಿದ್ಯಮಾನಗಳಿಗೆ ಸಂಬಂಧಿಸಿ ಪುಂಖಾನುಪುಂಖವಾಗಿ ಪಿತೂರಿ ಸಿದ್ಧಾಂತಗಳನ್ನು ಹೆಣೆಯಲು ಆರಂಭಿಸಿವೆ. ಶೇಖ್ ಹಸೀನಾರನ್ನು ಕಿತ್ತೊಗೆಯಲು ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಮತ್ತು ಚೀನಾ ಜಂಟಿಯಾಗಿ ಹುನ್ನಾರ ನಡೆಸಿದ್ದವು ಎಂಬುದು ಗೋದಿ ಮೀಡಿಯಾದಲ್ಲಿ ಹೆಚ್ಚಾಗಿ ಕಂಡು ಬಂದ ಅಂಥ ಒಂದು ಪಿತೂರಿ ಸಿದ್ಧಾಂತವಾಗಿದೆ. ಅದಕ್ಕೆ ನಾನಾ ತಥಾಕಥಿತ ಪುರಾವೆಗಳನ್ನು ಅವು ಉದಾಹರಿಸುತ್ತಿವೆ. ಬಾಂಗ್ಲಾದೇಶದಲ್ಲಿ ಒಂದು ಭ್ರಷ್ಟ ಹಾಗೂ ಸರ್ವಾಧಿಕಾರಿ ಸರಕಾರವನ್ನು ಕಿತ್ತೊಗೆಯಲು ಸಾಮೂಹಿಕ ಚಳವಳಿಯೊಂದು ನಡೆಯುತ್ತದೆಂದು ಭಾರತದ ಆಳುವ ವಲಯಗಳು ಮತ್ತು ಅವುಗಳ ಮಾಧ್ಯಮಗಳಿಗೆ ಕಲ್ಪಿಸಿಕೊಳ್ಳಲೂ ಆಗದ ವಿಷಯವಾಗಿದೆ. ಹಸೀನಾ ಭಾರತಕ್ಕೆ ನಿಕಟವಾಗಿದ್ದರು ಎನ್ನುವ ಅಂಶವೊಂದೇ ಇವರೆಲ್ಲ ಜಾಗತಿಕ ಷಡ್ಯಂತ್ರದ ಸಿದ್ಧಾಂತಗಳನ್ನು ಹರಿಯಬಿಡಲು ಸಾಕು. ಇಂಥದ್ದೊಂದು ಧೋರಣೆಯು ಬಾಂಗ್ಲಾದೇಶದ ಜನರ ಬುದ್ಧಿಮತ್ತೆ ಮತ್ತು ಸ್ವತಂತ್ರ ಮನೋಭಾವವನ್ನು ಅವಮಾನಿಸುತ್ತದೆ.

ಭಾರತದಲ್ಲಿನ ಆಡಳಿತದ ಸ್ವರೂಪವನ್ನು ಗಮನಿಸಿದಾಗ, ಬಾಂಗ್ಲಾದಲ್ಲಿನ ಘಟನಾವಳಿಗಳನ್ನು ಕೂಡ ಹಿಂದೂತ್ವ ಕನ್ನಡಕದಲ್ಲೇ ನೋಡಲಾಗುತ್ತದೆ. ಬಾಂಗ್ಲಾದೇಶದಿಂದ ಒಂದು ಕೋಟಿ ಹಿಂದೂಗಳು ಭಾರತಕ್ಕೆ ಬರಲು ಬಯಸಿದ್ದಾರೆ ಎಂದು ಬಿಜೆಪಿ ಮುಖಂಡ ಹಾಗೂ ಬಂಗಾಳ ವಿಧಾನಸಭೆಯ ಪ್ರತಿಪಕ್ಷ ನಾಯಕ ಸುವೇಂದು ಅಧಿಕಾರಿ ಘೋಷಿಸಿದ್ದಾರೆ. ಅವರಿಗೆ ಭಾರತೀಯ ಪೌರತ್ವ ನೀಡಲು ಪೌರತ್ವ ತಿದ್ದುಪಡಿ ಕಾನೂನನ್ನು (ಸಿಎಎ) ಬಳಸುವಂತೆಯೂ ಅವರು ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ.

ಬಾಂಗ್ಲಾದೇಶಿಗರು ಭಾರತಕ್ಕೆ ಬರುವ ನುಸುಳುಕೋರರು ಎಂದು ಸತತವಾಗಿ ಬಿಂಬಿಸುತ್ತಿರುವುದು ಬಾಂಗ್ಲಾದ ಜನರು ಮತ್ತು ರಾಜಕೀಯ ವಲಯಗಳಲ್ಲಿ ಭಾರತ–ವಿರೋಧಿ ಭಾವನೆ ವ್ಯಾಪಕವಾಗಿರಲು ಒಂದು ಪ್ರಮುಖ ಕಾರಣವಾಗಿದೆ.

ನುಸುಳುಕೋರರು 'ಗೆದ್ದಲುಗಳಂತೆ' ಎಂಬ ಗೃಹ ಸಚಿವ ಅಮಿತ್ ಷಾರ ಕುಖ್ಯಾತ ಹೇಳಿಕೆಯನ್ನು ನೆನಪಿಸಿಕೊಳ್ಳೋಣ. ಮಾಧ್ಯಮ ಮತ್ತು ಹಿಂದೂತ್ವ ವಕ್ತಾರರು ಬಾಂಗ್ಲಾದೇಶದ ಸಾಮೂಹಿಕ ಬಂಡಾಯವನ್ನು ಪ್ರಚೋದನಕಾರಿ ಹಾಗೂ ಋಣಾತ್ಮಕವಾಗಿ ಚಿತ್ರಿಸುವುದರಿಂದ ಬಾಂಗ್ಲಾದಲ್ಲಿನ ಭಾರತ–ವಿರೋಧಿ ಭಾವನೆಯ ಬೆಂಕಿಗೆ ಇನ್ನಷ್ಟು ಪೆಟ್ರೋಲ್ ಸುರಿದಂತಾಗುತ್ತದೆ.

ಬಾಂಗ್ಲಾದೇಶದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಎಂದು ಭಾವಿಸಲಾಗುವ ಯಾವುದೇ ಹೇಳಿಕೆ ಅಥವಾ ಕೃತ್ಯದಿಂದ ಮೋದಿ ಸರಕಾರ ದೂರವುಳಿಯಬೇಕು. ಅಲ್ಲಿ ರಚನೆಯಾಗುವ ಮಧ್ಯಂತರ ಸರಕಾರದೊಂದಿಗೆ ಭಾರತ ಸರಕಾರ ತಾಳ್ಮೆಯಿಂದ ವ್ಯವಹರಿಸಬೇಕು. ಶಾಂತಿ ಮತ್ತು ಸಹಜತೆ ಮರಳಲು ಮತ್ತು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳ ಮೂಲಕ ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಮರಳಿ ಸ್ಥಾಪಿಸುವ ಪ್ರಕ್ರಿಯೆಯಗೆ ಬೆಂಬಲ ನೀಡಬೇಕು.



ಅನು: ವಿಶ್ವ

ಪೊಲಿಟ್ ಬ್ಯೂರೋ ಹೇಳಿಕೆ: ಆಗಸ್ಟ್ 6, 2024

ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗಸ್ಟ್ 6, 2024 ರಂದು ಸಭೆ ಸೇರಿತು. ನಂತರ ಅದು ಈ ಕೆಳಗಿನ ಹೇಳಿಕೆಯನ್ನು ನೀಡಿದೆ:

ವಯನಾಡ್ ದುರಂತ

ಕೇರಳದಲ್ಲಿ ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಜನರು ಸವಾಲುಗಳನ್ನು ಜಯಿಸಲು ಒಂದೇ ವ್ಯಕ್ತಿಯಂತೆ ಒಕ್ಕೊರಲಿನಿಂದ ಎದ್ದು ನಿಂತಿದ್ದಾರೆ ಎಂಬ ಸಂಗತಿಯನ್ನು ಪೊಲಿಟ್ ಬ್ಯೂರೋ ಗಮನಿಸಿದೆ. ಪರಿಹಾರ ನೀಡುವಾಗ ಜನರ ಪುನರ್ವಸತಿಗೆ ಮತ್ತು ಪರಿಹಾರ ಒದಗಿಸಲು ಎಲ್‌ಡಿಎಫ್ ಸರ್ಕಾರ ನಡೆಸುತ್ತಿರುವ ವ್ಯಾಪಕ ಪ್ರಯತ್ನಗಳ ವರದಿಯನ್ನು ಪಿಬಿ ಆಲಿಸಿತು. ಜನರು ಮತ್ತು ಸರ್ಕಾರದ ಪ್ರಯತ್ನಗಳನ್ನು ಪೊಲಿಟ್‌ಬ್ಯುರೊ ಶ್ಲಾಘಿಸಿತು.

ಕೇರಳ ಎಲ್‌ಡಿಎಫ್ ಸರ್ಕಾರದ ವಿರುದ್ಧ ಒಕ್ಕೂಟ ಗೃಹ ಸಚಿವರು ಹರಡಿದ ತಪ್ಪು ಮಾಹಿತಿಯ ಪ್ರಚಾರವನ್ನು ಪೊಲಿಟ್ ಬ್ಯೂರೋ ಖಂಡಿಸಿದೆ. ಅವರ ದಾವೆಗಳು ತಪ್ಪು ಮತ್ತು ಅಸತ್ಯ ಎಂದು ತೋರಿಸಲ್ಪಟ್ಟಿವೆ.

ಪಕ್ಷವು ಪ್ರತ್ಯೇಕ ಬ್ಯಾಂಕ್ ಖಾತೆಯೊಂದಿಗೆ ಸ್ಥಾಪಿಸಿರುವ ವಯನಾಡ್ ಪರಿಹಾರ ನಿಧಿಗೆ ಉದಾರವಾಗಿ ದೇಣಿಗೆ ನೀಡುವಂತೆ ಪೊಲಿಟ್‌ಬ್ಯುರೊ ಜನರಿಗೆ ಮನವಿ ಮಾಡಿದೆ.

ಬಾಂಗ್ಲಾದೇಶ: ಜನತೆಯ ಉಕ್ಕೇರಿದ ಪ್ರತಿಭಟನೆ

ನಿರಂಕುಶ ಮತ್ತು ಭ್ರಷ್ಟ ಆಡಳಿತದ ವಿರುದ್ಧ ವಿದ್ಯಾರ್ಥಿಗಳ ನೇತೃತ್ವದ ಸಾಮೂಹಿಕ ಬಂಡಾಯದಲ್ಲಿ ಬಾಂಗ್ಲಾದೇಶದ ಪ್ರಧಾನ ಮಂತ್ರಿ ಶೇಖ್ ಹಸೀನಾ ಮತ್ತು ಅವರ ಸರ್ಕಾರವನ್ನು ಪದಚ್ಯುತಗೊಳಿಸಲಾಗಿದೆ. ಸಾಮೂಹಿಕ ಪ್ರತಿಭಟನೆಗಳ ಕ್ರೂರ ದಮನದಿಂದಾಗಿ 300ಕ್ಕೂ ಹೆಚ್ಚು ಜೀವಗಳು ನಷ್ಟವಾಗಿವೆ ಎಂದು ಪೊಲಿಟ್‌ಬ್ಯೂರೋ ಆಳವಾದ ದುಃಖವನ್ನು ವ್ಯಕ್ತಪಡಿಸಿದೆ.

ಶಾಂತಿ ಮತ್ತು ಸ್ಥಿರತೆಯನ್ನು ಮರುಸ್ಥಾಪಿಸಲು ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಶಕ್ತಿಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕಾಗಿದೆ. ಬಾಹ್ಯ ಶಕ್ತಿಗಳ ಬೆಂಬಲದೊಂದಿಗೆ ಲಾಭ ಪಡೆಯಲು ಬಯಸುವ ಬಲಪಂಥೀಯ ಮತ್ತು ಮೂಲಭೂತವಾದಿ ಶಕ್ತಿಗಳ ಹುನ್ನಾರಗಳನ್ನು ವಿಫಲಗೊಳಿಸಲು ಇದು ಅವಶ್ಯಕವಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಪರಿಶಿಷ್ಟ ಜಾತಿ ಉಪವರ್ಗೀಕರಣದ ಕುರಿತು ಸುಪ್ರೀಂ ಕೋರ್ಟ್ ತೀರ್ಪು

ಪೊಲಿಟ್‌ಬ್ಯುರೊ ಸುಸ್ಪಷ್ಟ ಮಾರ್ಗಸೂಚಿಗಳ ಆಧಾರದಲ್ಲಿ ಪರಿಶಿಷ್ಟ ಜಾತಿಗಳ ಉಪ-ವರ್ಗೀಕರಣದ ಕುರಿತ ಸುಪ್ರೀಂ ಕೋರ್ಟಿನ ಏಳು ನ್ಯಾಯಾಧೀಶರ ಪೀಠದ 6-1 ಬಹುಮತದ ತೀರ್ಪನ್ನು ಬೆಂಬಲಿಸಿದೆ. ಅದೇ ಸಮಯದಲ್ಲಿ, ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಮೀಸಲಾತಿಯೊಳಗೆ ಕೆನೆ ಪದರವನ್ನು ಪರಿಚಯಿಸುವುದನ್ನು ಪಕ್ಷ ನಿರಂತರವಾಗಿ ವಿರೋಧಿಸಿಕೊಂಡು ಬಂದಿದ್ದು ಅದನ್ನು ಈ ಸಂದರ್ಭದಲ್ಲಿಯೂ ಪುನರುಚ್ಚರಿಸುವುದಾಗಿ ಪೊಲಿಟ್‌ಬ್ಯುರೊ ಹೇಳಿದೆ. ತೀರ್ಪಿನ ಕಾರ್ಯಕಾರಿಯ ಭಾಗವಾಗಿಲ್ಲದಿದ್ದರೂ, ಏಳು ನ್ಯಾಯಾಧೀಶರಲ್ಲಿ ನಾಲ್ವರು ಪ್ರತ್ಯೇಕವಾಗಿ ಕೆನೆ ಪದರವನ್ನು ಪರಿಚಯಿಸುವ ಪರವಾಗಿ ಅಭಿಪ್ರಾಯಪಟ್ಟಿದ್ದಾರೆ.

ಕೋಮು ಧ್ರುವೀಕರಣದ ಆಕ್ರಮಣಕಾರಿ ಅನುಸರಣೆ

ಭಾರತದ ಜನರಿಂದ ಸಂಪೂರ್ಣ ಬಹುಮತ ನಿರಾಕರಿಸಲ್ಪಟ್ಟ ಮೋದಿ ಮತ್ತು ಬಿಜೆಪಿ ಇಂದು ಎನ್‌ಡಿ ಮೈತ್ರಿಕೂಟದ ಸಮ್ಮಿಶ್ರ ಸರ್ಕಾರದ ಮುಖ್ಯಸ್ಥರಾಗಿದ್ದಾರೆ. ಈ ವಾಸ್ತವದ ಹೊರತಾಗಿಯೂ, ಮೋದಿ ಏನೂ ಬದಲಾಗಿಲ್ಲ ಎಂಬಂತೆ ಕಾರ್ಯನಿರ್ವಹಿಸುವುದನ್ನು ಮುಂದುವರೆಸಿದ್ದಾರೆ ಮತ್ತು ಅದು 'ಎಂದಿನ ವ್ಯವಹಾರ'ವಾಗಿದೆ. ಬಹುಮತವನ್ನು ನಿಯಂತ್ರಿಸುವ ರಾಜ್ಯ ವಿಧಾನಸಭೆಗಳಲ್ಲಿ ಬಿಜೆಪಿಯು ಅಲ್ಪಸಂಖ್ಯಾತರನ್ನು ನಿರ್ಲಜ್ಜವಾಗಿ ಗುರಿಯಾಗಿಸುವ ಹೊಸ ಕಾನೂನುಗಳನ್ನು ಜಾರಿಗೆ ತರುತ್ತಿದೆ, ಈ ಮೂಲಕ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತಿದೆ. ಉತ್ತರ ಪ್ರದೇಶ ಮತ್ತು ಉತ್ತರಾಖಂಡ ಸರ್ಕಾರಗಳು ಕನ್ವರ್ ಯಾತ್ರೆಯ ಮಾರ್ಗದಲ್ಲಿ ಅಂಗಡಿಕಾರರು ಮತ್ತು ಬೀದಿ ವ್ಯಾಪಾರಿಗಳು ತಮ್ಮ ನಾಮಫಲಕವನ್ನು ಪ್ರದರ್ಶಿಸಬೇಕು ಎಂದು ಘೋಷಿಸಿದ್ದವು. ಇದು ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಉದ್ದೇಶ ಹೊಂದಿತ್ತು. ಅದೃಷ್ಟವಶಾತ್ ಸುಪ್ರೀಂ ಕೋರ್ಟ್ ಈ ಆದೇಶಗಳ ಅನುಷ್ಠಾನಕ್ಕೆ ತಡೆ ನೀಡಿದೆ.

ಉತ್ತರ ಪ್ರದೇಶ ಸರ್ಕಾರವು 'ಕಾನೂನುಬಾಹಿರ ಧರ್ಮ ಪರಿವರ್ತನೆ (ತಿದ್ದುಪಡಿ) ಮಸೂದೆ, 2024' ಅನ್ನು ಸ್ಪಷ್ಟವಾಗಿ ಅಂತರ್-ಸಮುದಾಯ ವಿವಾಹಗಳನ್ನು ಗುರಿಯಾಗಿಸಿಕೊಂಡು ತಂದಿದೆ. ಇದರಲ್ಲಿ ಹತ್ತು ವರ್ಷಗಳ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಹೆಚ್ಚಿಸಿದೆ.

ಅಸ್ಸಾಂನಲ್ಲಿ, ಮುಸ್ಲಿಮರು ಮತ್ತು ಹಿಂದೂಗಳ ನಡುವೆ ಭೂಮಿ ಮಾರಾಟವನ್ನು ತಡೆಯಲು ಇದನ್ನು 'ಲ್ಯಾಂಡ್ ಜಿಹಾದ್' ಎಂದು ಕರೆಯುವ ಕಾನೂನನ್ನು ಪರಿಗಣಿಸಲಾಗುತ್ತಿದೆ. ಇಂತಹ ವ್ಯವಹಾರಗಳು ಮುಖ್ಯಮಂತ್ರಿಗಳ ಅನುಮತಿಯ ಮೇರೆಗೆ ನಡೆಯುತ್ತಿವೆ! ಉತ್ತರಪ್ರದೇಶ ಮಾದರಿಯಲ್ಲಿ ಲವ್ ಜಿಹಾದ್ ಎಂದು ಕರೆಯಲ್ಪಡುವ ಅಂತರ್ ಸಮುದಾಯ ವಿವಾಹಗಳಿಗೆ ಶಿಕ್ಷೆಯಾಗಿ ಜೀವಾವಧಿ ಶಿಕ್ಷೆಯನ್ನು ಪರಿಚಯಿಸಲು ಅವರು ಪರಿಶೀಲಿಸುತ್ತಿದ್ದಾರೆ.

ಮಹಾರಾಷ್ಟ್ರ ಬಿಜೆಪಿ ನೇತೃತ್ವದ ಸರ್ಕಾರವು 'ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಮಸೂದೆ'ಯನ್ನು ಪರಿಚಯಿಸಿತು, ಇದು ಯುಎಪಿಎಗಿಂತ ಹೆಚ್ಚು ಕರಾಳವಾಗಿ ನಗರ ನಕ್ಸಲಿಸಂ ಅನ್ನು ನಿಗ್ರಹಿಸುವ ಹೆಸರಿನಲ್ಲಿ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಅಪರಾಧೀಕರಿಸಲು ಪ್ರಯತ್ನಿಸುತ್ತದೆ.

ಪಕ್ಷದ 24 ನೇ ಮಹಾಧಿವೇಶನ

ತಮಿಳುನಾಡಿನ ಮಧುರೈನಲ್ಲಿ 2025 ರ ಏಪ್ರಿಲ್ 2 ರಿಂದ 6 ರವರೆಗೆ ಸಿಪಿಐ(ಎಂ) ನ 24 ನೇ ಮಹಾಧಿವೇಶನ ನಡೆಸಲು ಪೊಲಿಟ್ ಬ್ಯೂರೋ ಅನುಮೋದನೆ ನೀಡಿದೆ.

ಬುದ್ಧದೇವ್ ಭಟ್ಟಾಚಾರ್ಯ ಹಾಗೂ ಭೀಮಶಿ ಕಲಾದಗಿ...... ಪುಟ 7 ರಿಂದ

ಸಭೆಯಲ್ಲಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ ಅವರು, 'ಬುದ್ಧದೇವ್ ಅವರ ಮೇಲೆ ಯಾವುದೇ ಕಳಂಕಿತ ಆರೋಪ ಇರಲಿಲ್ಲ. ಅವರು ಬುದ್ಧಿಜೀವಿ ಮತ್ತು ಮೇದಾವಿಯಾಗಿದ್ದರು. ಇದೇ ರೀತಿ ಭೀಮಶಿ ಕಲಾದಗಿ ಅವರೂ ರೈತರ, ಕಾರ್ಮಿಕರ, ಕಮ್ಯೂನಿಸ್ಟ್ ಪಕ್ಷದ ನಾಯಕರಾಗಿ, ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾಗಿ ದುಡಿದರು. ಬಿಜಾಪುರ ಪ್ರದೇಶಕ್ಕೆ ನೀರಾವರಿಗಾಗಿ ಹೋರಾಟ, ಬಡವರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಟ ನಡೆಸಿದರು. ಜನಚಳುವಳಿ ಕಟ್ಟಲು ಮತ್ತು ಪಕ್ಷ ಕಟ್ಟಲು ಭೀಮಶಿ ಅವರು ದುಡಿದಿದ್ದಾರೆ. ಈ ಇಬ್ಬರು ಹಿರಿಯ ನಾಯಕರನ್ನು ನಾವಿಂದು ಕಳೆದುಕೊಂಡಿದ್ದೇವೆ. ದೊಡ್ಡ ನಾಯಕರನ್ನು ಕಳೆದುಕೊಂಡಾಗ ನಾವು ಪಕ್ಷವನ್ನು ಬಲಿಷ್ಠವಾಗಿ ಕಟ್ಟುವುದೇ ಅವರಿಗೆ ಅರ್ಪಿಸುವ ನಿಜವಾದ ಶ್ರದ್ಧಾಂಜಲಿ' ಎಂದರು.

ಜಿ.ಎನ್. ನಾಗರಾಜ್ ಅವರು ಮಾತನಾಡಿ, 'ಬುದ್ಧದೇವ್ ಅವರು ಮಾರ್ಕ್ಸ್‌ವಾದವನ್ನು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಅವರು ಅಪಾರ್ಟ್‌ಮೆಂಟ್ ಒಂದರ ಎರಡು ಕೊಠಡಿಯ ಫ್ಲಾಟ್ ನಲ್ಲಿ ವಾಸವಿದ್ದರು. ಅವರು ಮುಖ್ಯಮಂತ್ರಿಯಾಗಿ ಪಶ್ಚಿಮ ಬಂಗಾಳದಲ್ಲಿ ಯುವಜನರಿಗೆ ಉದ್ಯೋಗ ಸೃಷ್ಟಿಸಬೇಕೆಂಬ ಪಕ್ಷದ ನಿಲುವಿನ ಭಾಗವಾಗಿ ರಾಜ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ಮತ್ತು ಬಂಡವಾಳ ಆಕರ್ಷಿಸುವ ಪ್ರಯತ್ನ ಮಾಡಿದರು. ಇದನ್ನೇ ಬುದ್ಧದೇವ್ ವಿರುದ್ಧ ರೈತರ ನಡುವೆ ಅಪಪ್ರಚಾರ ನಡೆಸಿದರು. ರಾಜ್ಯದಲ್ಲಿ ಕಮ್ಯೂನಿಸ್ಟರನ್ನು ಸೋಲಿಸಲು ದೇಶ ವಿದೇಶಗಳ ಗುತ್ತೇದಾರಿ ಬಂಡವಾಳಗಾರರು ಹಣದ ಹೊಳೆಯನ್ನೇ ಹರಿಸಿದರು' ಎಂದರು.

ಭೀಮಶಿ ಕಲಾದಗಿ ಅವರ ಜೊತೆ 40 ವರ್ಷಗಳ ಪಯಣ ನನ್ನದು ಎಂದ ಜಿ.ಎನ್. ಅವರು, ಭೀಮಶಿಯವರು 'ಕೃಷಿಕೂಲಿಕಾರರ ಸಂಘದ ಮೊದಲ ಅಧ್ಯಕ್ಷರಾಗಿದ್ದರು' ಎಂದರು. ಸಣ್ಣ ರೈತರು, ಕೂಲಿಕಾರರ ಸಮಸ್ಯೆಗಳ ಪರಿಹಾರಕ್ಕಾಗಿ ಹಾಗೂ ಬಿಜಾಪುರ ಜಿಲ್ಲೆಗೆ ನೀರಾವರಿಗಾಗಿ ಹಲವಾರು ಹೋರಾಟಗಳನ್ನು ನಡೆಸಿದ್ದಾರೆ ಎಂದರು.

ಪಕ್ಷದ ಹಿರಿಯ ನಾಯಕರಾದ ನಿತ್ಯಾನಂದ ಸ್ವಾಮಿಯವರು ಮಾತನಾಡಿ, 'ಬುದ್ಧದೇವ್ ಅವರಿಗೆ ರಾಜ್ಯದ ಅಭಿವೃದ್ಧಿ ಬಗ್ಗೆ ಸ್ಪಷ್ಟವಾದ ದೃಷ್ಟಿಕೋನ ಇತ್ತು, ಭೂಸುಧಾರಣೆಯ ಮುಂದುವರಿದ ಭಾಗವಾಗಿ ಕೈಗಾರಿಕೆ ಅಭಿವೃದ್ಧಿ ಕಡೆಗೆ ಭಿನ್ನವಾದ ಹೆಜ್ಜೆ ಇಡಲು ಅವರು ಮುಂದಾದರು. ಕೃಷಿಯ ನಂತರದ ಬೆಳವಣಿಗೆಯಾಗಿ ಕೈಗಾರಿಕೆ ಬೆಳೆಯಬೇಕು. ಕೈಗಾರಿಕೆ ಬೆಳೆಯದೆ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ. ಪಶ್ಚಿಮ ಬಂಗಾಳದಿಂದ ಜನರು ಉದ್ಯೋಗ ಹರಸಿ ದಕ್ಷಿಣ ರಾಜ್ಯಗಳಿಗೆ ಬರುವುದನ್ನು ಪಕ್ಷ ಮನಗಂಡಿತ್ತು. ಕೈಗಾರಿಕೆಗಳ ಸ್ಥಾಪನೆಗೆ ಕೆಲವು ವರ್ಷಗಳ ಹಿಂದೆಯೇ ಮುಂದಾಗಿದ್ದರೆ ಅಲ್ಲಿನ ಯುವಜನರು ನಮ್ಮನ್ನು ಟೀಕಿಸುವ ಅವಕಾಶ ಬರುತ್ತಿರಲಿಲ್ಲ' ಎಂದರು.

ಎಂ.ಕೆ.ಉಪಾಧ್ಯಾಯರ ಗರಡಿಯಲ್ಲಿ ಬೆಳೆದ ಭೀಮಶಿಯವರ ನಿಧನ ದೊಡ್ಡ ನಷ್ಟ ಎಂದ ನಿತ್ಯಾನಂದಸ್ವಾಮಿಯವರು, ಅವರ ಕೆಲಸ ಮುಂದುವರಿಸುವುದೇ ಅವರಿಗೆ ನಿಜವಾದ ಶ್ರದ್ಧಾಂಜಲಿ ಎಂದರು.

ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ. ಪ್ರಕಾಶ್ ಅವರು ಮಾತನಾಡಿ, ಪಶ್ಚಿಮ ಬಂಗಾಳದ ಕಡಿಮೆ ಪ್ರಮಾಣದ ಭೂಮಿ ಮತ್ತು ಅಲ್ಲಿನ ಹೆಚ್ಚಿನ ಜನಸಾಂದ್ರತೆ, ಭೂಸುಧಾರಣೆಯ ನಂತರ ಕೃಷಿಯನ್ನು ಮತ್ತಷ್ಟು ವಿಸ್ತರಿಸಲು ಅವಕಾಶ ಇಲ್ಲದಿರುವುದು, ನಂತರದ ತಲೆಮಾರಿಗೆ ಅನುಕೂಲವಾಗಲು ಕೈಗಾರಿಕೆಗಳ ಸ್ಥಾಪನೆಯ ಅಗತ್ಯತೆ.... ಇಂತಹ ಸಂಕಷ್ಟದ ಸಂದರ್ಭದಲ್ಲಿ ಬುದ್ಧದೇವ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದು, ಇವುಗಳ ಬಗ್ಗೆ ವಿವರಿಸಿದರು.

ಭೀಮಶಿಯವರಿಗೆ ಶ್ರದ್ಧಾಂಜಲಿ ಅರ್ಪಿಸಿ ಮಾತನಾಡಿದ ಪ್ರಕಾಶ್ ಅವರು 'ಮುಳವಾಡ ಏತನೀರಾವರಿ ಯೋಜನೆಗಾಗಿ ಭೀಮಶಿ ಹೋರಾಟ ನಡೆಸಿದರು. ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದ ಮಹಿಳೆಯೊಬ್ಬರಿಗೆ ಪರವಾಗಿ ಹೋರಾಟ ನಡೆಸಿದ ಸಂದರ್ಭದಲ್ಲಿ ಭೀಮಶಿ ಅವರನ್ನು ಲೈಂಗಿಕ ಹಗರಣದ ಆರೋಪಿಗಳು ಅಪಹರಣ ಮಾಡಿ, ಹೋರಾಟ ನಡೆಸದಂತೆ ಒತ್ತಡ ತಂದರು. ಇದಕ್ಕೆ ಒಪ್ಪದಿದ್ದಾಗ ಭೀಮಶಿ ಅವರಿಗೆ ಕೊಲೆ ಬೆದರಿಕೆ ಹಾಕಿದ್ದರು. ಇದರಿಂದ ರೊಚ್ಚಿಗೆದ್ದ ಜನ ಬೀದಿಗಿಳಿದು ಹೋರಾಟ ನಡೆಸಿದರು. ನಂತರ ಪೊಲೀಸರು ಅಪಹರಣವಾಗಿದ್ದ ಭೀಮಶಿಯವರನ್ನು ಹುಡುಕಿ ತಂದರು. ಭೀಮಶಿಯವರು ಯಾವ ಬೆದರಿಕೆಗೂ ಮಣಿಯಲಿಲ್ಲ ಎಂಬುದಕ್ಕೆ ಇದೊಂದು ಉದಾಹರಣೆ' ಎಂದರು.

ಗೋಪಾಲಕೃಷ್ಣ ಹರಳಹಳ್ಳಿ, ಚಂದ್ರಪ್ಪ ಹೊಸ್ಕೆರೆ ಮುಂತಾದವರು ಅಗಲಿದ ಇಬ್ಬರು ನಾಯಕರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಬರಿಗಾಲ ಕಾಂ. ಭೀಮಸಿ ಕಲಾದಗಿ ಇನ್ನಿಲ್ಲ.... ಪುಟ 7 ರಿಂದ

ವಿಧಾನ ತಿಳಿಯಲಿಲ್ಲ. ಎಷ್ಟೋ ವಿದ್ಯಾವಂತ ಸಂಘಟನಾ ನಾಯಕರುಗಳಿಗೇ ಇನ್ನೂ ಮನವರಿಕೆಯಾಗದ ಸಂಘಟನೆಯ ಪ್ರಾಮುಖ್ಯತೆ ಹೆಚ್ಚು ವಿದ್ಯಾಭ್ಯಾಸವಿಲ್ಲದ ಭೀಮಸಿಯವರಲ್ಲಿ ನಿರೀಕ್ಷಿಸುವುದು ಕಷ್ಟ.

ಈ ಕಾರಣದಿಂದಾಗಿ ಅಲ್ಲಿ ಹಲವು ಅತ್ಯಂತ ಧೀರ ಮತ್ತು ವ್ಯಾಪಕ ಹೋರಾಟಗಳು ನಡೆದಿದ್ದರೂ ಕೂಡಾ ರೈತ ಚಳುವಳಿ ಅದರ ಬಿರುಸನ್ನು ಉಳಿಸಿಕೊಳ್ಳಲಾಗಲಿಲ್ಲ. ರಾಜ್ಯ ಮಟ್ಟದ ಹಲವು ಅಧ್ಯಯನ ಶಿಬಿರಗಳು, ತಮ್ಮ ಜಿಲ್ಲೆಗಿಂತ ಕೆಳಮಟ್ಟದಲ್ಲಿದ್ದ ಜಿಲ್ಲೆಗಳಲ್ಲಿ ರೈತ ಸಂಘ, ಇತರ ಸಂಘಟನೆಗಳು ಹಾಗೂ ಪಕ್ಷ ತಮ್ಮ ಜಿಲ್ಲೆಯನ್ನು ಮೀರಿಸಿ ಬೆಳೆದುದನ್ನು ನೋಡಿ ಸಂಘಟನೆಯ ಪ್ರಾಮುಖ್ಯತೆ ಅವರಿಗೆ ಮನವರಿಕೆಯಾಯಿತು. ಅದಕ್ಕಾಗಿ ಸಂಬಂಧಪಟ್ಟ ರಾಜ್ಯ ನಾಯಕತ್ವಗಳ ಸಹಾಯ ಬಯಸಿದರು. ಅದು ಅವಶ್ಯವಾದ ಪ್ರಮಾಣದಲ್ಲಿ ದಕ್ಕಲಿಲ್ಲ.

ನಾನು ಅವರ ಒತ್ತಾಯದ ಮೇರೆಗೆ ಹಲವು ಬಾರಿ ಅಧ್ಯಯನ ಶಿಬಿರಗಳಿಗೆ ಹೋಗಿದ್ದೆ. ಅಲ್ಲಿ ರೈತ ಹಾಗೂ ಪಕ್ಷದ ಸಂಘಟನೆಯನ್ನು ಕಟ್ಟುವುದಕ್ಕೆ ನಿರಂತರವಾಗಿ ನನ್ನ ಸಹಾಯ ಬಯಸಿದರು. ಆದರೆ ನನಗೆ ಕೂಲಿಕಾರ ಸಂಘದ ಜವಾಬುದಾರಿ ನೀಡಿದ ಕಾರಣ ಅಲ್ಲಿಯ ರೈತ ಸಂಘಟನೆಗೆ ಹಾಗೂ ಪಕ್ಷದಲ್ಲಿ ಬಳ್ಳಾರಿ, ರಾಯಚೂರು, ಗುಲಬರ್ಗಾ, ಮಂಡ್ಯ ಜಿಲ್ಲೆಗಳಿಗೆ ಮಾರ್ಗದರ್ಶನದ ಹೊಣೆ, ನಂತರ ದಕ್ಷಿಣ ಕನ್ನಡ ಮೊದಲಾದ ಜಿಲ್ಲೆಗಳ ಹೊಣೆ ವಹಿಸಿದುದರಿಂದ ಹೆಚ್ಚು ಸಹಾಯ ಮಾಡಲಾಗಲಿಲ್ಲ. ಆ ಪಶ್ಚಾತ್ತಾಪವಂತೂ ನನ್ನನ್ನು ಹಲವು ಬಾರಿ ಕಾಡಿದೆ.

ಭೀಮಸಿಯವರದೂ ನನ್ನದೂ ನಾಲ್ಕು ದಶಕಗಳ ಆತ್ಮೀಯ ಬಾಂಧವ್ಯ. ನನಗೆ ಅವರ ಮೊದಲ ಪರಿಚಯ ನಾನು ಅಧಿಕಾರಿಯಾಗಿದ್ದ ಸಂದರ್ಭದ್ದು. ನರಗುಂದ, ನವಲಗುಂದಗಳಲ್ಲಿ ಭುಗಿಲೆದ್ದ ರೈತ ಚಳುವಳಿಯ ಪರಿಚಯ ಮಾಡಿಕೊಳ್ಳಲೆಂದು ಬಂದಾಗ ಅವರನ್ನು ನಮ್ಮ ಕಛೇರಿಯ ಜೀಪಿನಲ್ಲಿ ಸುತ್ತಾಡಿಸಿದ್ದೆ. ಮುಂದಿನ ವರ್ಷ ಬಿಜಾಪುರದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಎರಡನೇ ಸಮ್ಮೇಳನ ನಡೆದಾಗ ನಾನು ವಾಹನದೊಡನೆ ಅದರಲ್ಲಿ ಭಾಗವಹಿಸಿ ಈ ವಾಹನದ ಸೌಲಭ್ಯವನ್ನು ಸಮ್ಮೇಳನಕ್ಕೆ ಒದಗಿಸಿದ ಸಂದರ್ಭದಲ್ಲಿ ಮತ್ತೆ ಅವರ ಭೇಟಿ. ಬಿಜಾಪುರದ ನನ್ನ ಮದುವೆಯಾದ ಕೂಡಲೇ ನನ್ನನ್ನು ಹಾಗೂ ನನ್ನ ಪತ್ನಿಯನ್ನೂ ಬಿಜಾಪುರಕ್ಕೆ ಆಹ್ವಾನಿಸಿದರು. ನನ್ನ ಪತ್ನಿಗೆ ಬಿಜಾಪುರ ದರ್ಶನ ಮಾಡಿಸಿದರು. ಅವರ ಹಾಗೂ ಅಲ್ಲಿಯ ಸಂಗಾತಿಗಳ ಮನೆಗೆ ಭೇಟಿ, ಅವರ ಹೃದಯಪೂರ್ವಕ ಆತಿಥ್ಯ ಇಂದಿಗೂ ನೆನಪಿಟ್ಟುಕೊಳ್ಳುವಂತಹುದು. ಈ ಕಾಲದುದ್ದಕ್ಕೂ ನನ್ನ ಬಗ್ಗೆ ಅಪಾರ ಪ್ರೀತಿ ಹಾಗೂ ಗೌರವವನ್ನು ಹೊಂದಿದ್ದರು. ಅವರ ಅಗಲಿಕೆ ನನಗೆ ಅತ್ಯಂತ ದುಃಖದಾಯಕ ಸಂಗತಿ. ನನ್ನ ಗೌರವ ಪೂರ್ವಕ ಕೆಂಪು ವಂದನೆಗಳು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಒಳ ಮೀಸಲಾತಿ ಪ್ರಶ್ನೆ ಮತ್ತು ಕೆನೆಪದರ

ಮೂಲ: ಪಿ. ಸಂಪತ್
ಕನ್ನಡದಲ್ಲಿ: ನಾಗರಾಜ ನಂಜುಂಡಯ್ಯ

ಭಾರತ ದೇಶದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ನಡೆಯುತ್ತಿರುವ ಹೋರಾಟದ ಪಯಣದಲ್ಲಿ, ಎಸ್.ಸಿ./ಎಸ್.ಟಿ. ಗಳ ಒಳ ಮೀಸಲಾತಿ ಅಥವಾ ಉಪವರ್ಗೀಕರಣ ಕುರಿತಂತೆ ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪು ಐತಿಹಾಸಕವೆಂದು ಪರಿಗಣಿಸಬಹುದು.

ಸಂವಿಧಾನ ಪೀಠದ ಏಳು ನ್ಯಾಯಾಧೀಶರಲ್ಲಿ ಆರು ಮಂದಿ ಆಯಾ ರಾಜ್ಯ ಸರ್ಕಾರಗಳು SC/ST ಸಮುದಾಯಗಳನ್ನು ದೃಢೀಕರಿಸಲು ಉಪ–ವರ್ಗೀಕರಿಸುವ ಹಕ್ಕನ್ನು ಹೊಂದಿವೆ ಎಂದು ತೀರ್ಪು ನೀಡಿರುವುದು ಸ್ವಾಗತಾರ್ಹವಾದದ್ದು.

ಇದು ಕೇವಲ ಕಾನೂನಾತ್ಮಕ ಜಯವಾಗಿರದೆ ಈ ನೆಲದ ಮೇಲೆ ದಲಿತ ಸಮುದಾಯಾದಗಳು ನಡೆಸಿದ ದೀರ್ಘಾವಧಿ ಹೋರಾಟಗಳಿಗೆ ಸಂದ ಜಯವಿದಾಗಿದೆ. ಪ್ರಮುಖವಾಗಿ ದಲಿತ ಶೋಷಣ್ ಮುಕ್ತಿ ಮಂಚ್ (ಡಿಎಸ್‌ಎಂಎಂ), ಕರ್ನಾಟಕದಲ್ಲಿ ದಲಿತ ಹಕ್ಕುಗಳ ಸಮಿತಿ (ಡಿಎಚ್‌ಎಸ್) ಮತ್ತು ಹಲವು ದಲಿತ ಸಂಘರ್ಷ ಸಮಿತಿಗಳು, ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನ ಫ್ರಂಟ್ (ಟಿ.ಎನ್.ಯುಇಎಫ್) ಇವುಗಳೊಂದಿಗೆ ಸಿಪಿಎಂ ಪಕ್ಷದ ಸುದೀರ್ಘ ಜಂಟೀ ಹೋರಾಟಗಳ ಫಲ ಈ ತೀರ್ಪು ಎಂದು ಗುರುತಿಸಬಹುದು.

ಮೀಸಲಾತಿ ನೀತಿಯು ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಮಾದಿಗರಂತಹ ಎಲ್ಲಾ ಉಪ–ಜಾತಿಗಳು, ಸಮುದಾಯಗಳಿಗೆ ಏಕರೂಪದ ಸಮಾನತೆಯ ಪ್ರಯೋಜನವನ್ನು ನೀಡಿಲ್ಲ ಎಂದು ಕಳವಳ ವ್ಯಕ್ತಪಡಿಸಿದ್ದವು. ಜೊತೆಯಲ್ಲಿ ತಮಿಳುನಾಡಿನಲ್ಲಿ ಅರುಂದತಿಯಾರ್; ಮತ್ತು ಪಂಜಾಬ್ ನಲ್ಲಿ ವಾಲ್ಮೀಕಿಗಳು ಮತ್ತು ಮಜಬಿಗಳು ಬಹಳ ಹಿಂದಿನಿಂದಲೂ ಪ್ರತಿಭಟನೆಗಳನ್ನು ಆಯೋಜಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಒಳಮೀಸಲಾತಿ ಕುರಿತಂತೆ 2013 ರಲ್ಲಿ ಸದಾಶಿವ ಆಯೋಗದ ವರದಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಇದೀಗ ಇದನ್ನು ಸಾರ್ವಜನಿಕಗೊಳಿಸಿ ಸೂಕ್ತ ವಿಮರ್ಶೆಗೆ ಒಳಪಡಿಸಬೇಕಾಗಿದೆ. ಅದೇ ರೀತಿ ತಮಿಳುನಾಡು ಸೇರಿದಂತೆ ಕೆಲವು ರಾಜ್ಯಗಳು ಉಪಜಾತಿಗಳ ನಡುವಿನ ನಿರ್ದಿಷ್ಟ ಅಸಮಾನತೆಗಳನ್ನು ಪರಿಶೀಲಿಸಿದ ರಾಜ್ಯ ಮಟ್ಟದ ಆಯೋಗಗಳ ಶಿಫಾರಸುಗಳ ಆಧಾರದ ಮೇಲೆ ಎಸ್ಸಿ ಕೋಟಾದೊಳಗೆ ಉಪ–ವರ್ಗೀಕರಣವನ್ನು ಈಗಾಗಲೇ ಜಾರಿಗೆ ತಂದಿವೆ.



ಇಂತಹ ಉಪವರ್ಗೀಕರಣವನ್ನು ಪ್ರಶ್ನಿಸಿ ವಿವಿಧ ರಾಜ್ಯಗಳಿಂದ ವಿವಿಧ ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್ ನಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಸುಪ್ರೀಂ ಕೋರ್ಟ್ ಏಳು ನ್ಯಾಯಾಧೀಶರ ಪೀಠವು ಉಪ–ವರ್ಗೀಕರಣ ಮತ್ತು ಸಿಂಧುತ್ವದ ವಿಷಯದ ಬಗ್ಗೆ ಇದೀಗ ಈ ತೀರ್ಪಿನ ಮೂಲಕ ಕಾನೂನಾತ್ಮಕ ಗೊಳಿಸಿದೆ. ಇದು ಅತ್ಯಂತ ಸ್ವಾಗತಾರ್ಹ ಮತ್ತು ಐತಿಹಾಸಿಕ ತೀರ್ಪು. ಈ ಹಿಂದೆ ಇ.ವಿ ಚೆನ್ನಯ್ಯ ಮತ್ತು ಆಂದ್ರಪ್ರದೇಶ ರಾಜ್ಯದ ತೀರ್ಪಿನಲ್ಲಿ ಉಪ–ವರ್ಗೀಕರಣವನ್ನು ಪ್ರಸ್ತುತ ತೀರ್ಪಿನ ಸಿಂಧುತ್ವವನ್ನು ತಮಿಳುನಾಡಿನ ಅನುಭವದಿಂದ ನೋಡಬೇಕು.

2007ಕ್ಕೂ ಮುನ್ನ ಅರುಂಧತಿಯಾರ್ ಸಮುದಾಯಗಳು ಉಪವರ್ಗೀಕರಣ ಮತ್ತು ಒಳಮೀಸಲಾತಿಗಾಗಿ ಕಾಲು ಶತಮಾನಕ್ಕೂ ಹೆಚ್ಚು ಕಾಲ ಹೋರಾಟ ನಡೆಸುತ್ತಿದ್ದರೂ ಸಹಾ, ರಾಜ್ಯ ಸರಕಾರ ಕಿಂಚಿತ್ತೂ ಗಮನಹರಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ 2007ರಲ್ಲಿ ಸಿಪಿಐ(ಎಂ) ಮತ್ತು ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನಾ ರಂಗ (ಟಿ.ಎನ್. ಐ.ಇ.ಎಫ್) ಒಟ್ಟಾಗಿ ಸೇರಿ, ಇದರಲ್ಲಿ ಅರುಧಂತಿಯಾರ್ ಸಮುದಾಯದ ವಿವಿಧ ಸಂಘಗಳೊಂದಿಗೆ ಒಗ್ಗೂಡಿಸಿಕೊಂಡು ಆಂದೋಲನದ ಸರಣಿಯನ್ನು ಆರಂಭಿಸಿತ್ತು, ಅದು ಮಹತ್ವದ ತಿರುವು ಪಡೆದಿತ್ತು.



ಈ ಉಪ–ವರ್ಗೀಕರಣ ಏಕೆ?

ಈ ಉಪವರ್ಗೀಕರಣಕ್ಕಾಗಿ, ಹೋರಾಟವನ್ನು ಕೈಗೆತ್ತುಕೊಳ್ಳುವ ಮುನ್ನಾ, ಮೊದಲು, ಸಿಪಿಐ(ಎಂ) ಮತ್ತು ಟಿಎನ್ ಯುಇಎಫ್ ನೇತೃತ್ವದಲ್ಲಿ ಅರುಂಧತಿಯಾರ್ ಸಮುದಾಯವು ಪ್ರಧಾನವಾಗಿ ಬೀಡುಬಿಟ್ಟಿರುವ ಪ್ರದೇಶಗಳಲ್ಲಿ, ಪ್ರಮುಖವಾಗಿ ವಿರುಧುನಗರ, ದಿಂಡಿಗಲ್ ಮತ್ತು ತಮಿಳುನಾಡಿನ ಪಶ್ಚಿಮ ಜಿಲ್ಲೆಗಳ ಹಲವಾರು ಕ್ಷೇತ್ರಗಳಲ್ಲಿ ಸಮೀಕ್ಷೆಗಳನ್ನು ನಡೆಸಲಾಯಿತು. ಈ ಸಮೀಕ್ಷೆಯ ಮೂಲಕ ಹೊರಬಂದ ಅಂಕಿಅಂಶಗಳು ದಲಿತ ಜನಸಂಖ್ಯೆಯಲ್ಲಿ ಅರುಂಧತಿಯರು ಗಣನೀಯ ವರ್ಗವನ್ನು ಹೊಂದಿದ್ದರೂ ಅವರಲ್ಲಿ ಒಬ್ಬರೂ ಜಿಲ್ಲಾಧಿಕಾರಿಯಾಗಿರಲಿಲ್ಲ ಎಂದು ಸಮೀಕ್ಷೆಗಳಲ್ಲಿ ಬಹಿರಂಗವಾಯಿತು. ಕೆಲವರು ಮಾತ್ರ ವೈದ್ಯರು ಅಥವಾ ಸರ್ಕಾರಿ ನೌಕರರಾಗಿದ್ದು, ಪದವೀಧರರ ಸಂಖ್ಯೆಯೂ ಬಹಳ ಕಡಿಮೆ ಇತ್ತು. ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಅವರ ಪ್ರಾತಿನಿಧ್ಯವು ಶೇಕಡಾ 0.5 ಕ್ಕಿಂತ ಕಡಿಮೆಯಿತ್ತು. ಅವರ ಜೀವನ ಪರಿಸ್ಥಿತಿಗಳು ಅತ್ಯಂತ ಕಳಪೆಯಾಗಿತ್ತು, ಹೆಚ್ಚಿನ ಕುಟುಂಬಗಳು ಒಂದೇ ಕೋಣೆಯಲ್ಲಿ ವಾಸಿಸುತ್ತಿದ್ದವು, ಅಲ್ಲಿ ಪೋಷಕರು ಮತ್ತು ವಿವಾಹಿತ ಪುತ್ರರು ಮಲಗುವ ಜಾಗವನ್ನು ಹಂಚಿಕೊಂಡಿದ್ದರು. ಅವರಿಗೆ ಯಾವುದೇ ಗೌಪ್ಯತೆ ಎಂಬುದು ಇರಲೇ ಇಲ್ಲ. ಇಂತಹ ವಾತಾವರಣದಲ್ಲಿ ಅವರ ಬದುಕು ಸಾಗಿತ್ತು. ಮಗು–ಪಾಲನೆ ಮತ್ತು ಶಿಕ್ಷಣವು ಪ್ರಮುಖ ಸವಾಲುಗಳಾಗಿದ್ದವು, ಏಕೆಂದರೆ ಅವರು ನೈರ್ಮಲ್ಯ ಕೆಲಸಗಾರರಾಗಿ ಕೆಲಸ ಮಾಡುತ್ತಿದ್ದರು. ಮುಂಜಾನೆ ಎದ್ದ ತಕ್ಷಣ ಆರಂಭದ ಕೆಲಸವೆಂದರೆ, ಮಾನವ ಮಲವಿಸರ್ಜನೆ ಮತ್ತು ಒಂದು ಬಗೆಯ ಕಸವನ್ನು (ಎಕ್ಸ್‌ಕ್ರೀಟಾ) ವನ್ನು ಹೊತ್ತು ಸ್ವಚ್ಛಗೊಳಿಸುವ ಕೆಲಸದಲ್ಲಿ ನಿರತರಾಗಿದ್ದರು.

ಈ ಪರಿಸ್ಥಿತಿಯು ಜಾತಿ ವ್ಯವಸ್ಥೆಯ ವಿನಾಶಕಾರಿ ಸ್ವರೂಪವನ್ನು ಜೀವಂತವಾಗಿ ಪ್ರತಿಬಿಂಬಿಸುತ್ತಿತ್ತು. ಅಲ್ಲಿ ಕೆಲವು ಉಪ–ಜಾತಿಗಳು ತಮ್ಮ ವೃತ್ತಿಯಾಗಿ ಅವಮಾನಕರ ಕೆಲಸವನ್ನು ಮಾಡುತ್ತಿದ್ದರು.

ಪಶ್ಚಿಮ ಜಿಲ್ಲೆಗಳಲ್ಲಿ, ಗಣನೀಯ ಸಂಖ್ಯೆಯ ಅರುಂಧತಿಯಾರುಗಳು ಭೂರಹಿತ ಕೃಷಿ ಕಾರ್ಮಿಕರಾಗಿದ್ದರು. ದಲಿತ ಸಮುದಾಯದೊಳಗಿನ ಅಂತರ್ಜಾತಿ ವಿವಾಹಗಳು, ವಿಶೇಷವಾಗಿ ಅರುಂಧತಿಯಾರ್ ರನ್ನು ಒಳಗೊಂಡಂತೆ, ಹೆಚ್ಚಾಗಿ ಸ್ವೀಕಾರಾರ್ಹವಾಗಿಲ್ಲ, ಮತ್ತು ಈ ಕಾರಣಕ್ಕಾಗಿ ರಾಜ್ಯದಲ್ಲಿ ಕೆಲವು ಮರ್ಯಾದಾ ಹತ್ಯೆಗಳು ಸಂಭವಿಸಿದ್ದವು. ದಲಿತರಲ್ಲಿ ಅವರು ನಿಜವಾಗಿಯೂ ಕೀಳು ಅಸ್ಪೃಶ್ಯ ದಲಿತರಾಗಿದ್ದರು.

ಸಿಪಿಐ(ಎಂ) ಸಾಮಾನ್ಯವಾಗಿ ದಲಿತರು ಮತ್ತು ನಿರ್ದಿಷ್ಟವಾಗಿ ಅರುಂಧತಿಯಾರು ಜಾತಿ–ಮುಕ್ತ ಸಮಾಜದಲ್ಲಿ ಕಾರ್ಮಿಕ ವರ್ಗದ ಅತ್ಯಂತ ತುಳಿತಕ್ಕೊಳಗಾದ ವರ್ಗವನ್ನು ಪ್ರತಿನಿಧಿಸುತ್ತದೆ. ಜಾತಿ ದಮನದ ಸಮಸ್ಯೆಯನ್ನು ಪರಿಹರಿಸದೆ ವರ್ಗ ಹೋರಾಟಗಳಲ್ಲಿ ಅವರನ್ನು ಸಂಯೋಜಿಸಲು ಸಾಧ್ಯವಿಲ್ಲ ಎಂಬುದು ಸಿಪಿಎಂ ನ ತಿಳುವಳಿಕೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಮತ್ತು ಟಿಎನ್ ಯುಇಎಫ್ ಎರಡೂ ಜಂಟಿಯಾಗಿ ಮೀಸಲಾತಿಗಾಗಿ ಉಪವರ್ಗೀಕರಣ ಸೇರಿದಂತೆ ತಮ್ಮ ಹಕ್ಕುಗಳು ಮತ್ತು ಹಿತಾಸಕ್ತಿಗಳಿಗಾಗಿ ರಾಜಿರಹಿತ ಹೋರಾಟ ನಡೆಸಲು ನಿರ್ಧರಿಸಿದವು, ಈಗಲೂ ಈ ಹೋರಾಟ ಮುಂದುವರಿಯುತ್ತಿದೆ.

ಸಿಪಿಐ(ಎಂ); ಡಿಎಸ್‌ಎಂಎಂ ಮತ್ತು ಟಿಎನ್‌ಯು ಇಎಫ್ ವತಿಯಿಂದ ನಿರಂತರ ಹೋರಾಟಗಳು

ಅರುಂಧತಿಯಾರ್ ಸಮುದಾಯದ ನಿಜವಾದ ಕುಂದುಕೊರತೆಗಳನ್ನು ಎತ್ತಿ ಹಿಡಿಯಲು ಅನೇಕ ಹೋರಾಟಗಳನ್ನು ಕೈಗೊಳ್ಳಲಾಯಿತು. ಕೆಲವನ್ನು ಉಲ್ಲೇಖಿಸುವುದಾದರೆ, ಸಾವಿರಾರು ಜನರು ಭಾಗವಹಿಸುವ ಜಿಲ್ಲಾ ಸಮ್ಮೇಳನಗಳು ನಡೆದವು. ಜೂನ್ 12, 2007 ರಂದು ಚೆನ್ನೈನಲ್ಲಿ ಒಂದು ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಆಯೋಜಿಸಲಾಗಿತ್ತು, ಅಲ್ಲಿ 20,000 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದು ಉಪವರ್ಗೀಕರಣ ಹೋರಾಟದಲ್ಲಿ ಮಹತ್ವ ತಿರುವು ಪಡೆದುಕೊಂಡಿತು. ಈ ಹೋರಾಟಗಳಲ್ಲಿ ಅರುಂಧತಿಯರು ಮತ್ತು ಇತರ ದಲಿತ ಗುಂಪುಗಳು ಮಾತ್ರವಲ್ಲದೆ ಬೇರೆ ಇನ್ನಿತರೆ ಜಾತಿ ರೇಖೆಗಳಾದ್ಯಂತ ಗಮನಾರ್ಹ ಸಂಖ್ಯೆಯ ದುಡಿಯುವ ಜನರು ಭಾಗವಹಿಸಿದರು. ಈ ಹಿನ್ನೆಲೆಯಲ್ಲಿ ತಮಿಳುನಾಡಿನ ಅಂದಿನ ಮುಖ್ಯಮಂತ್ರಿ ಕಲೈಂಜರ್ ಕರುಣಾನಿಧಿ ನಮ್ಮನ್ನು ಮಾತುಕತೆಗೆ ಆಹ್ವಾನಿಸಿದ್ದರು. ಎನ್.ವರದರಾಜನ್, ಕೆ.ವರದರಾಜನ್, ಪಿ.ಸಂಪತ್, ಪಿ.ಶುಣ್ಮುಗಂ, ಮತ್ತು ಎಸ್.ಕೆ. ಮಹೇಂದ್ರನ್, ಅರುಂಧತಿಯಾರ್ ಸಂಘಟನೆಗಳ ಮುಖಂಡರಾದ ಕೆ ಜಕ್ಕಯಾನ್ ಮತ್ತು ಆರ್ ಅಥಿಯಮಾನ್ ಈ ಚರ್ಚೆಯಲ್ಲಿ ಭಾಗವಹಿಸಿದ್ದರು.

ಮನವಿಗಳನ್ನು ಆಲಿಸಿದ ಮುಖ್ಯಮಂತ್ರಿಗಳು ಉಪವರ್ಗೀಕರಣ ಸೇರಿದಂತೆ ಹಲವು ಬೇಡಿಕೆಗಳನ್ನುಒಪ್ಪಿಕೊಂಡರು. ಪುಟ 15 ಕ್ಕೆ

ದಲಿತ ಕೆನೆ ಪದರ (ಕ್ರೀಮಿಲೇಯರ್) ಮೀಸಲಾತಿ ಮುಂದುವರಿಯಲಿ; ಸಿಪಿಎಂ ಮತ್ತು ಡಿಎಸ್‌ಎಂಎಂ

ಉಪ ವರ್ಗೀಕರಣ ಕುರಿತ ತೀರ್ಪು ನೀಡಿದ ನ್ಯಾಯಾಧೀಶರ ಪೈಕಿ ನಾಲ್ವರು ದಲಿತ ಮತ್ತು ಬುಡಕಟ್ಟು ಜನರಿಗೆ ಅವರ ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆ ಕೆನೆ ಪದರ ವ್ಯವಸ್ಥೆಯನ್ನು ಜಾರಿಗೊಳಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಅಂದರೆ, ಕೆನೆಪದರ'ವನ್ನು ಮೀಸಲಾತಿಯಿಂದ ಹೊರಗಿಡಬೇಕು ಎಂಬರ್ಥ. ಎಸ್ಸಿ/ಎಸ್ಟಿಗಳಿಗೆ ಸಂಬಂಧಿಸಿದಂತೆ ಸಿಪಿಐ(ಎಂ) ಮತ್ತು ಡಿಎಸ್‌ಎಂಎಂ ಈ ನಾಲ್ಕು ನ್ಯಾಯವಾದಿಗಳ ಅಭಿಪ್ರಾಯವನ್ನು ಒಪ್ಪುವುದಿಲ್ಲ ಇದು ಸ್ವೀಕಾರಾರ್ಹವಲ್ಲ ಎಂದು ದೃಢಪಡಿಸುತ್ತವೆ. ದಲಿತ ಕೆನೆ ಪದರವನ್ನು ಒಬಿಸಿ ರೀತಿಯಲ್ಲಿ ಪರಿಗಣಿಸುವುದು ಸೂಕ್ತವಲ್ಲ. ಕೆನಪದರ ಮುಂದುವರಿಯಲಿ ಎಂದು ಸ್ಪಷ್ಟಗೊಳಿಸಲಾಗಿದೆ. ಅಸ್ಪೃಶ್ಯತೆ ಸೇರಿದಂತೆ ಜಾತಿ ವ್ಯವಸ್ಥೆಯ ಕೆಟ್ಟ ಬಲಿಪಶುಗಳಾದ ದಲಿತ ಮತ್ತು ಬುಡಕಟ್ಟು ಜನರಿಗೆ ಮೀಸಲಾತಿಗೆ ಕೆನೆಪದರವನ್ನು ಅನ್ವಯಿಸಬಾರದು ಎಂಬುದು ಸರಿಯಾದ ನಿಲುವು. ಇದರ ವಿರುದ್ಧ ಪ್ರಜಾಸತ್ತಾತ್ಮಕ ಚಳವಳಿಗಳೂ ಕೂಡ ಧ್ವನಿ ಎತ್ತಬೇಕು ಎಂಬುದು ಸಿಪಿಎಂನ ಒತ್ತಾಯವಾಗಿದೆ.

ಸಿಪಿಐ(ಎಂ) ಮತ್ತು ಡಿಎಸ್‌ಎಂಎಂ/ ಡಿಎಚ್‌ಎಸ್ ನಡೆಸಿದ ಹೋರಾಟಗಳಲ್ಲಿ ಪಾಲ್ಗೊಂಡ ಕಾರ್ಯಕರ್ತರಿಗೆ, ಅರುಂಧತಿಯಾರ್ ಸಮುದಾಯ, ಅವರ ಸಂಘಟನೆಗಳಿಗೆ, ಕಾನೂನು ಹೋರಾಟದಲ್ಲಿ ತೊಡಗಿರುವ ವಕೀಲರಿಗೆ ಮತ್ತು ಅರುಂಧತಿಯರಿಗೆ ಮೀಸಲಾತಿಯ ಉಪವರ್ಗೀಕರಣಕ್ಕಾಗಿ ತೀವ್ರವಾಗಿ ಹೋರಾಡಿದ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ಸಿಪಿಎಂ ಅಭಿನಂದಿಸುತ್ತದೆ. ಡಿಎಂಕೆ ಸರ್ಕಾರವು ಉಪ–ವರ್ಗೀಕರಣವನ್ನು ಕಾಯಿದೆಯನ್ನಾಗಿ ಪರಿವರ್ತಿಸುವ ಮೂಲಕ ಪ್ರಸ್ತಾಪಿಸಿ ಅನುಷ್ಠಾನಗೊಳಿಸಿದ್ದಕ್ಕಾಗಿ ಅವರನ್ನು ಸಿಪಿಎಂ ಶ್ಲಾಘಿಸುತ್ತದೆ. CPI(M), DSMM ಮತ್ತು ವರ್ಗ ಮತ್ತು ಸಾಮೂಹಿಕ ಸಂಘಟನೆಗಳು ಜಾತಿ ವ್ಯವಸ್ಥೆ ಮತ್ತು ದೌರ್ಜನ್ಯಗಳ ವಿರುದ್ಧ ಹೋರಾಟದಲ್ಲಿ ಅಚಲವಾಗಿ ಉಳಿಯುತ್ತವೆ. ಆ ನಿಟ್ಟಿನಲ್ಲಿ ಕಾರ್ಮಿಕ ವರ್ಗದ ದೃಷ್ಟಿಕೋನಕ್ಕೆ ದೃಢವಾದ ಬದ್ಧತೆ ಇರುತ್ತದೆ. ಅಚಲ ಬದ್ದತೆಯುಳ್ಳ ಹೋರಾಟಕ್ಕೆ ಎಂದಿಗೂ ಜಯ ಲಭಿಸುತ್ತದೆ. ಹಾಗಾಗಿ, ಜಾತಿ ವಿನಾಶ ನಮ್ಮ ಮೂಲ ಗುರಿ ಆ ದಿಕ್ಕಿನಲ್ಲಿ ಮತ್ತಷ್ಟು ಅಚಲವಾಗಿ ಮುನ್ನಡೆಯೋಣ.

ಕೇರಳದ ಪ್ರತಿಷ್ಠೆಗೆ ಮಸಿ ಬಳೆಯಲು 'ಮರಳಿ-ಮರಳಿ ಯತ್ನ'

ವಯ್ನಾಡ್ ಭೂಕುಸಿತಗಳಲ್ಲಿ 300ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಲು ಕೇರಳದ ಎಲ್‌ಡಿಎಫ್ ಸರಕಾರದ ನಡೆಗಳೇ ಕಾರಣ ಎಂದು ಪ್ರಚಾರ ಮಾಡುವ ಒಕ್ಕೂಟ ಗೃಹಮಂತ್ರಿ ಮತ್ತು ಪರಿಸರ ಮಂತ್ರಿಗಳ ವಿಫಲ ಪ್ರಯತ್ನಗಳ ನಂತರ, ಈಗ ಇಂತಹ ಇನ್ನೊಂದು ಪ್ರಯತ್ನದ ಸುದ್ದಿ ಬಂದಿದೆ.

ಪರಿಸರ ಮಂತ್ರಾಲಯ ಭೂಕುಸಿತಗಳಿಗೆ ಕಲ್ಲು ಗಣಿಗಾರಿಕೆ ಮತ್ತು ಅಕ್ರಮ ವಾಸಕ್ಕೆ ಕೇರಳ ಸರಕಾರ ಅವಕಾಶ ಕಲ್ಪಿಸಿಕೊಟ್ಟಿದ್ದೇ ಕಾರಣ ಎಂದು ದೂಷಿಸುವ ಲೇಖನಗಳನ್ನು ಬರೆಯುವಂತೆ ವಿಜ್ಞಾನಿಗಳು ಮತ್ತು ಪರಿಣಿತರನ್ನು ಕೇಳುತ್ತಿರುವಂತೆ ಕಾಣುತ್ತಿದೆ, ಇದಕ್ಕೆ ಬೇಕಾದ ಮಾಹಿತಿಗಳನ್ನು ಒಕ್ಕೂಟ ಸರಕಾರವೇ ಒದಗಿಸುತ್ತದೆ ಎಂದು ಸುದ್ದಿ ವೆಬ್ ಪತ್ರಿಕೆಗಳಾದ ನ್ಯೂಸ್ ಮಿನಿಟ್ ಮತ್ತು ನ್ಯೂಸ್‌ಲಾಂಡ್ರಿಯ ಜಂಟಿ ಸುದ್ದಿಪತ್ರ ವರದಿ ಮಾಡಿದೆ. ಈ ಪ್ರಯತ್ನ ಒಕ್ಕೂಟ ಸರಕಾರದ ಅಡಿಯಲ್ಲಿರುವ 'ಪತ್ರಿಕಾ ಮಾಹಿತಿ ಕಚೇರಿ' (ಪ್ರೆಸ್ ಇನ್‌ಫಾರ್ಮೇಷನ್ ಬ್ಯೂರೊ–ಪಿಐಬಿ) ಮೂಲಕ ನಡೆಯುತ್ತಿದೆ ಎಂದು ಅದು ಹೇಳಿದೆ.

ಒಕ್ಕೂಟ ಪರಿಸರ ಮಂತ್ರಿ ಭೂಪೇಂದರ್ ಯಾದವ್, ಮೂರು ದಿನಗಳ ಹಿಂದೆ ಆಗಸ್ಟ್ 5 ರಂದು ಎಎನ್‌ಐಗೆ ವಯ್ನಾಡ್ ಭೂಕುಸಿತಗಳು ರಾಜ್ಯ ಸರ್ಕಾರದ ತಪ್ಪಿನಿಂದ ಆಗಿವೆ, ಸ್ಥಳೀಯ ರಾಜಕಾರಣಿಗಳು ಅಕ್ರಮ ವಾಸ ಮತ್ತು ಗಣಿಗಾರಿಕೆಯನ್ನು ಈ ಪ್ರದೇಶದಲ್ಲಿ ಮುಂದುವರಿಸಲು ಅನುಮತಿ ನೀಡಿದ್ದರಿಂದ ಮತ್ತು ಒತ್ತುವರಿಗಳಿಗೆ ಅವಕಾಶ ನೀಡಿದ್ದರಿಂದಾಗಿ ಸಂಭವಿಸುವಂತಾಗಿದೆ ಎಂದು ಹೇಳಿದರು.

ಆದರೆ, 2014 ರಲ್ಲಿ ನಿಷೇಧದ ನಂತರ ವಯನಾಡಿನ ಹಲವು ಪ್ರದೇಶಗಳಲ್ಲಿ ಹೆಚ್ಚಿನ ಸ್ಥಳೀಯ ಕಲ್ಲುಗಣಿಗಳು ಕಾರ್ಯನಿರ್ವಹಿಸುವುದನ್ನು ನಿಲ್ಲಿಸಿವೆ ಎಂದು ಪರಿಸರ ಕಾರ್ಯಕರ್ತ ಎನ್. ಬಾದುಷಾ ಆಗಸ್ಟ್ 4 ರಂದು 'ದಿ ವೈರ್'ಗೆ ತಿಳಿಸಿದ್ದರು. ಈ ಜಿಲ್ಲೆಯಲ್ಲಿ 40 ವರ್ಷಗಳಿಗೂ ಹೆಚ್ಚು ಕಾಲದಿಂದ ಪರಿಸರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಿರುವ ವಯ್ನಾಡ್ ಪರಿಸ್ಥಿತಿ ಸಂರಕ್ಷಣಾ ಸಮಿತಿಯ ಅಧ್ಯಕ್ಷರು, ವಯ್ನಾಡಿನ ಮೇಲೆ ಪರಿಣಾಮ ಬೀರಿದ 2018 ರ ಪ್ರವಾಹದ ನಂತರ ಈ ಪ್ರದೇಶದಲ್ಲಿ ಉಳಿದ ಕಲ್ಲುಗುಣಿಗಳನ್ನು ಮುಚ್ಚಲಾಗಿದೆ ಎಂದು 'ದಿ ವೈರ್'ಗೆ ತಿಳಿಸಿದ್ದಾರೆ. (Waynad landslides, Union Govt. Reaching Out to Scientists to Criticise Kerala's Governance: Report, ಆಗಸ್ಟ್ 6)

ಮುಸುಕಿನ ಗುದ್ದಾಟ ಮತ್ತು ಮಾಹಿತಿ ನೆಡುವ ಕಸರತ್ತು ಏಕೆ?

ಈಗ ಆಗಸ್ಟ್ 6 ರಂದು ದಿ ನ್ಯೂಸ್ ಮಿನಿಟ್ ಮತ್ತು ನ್ಯೂಸ್‌ಲಾಂಡ್ರಿಯ ಸುದ್ದಿಪತ್ರದಲ್ಲಿನ ವರದಿಯ ಪ್ರಕಾರ, ಒಕ್ಕೂಟ ಪರಿಸರ ಸಚಿವಾಲಯವು "ಕಲ್ಲುಗಣಿಗಳಿಗೆ ಸಂಬಂಧಿಸಿದಂತೆ ಕೇರಳ ಸರ್ಕಾರದ ಕಳಪೆ ನೀತಿಗಳು ಭೂಕುಸಿತಕ್ಕೆ ಹೇಗೆ ಕಾರಣವಾಗಿವೆ ಎಂಬುದರ ಕುರಿತು ಲೇಖನಗಳನ್ನು ಬರೆಯಲು ವ್ಯಕ್ತಿಗಳಿಗಾಗಿ ತುರ್ತಾಗಿ ಹುಡುಕುತ್ತಿದೆ", ಒಕ್ಕೂಟ ಸರಕಾರದ ಅಡಿಯಲ್ಲಿರುವ ಪಿಐಬಿಯು ಅಂತಹ ಲೇಖನಗಳನ್ನು ಬರೆಯಬಲ್ಲ ವಿಜ್ಞಾನಿಗಳು, ಸಂಶೋಧಕರು ಅಥವಾ ಪತ್ರಕರ್ತರ ಸಂಪರ್ಕಕ್ಕಾಗಿ ತಮ್ಮನ್ನು ಸಂಪರ್ಕಿಸಿದೆ ಎಂದು ಮೂವರು ವ್ಯಕ್ತಿಗಳು ದೃಢಪಡಿಸಿದ್ದಾರೆ ಎಂದು ಸುದ್ದಿಪತ್ರವು ತಿಳಿಸಿದೆ.

ಕೇರಳದಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯ ಕುರಿತು ಸುದ್ದಿಕತೆಗಳಿಗೆ ಲಿಂಕ್‌ಗಳು ಸೇರಿದಂತೆ ಮಾಹಿತಿಯನ್ನು ಒಳಗೊಂಡಿರುವ ಒಂದು ದಸ್ತಾವೇಜನ್ನು ಹಂಚಲಾಗಿದೆ; ಕಲ್ಲುಗಣಿಗಾರಿಕೆಯನ್ನು ನಿಲ್ಲಿಸುವಲ್ಲಿ ರಾಜ್ಯ ಸರ್ಕಾರದ ವೈಫಲ್ಯವು "ವೈನಾಡ್ ದುರಂತಕ್ಕೆ ಮುಖ್ಯ ಕಾರಣ" ಎಂದು ಹೇಳುವ ಒಂದು ಟಿಪ್ಪಣಿಯನ್ನೂ ಅದರೊಂದಿಗೆ ಇಡಲಾಗಿದೆಯಂತೆ.

ಅಂತಹ ಲೇಖನಗಳನ್ನು ಬರೆಯಬಹುದಾದ ವ್ಯಕ್ತಿಗಳ ಸಂಪರ್ಕಗಳನ್ನು ಹಂಚಿಕೊಳ್ಳುವಂತೆ ಕರೆಗಳು ಬಂದಿರುವುದಾಗಿ ದೃಢಪಡಿಸಿದವರೊಬ್ಬರೊಡನೆ ಮಾತನಾಡಿದ ನ್ಯೂಸ್ ಮಿನಿಟ್‌ನ ಮೂಲಗಳ ಪ್ರಕಾರ "ಕೇಂದ್ರ ಸರ್ಕಾರವು "ನಿರಾಕರಿಸಲಾಗದ ದತ್ತಾಂಶವನ್ನು ಹೊಂದಿದ್ದರೆ, ಅವರು ಮುಸುಕಿನ ಗುದ್ದಾಟವನ್ನು ನಡೆಸುವ ಬದಲು, ಮಾಹಿತಿಯನ್ನು ಬೇರೆಯವರ ಮೂಲಕ ಹೇಳಿಸುವ ಬದಲು, ಅದನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬಾರದೇಕೆ?" ಎಂದು ಕೇಳಿರುವುದಾಗಿ ತಿಳಿಸಿದ್ದಾರೆ.

ಭೂಕುಸಿತಕ್ಕೆ ಕಲ್ಲುಗಣಿಗಾರಿಕೆಯೇ ಪ್ರಮುಖ ಕಾರಣ ಎನ್ನುವುದು ಅವೈಜ್ಞಾನಿಕವಾಗಿದೆ, "ಹೆಚ್ಚಿನ ವಿಜ್ಞಾನಿಗಳು ಈ ವಿಷಯದ ಬಗ್ಗೆ ಬರೆಯಲು ನಿರಾಕರಿಸುವ ಸಂಭವ ಜಾಸ್ತಿ" ಎಂದು ಇನ್ನೊಬ್ಬರು ಹೇಳಿದ್ದಾರೆ.

ಒಕ್ಕೂಟ ಪರಿಸರ ಸಚಿವ ಭೂಪೇಂದರ್ ಯಾದವ್ ಹೇಳಿಕೆಯ ಮೊದಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂಸತ್ತಿನಲ್ಲಿ ತಮ್ಮ ಸರ್ಕಾರವು ಜುಲೈ 23 ರ ಹೊತ್ತಿಗೆ ರಾಜ್ಯಕ್ಕೆ ಮುನ್ನೆಚ್ಚರಿಕೆ ನೀಡಿತ್ತು, 9 ಎನ್‌ಡಿಆರ್‌ಎಫ್ ತುಕಡಿಗಳನ್ನು ಕಳಿಸಲಾಯಿತು ಎಂದು ಹೇಳಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಅವರು ನೀಡಿದ ಆ ಮುನ್ನೆಚ್ಚರಿಕೆಗಳಾದರೂ ಏನು ಎಂಬುದು ಬೇಗನೇ ಬಯಲಿಗೆ ಬಂತು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಇದನ್ನು ನಿರಾಕರಿಸುತ್ತ ಇದು ಸತ್ಯಸಂಗತಿಗಳಿಗೆ ಹೊಂದಿಕೆಯಾಗದ ಸಂಗತಿ, ವಾಸ್ತವ ಸಂಗತಿಯೆಂದರೆ ಜುಲೈ 23ರಿಂದ ಜುಲೈ 28ರ ನಡುವೆ ಕೇಂದ್ರೀಯ ಹವಾಮಾನ ಇಲಾಖೆ ಕೇರಳದಲ್ಲಿ ಭಾರೀ ಮಳೆಯ ಯಾವುದೇ ಕಿತ್ತಳೆ ಅಲರ್ಟನ್ನೂ ನೀಡಲಿಲ್ಲ, ಎನ್‌ಡಿಆರ್‌ಎಫ್‌ನ ತಂಡಗಳನ್ನು ಕಳಿಸಲು ಕೇರಳ ಸರಕಾರವೇ ಮನವಿ ಮಾಡಿತ್ತು ಎಂದರು. ಜುಲೈ 29ರಂದು ಒಕ್ಕೂಟ ಸರಕಾರದ ಸಂಸ್ಥೆ ವಯ್ನಾಡ್ ಜಿಲ್ಲೆಗೆ ಮಾತ್ರ ಕಿತ್ತಳೆ ಅಲರ್ಟನ್ನು ನೀಡಿತು. ವಯ್ನಾಡಿಗೆ ಕೆಂಪು ಅಲರ್ಟನ್ನು ಮತ್ತು ಭಾರೀ ಮಳೆಯ ಸಾಧ್ಯತೆಯನ್ನು ಜುಲೈ 30ರಂದು ಭೂಕುಸಿತದ ನಂತರವೇ ನೀಡಲಾಯಿತು ಎಂದು ನಂತರ ನಿಜ ಸಂಗತಿಗಳನ್ನು ಪರಿಶೀಲಿಸಿದ 'ದಿ ಹಿಂದು' (ಆಗಸ್ಟ್ 2) ವರದಿ ಮಾಡಿತು. (ಹಿಂದಿನ ಸಂಚಿಕೆಯಲ್ಲಿ ಈ ಪುಟದಲ್ಲಿ ಪ್ರಕಟವಾಗಿರುವ ಲೇಖನವನ್ನು ನೋಡಿ.)

ಹೇಗಾದರೂ ಕೇರಳದ ಮುಖ್ಯಮಂತ್ರಿಗಳ ಮೇಲೆ ಗುರಿಯಿಡಲು ಮರಳಿ–ಮರಳಿ ಯತ್ನವ ಮಾಡುವ ಹತಾಶ ಸ್ಥಿತಿಗೆ ಬಿಜೆಪಿ ತಲುಪಿದಂತಿದೆ. ವೈನಾಡಿನ ರಾಷ್ಟ್ರೀಯ ದುರಂತದ ವೇಳೆಯಲ್ಲಿ ಕೇರಳದ ಪ್ರತಿಷ್ಠೆಗೆ ಮಸಿ ಬಳೆಯುವ ಪಿತೂರಿಯಲ್ಲಿ ಮೋದಿ ಸರಕಾರ ತೊಡಗಿರುವಂತಿದೆ.

5 ಕೋಟಿ ಹೆಚ್ಚು ಮತಗಳು ಪೋಲ್ ಆಗಿವೆ–ಎಲ್ಲಾ ಏಳು ಹಂತಗಳಲ್ಲಿ "3.2% ರಿಂದ 6.32%" ವ್ಯತ್ಯಾಸ ಕಂಡುಬಂದಿದೆ ಏಕೆ?–ಚುನಾವಣಾ ಆಯೋಗಕ್ಕೆ ಪ್ರಶ್ನೆ

ವ್ಯಕ್ತಿಗಳು ಮತ್ತು ಸಂಘಟನೆಗಳನ್ನು ಒಳಗೊಂಡ ಮಹಾರಾಷ್ಟ್ರ ಮಟ್ಟದ ನಾಗರಿಕರ ವೇದಿಕೆ 'ವೋಟ್ ಫಾರ್ ಡೆಮಾಕ್ರಸಿ'(ವಿಎಫ್‌ಡಿ) ಜುಲೈ 22ರಂದು ಸಲ್ಲಿಸಿದ ವರದಿ 2024ರ ಲೋಕಸಭೆ ಚುನಾವಣೆಯ ನಡವಳಿಕೆ ಮತದಾನ ಮತ್ತು ಎಣಿಕೆಯ ಸಮಯದಲ್ಲಿ ಮತ್ತು ಚಲಾಯಿಸುವ ಸಮಯದಲ್ಲಿ ಹಲವು ಅಕ್ರಗಳು ನಡೆದಿದೆ ಎಂದು ತಿಳಿಸಿದೆ.ಇದರಲ್ಲಿ ಭಾರತೀಯ ಚುನಾವಣಾ ಆಯೋಗದ (ಇಸಿಐ) ಕಾರ್ಯನಿರ್ವಹಣೆಯಲ್ಲೂ ಅಕ್ರಮಗಳು ನಡೆದಿವೆ ಎಂದು ಅದು ಹೇಳಿದೆ.

ಚುನಾವಣಾ ಆಯೋಗದ ದತ್ತಾಂಶವನ್ನು ಆಧರಿಸಿದ ವರದಿಯು ಕಳವಳಕಾರಿ ಅಂಕಿ ಅಂಶವನ್ನು ಬಹಿರಂಗಪಡಿಸುತ್ತದೆ, ಒಟ್ಟು ಚಲಾವಣೆಯಾದ ಅಂತಿಮ ಅಧಿಕೃತ ಮತಗಳಿಗಿಂತ ಹೆಚ್ಚುವರಿಯಾಗಿ ಸುಮಾರು 5 ಕೋಟಿ ಹೆಚ್ಚು ಮತಗಳು ಪೋಲ್ ಆಗಿವೆ. ಇಂತಹ ಬೃಹತ್ ಹೆಚ್ಚಳವನ್ನು ವಿವರಿಸಲು ಚುನಾವಣಾ ಆಯೋಗಕ್ಕೆ ಹಲವು ವಿನಂತಿಗಳನ್ನು ಸಲ್ಲಿಸಿದರೂ ಇಲ್ಲಿಯವರೆಗೆ ಯಾವುದೇ ವಿಶ್ವಾಸಾರ್ಹ ವಿವರಣೆಯನ್ನು ನೀಡಿಲ್ಲ ಎಂದು ಅದು ಒತ್ತಿ ಹೇಳಿದೆ. ಇದು ಚುನಾವಣಾ ಪ್ರಕ್ರಿಯೆಯಲ್ಲಿನ ಮತ ಚಲಾವಣೆಯನ್ನು ಉತ್ಪ್ರೇಕ್ಷಿಸಿ ಕೊಡಲಿಕ್ಕಾಗಿ ಮಾಡಿದ ಕೈಚಳಕ ಇರಬಹುದು ಎಂಬ ಸಂದೇಹವೂ ಬಂದಿದೆ.

ಇಂತಹ ಭಾರೀ ಪ್ರಮಾಣದಲ್ಲಿ ಉತ್ಪ್ರೇಕ್ಷಿಸಿರುವ ಅಂಕಿಅಂಶಗಳಿಂದಾಗಿ, ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಅನ್ನು ರಚಿಸಿರುವ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಹಲವಾರು ರಾಜ್ಯಗಳಲ್ಲಿ ಹರಡಿರುವ 79 ಲೋಕಸಭಾ ಸ್ಥಾನಗಳಲ್ಲಿ ಗೆಲ್ಲುವಂತೆ ಮಾಡಿರಬಹುದು ಎಂದು ವರದಿ ಸಂದೇಹ ವ್ಯಕ್ತಪಡಿಸಿದೆ. ಈ ಮೂಲಕ ಎನ್‌ಡಿಎ ಇಂಡಿಯ ಬಣದಿಂದ ಜನಾದೇಶವನ್ನು ಕದ್ದಿದೆ ಎಂದೂ ವರದಿ ಹೇಳುತ್ತದೆ.

ವಿಡಿಎಫ್ ವರದಿ, ಹಿಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನದ ದಿನದ ಸಂಜೆಯ ವೇಳೆಗೆ ಮತದಾನದ ಶೇಕಡಾವಾರು ಪ್ರಮಾಣವನ್ನು ಆಯೋಗ ಬಿಡುಗಡೆ ಮಾಡಿತು ಮತ್ತು ಮರುದಿನ ಪರಿಷ್ಕೃತ ಅಂಕಿಅಂಶವನ್ನು ನೀಡಿತು, ಎರಡು ಅಂಕಿಗಳ ನಡುವಿನ ವ್ಯತ್ಯಾಸವು 1 ಕ್ಕಿಂತ ಹೆಚ್ಚಿಲ್ಲ, ಅಥವಾ 2%.ಕಿಂತ ಹೆಚ್ಚಿರಲಿಲ್ಲ. ಆದಾಗ್ಯೂ, 18ನೇ ಸಾರ್ವತ್ರಿಕ ಚುನಾವಣೆಗಳಲ್ಲಿ, ಎಲ್ಲಾ ಏಳು ಹಂತಗಳಲ್ಲಿ "3.2% ರಿಂದ 6.32%" ವ್ಯತ್ಯಾಸ ಕಂಡುಬಂದಿದೆ. ಈ ವ್ಯತ್ಯಾಸವು "ಆಂಧ್ರಪ್ರದೇಶದಲ್ಲಿ 12.54% ಮತ್ತು ಒಡಿಶಾದಲ್ಲಿ 12.48%" ಎಂದು ವರದಿಯು ಗಮನಿಸಿದೆ ಮತ್ತು ಅಂತಿಮ ಮತದಾನದ ಹೆಚ್ಚಳದ ಸಂಚಿತ ಸರಾಸರಿಯು 4.72% ಆಗಿದೆ.

ಇದರಿಂದ 79 ಸ್ಥಾನಗಳಲ್ಲಿ ಬಿಜೆಪಿಗೆ ಲಾಭವಾಗಿದೆ ಎಂದು ವರದಿ ಹೇಳುತ್ತದೆ.


5 ರಾಜ್ಯಗಳಲ್ಲಿ 79 ಸ್ಥಾನಗಳಲ್ಲಿ ಎನ್‌ಡಿಎ ಗೆಲುವಿನ ಅಂತರ ಕಡಿಮೆಯಾಗಿದೆ ಎಂದು ಅದು ಗಮನಸೆಳೆದಿದೆ. ಆ 79 ಸ್ಥಾನಗಳು, ರಾಜ್ಯವಾರು ನೋಡಿದಾಗ, ಒಡಿಶಾದಲ್ಲಿ 18; ಮಹಾರಾಷ್ಟ್ರದಲ್ಲಿ 11; ಪಶ್ಚಿಮ ಬಂಗಾಳದಲ್ಲಿ 10; ಆಂಧ್ರಪ್ರದೇಶದಲ್ಲಿ ಏಳು; ಕರ್ನಾಟಕದಲ್ಲಿ ಆರು; ಛತ್ತೀಸ್‌ಗಢ ಮತ್ತು ರಾಜಸ್ಥಾನದಲ್ಲಿ ತಲಾ ಐದು; ಬಿಹಾರ, ಹರಿಯಾಣ, ಮಧ್ಯಪ್ರದೇಶ ಮತ್ತು ತೆಲಂಗಾಣದಲ್ಲಿ ತಲಾ ಮೂರು; ಅಸ್ಸಾಂನಲ್ಲಿ ಎರಡು; ಮತ್ತು ಅರುಣಾಚಲ ಪ್ರದೇಶ, ಗುಜರಾತ್ ಮತ್ತು ಕೇರಳದಲ್ಲಿ ತಲಾ ಒಂದು.

ಎನ್‌ಡಿಎ ಅಭ್ಯರ್ಥಿಗಳ ಗೆಲುವಿನ ಅಂತರಕ್ಕಿಂತ ವಿವರಿಸಲಾಗದಷ್ಟು ಮತಗಳು ಹೆಚ್ಚಾಗಿದ್ದವು ಮತ್ತು ಯಾವುದೇ ವಿಶೇಷ ಹೆಚ್ಚಳವಿಲ್ಲದಿದ್ದರೆ, ಗೆಲ್ಲುವ ಅಭ್ಯರ್ಥಿಗಳು ಸೋಲುತ್ತಿದ್ದರು ಎಂದು ವರದಿ ಬಹಿರಂಗಪಡಿಸುತ್ತದೆ. ಎನ್‌ಡಿಎ 79ಕ್ಕಿಂತ ಕಡಿಮೆ ಲೋಕಸಭಾ ಸ್ಥಾನಗಳನ್ನು ಪಡೆದಿದ್ದರೆ ಬಹುಮತದ ಅಂಕವನ್ನು ಅದು ತಲುಪುತ್ತಿರಲಿಲ್ಲ. ಎಂದು ವಿಡಿಎಫ್ ವರದಿ ಹೇಳುತ್ತದೆ.

ಇಷ್ಟೇ ಅಲ್ಲ, ಚುನಾವಣಾ ಆಯೋಗ ವಿಚ್ಛಿದ್ರಕಾರಿ ಭಾಷಣಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳಲಿಲ್ಲ, ಪ್ರಧಾನ ಮಂತ್ರಿಗಳ ಭಾಷಣ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇದು ಎಲ್ಲರ ಗಮನಕ್ಕೆ ಬಂದಿರುವ ಸಂಗತಿ.

ವಿಎಫ್‌ಡಿ ಯನ್ನು ಪ್ರಸಿದ್ಧ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್, ಮತ್ತಿತರ ಸಾಮಾಜಿಕ ಕಾರ್ಯಕರ್ತರಾದ ಡಾಲ್ಫಿ ಡಿಸೋಜಾ, ಫಾದರ್ ಫ್ರೇಜರ್ ಮಸ್ಕರೇನ್ಹಸ್ ಮತ್ತು ಖಲೀಲ್ ದೇಶಮುಖ್ ರಚಿಸಿಕೊಂಡಿದ್ದು ಈ ಸಂಸ್ಥೆಯ ಪರವಾಗಿ ಈ ವರದಿಯನ್ನು ಮಾಜಿ ಅಧಿಕಾರಿ ಎಂ.ಜಿ. ದೇವಸಹಾಯಂ ಮತ್ತು ಸಾಮಾಜಿಕ ಕಾರ್ಯಕರ್ತ ಡಾ ಪ್ಯಾರೆ ಲಾಲ್ ಗಾರ್ಗ್ ತಯಾರಿಸಿದ್ದಾರೆ ಎಂದು ವಿಎಫ್‌ಡಿ ಹೇಳಿದೆ.

ಹೊಸ ಸಂಸತ್ತಿನಲ್ಲಿ ನೀಲಿ ಬಕೆಟ್



ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ಐಎಎಸ್ ಕೋಚಿಂಗ್ ಕೇಂದ್ರಗಳ 'ಯಶೋಗಾಥೆ'ಯ ಕರಾಳ ಮುಖ

ಮುರಿದು ಬಿದ್ದ ಶಿಕ್ಷಣ ವ್ಯವಸ್ಥೆಯ ಬೆನ್ನೇರಿ ನಿರ್ಮಿಸಲಾದ ಈ ಕೋಚಿಂಗ್–ಟ್ಯೂಷನ್–ಲಾಭದ ಮಾದರಿಯು ಒಂದು ಹಗರಣವೂ ಹೌದು, ಒಂದು ಹೇವರಿಕೆಯೂ ಹೌದು. ಅದು ತೊಲಗಲೇಬೇಕು".

ಆಧಾರ: Dark Side of Coaching Industry's 'Success Stories'
Shirin Akther &Vijender Singh Chauhan-NewsClick-06 08 2024
ಮತ್ತು Rajinder Nagar Tragedy is Symptomatic of a Drowning System
Shubham Sharma, NewsClick, 05 08 2024

ಸಂಗ್ರಹ ಮತ್ತು ಅನುವಾದ:
ಕೆ.ಎಂ.ನಾಗರಾಜ್



ತಮ್ಮ ಐಎಎಸ್ ಪರೀಕ್ಷೆಗಾಗಿ ನವದೆಹಲಿಯ ಹೃದಯಭಾಗದಲ್ಲಿರುವ ನೆಲಮಾಳಿಗೆಯೊಂದರಲ್ಲಿ ಓದುತ್ತಿದ್ದ ಸಮಯದಲ್ಲಿ ಅಲ್ಲಿಗೆ ನುಗ್ಗಿದ ನೀರಿನಲ್ಲಿ ಮುಳುಗಿ ಮೂವರು ವಿದ್ಯಾರ್ಥಿಗಳು (ರಾವ್ ಐಎಎಸ್ ಸ್ಟಡಿ ಸರ್ಕಲ್) ಸಾವನ್ನಪ್ಪಿದ್ದಾರೆ. ಈ ಭಯಾನಕ ದುರಂತವು ಭಾರತದ ಕೋಚಿಂಗ್ ಉದ್ಯಮದ ಕರಾಳ ಮುಖವನ್ನು ಬೆಳಕಿಗೆ ತಂದಿದೆ. ಪ್ರವರ್ಧಮಾನಕ್ಕೆ ಬರುತ್ತಿರುವ ಶಿಕ್ಷಣ ವ್ಯಾಪಾರದ ಈ ಮಾದರಿಯನ್ನು ಯಶಸ್ಸಿನ ಕಥೆಗಳ ಮಾರಾಟದ ಅಡಿಪಾಯದ ಮೇಲೆ ನಿರ್ಮಿಸಲಾಗಿದೆ. ಈ ಕೋಚಿಂಗ್ ಕೇಂದ್ರಗಳು ತಮ್ಮ ಯಶಸ್ಸಿನ ಕಥೆಗಳನ್ನು ನಾಟಕೀಕರಣಗೊಳಿಸುತ್ತವೆ ಹಾಗೂ ಮಹತ್ವಾಕಾಂಕ್ಷೆ ಹೊಂದಿದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತವೆ ಮತ್ತು ಶಿಕ್ಷಣದ ಸರಕೀಕರಣದ ಕಠೋರ ವಾಸ್ತವವನ್ನು ಮರೆಮಾಚುತ್ತವೆ.

ಈ ಕೋಚಿಂಗ್ ಉದ್ಯಮವು ಬಹಳ ಎಚ್ಚರಿಕೆಯಿಂದ ರಚಿಸಿದ ಯಶಸ್ಸಿನ ಕಥೆಗಳನ್ನು ಬಂಡವಾಳವಾಗಿಟ್ಟುಕೊಂಡು ಅದರಿಂದ ಹಣ ಮಾಡಿಕೊಳ್ಳುತ್ತವೆ. ಯಶಸ್ಸಿನ ಕಥೆಗಳನ್ನು ಸಾಮಾನ್ಯವಾಗಿ ನಾಟಕೀಯಗೊಳಿಸಲಾಗುತ್ತದೆ ಮತ್ತು ಆ ನಾಟಕದ ಆಯ್ದ ಭಾಗಗಳನ್ನು ವರ್ಣರಂಜಿತವಾಗಿ ಬಿಂಬಿಸಲಾಗುತ್ತದೆ. ಮತ್ತು ವಿದ್ಯಾರ್ಥಿಗಳು ಹೊಂದಿದ ಕನಸುಗಳನ್ನು ಮಾರುಕಟ್ಟೆಯ ಸರಕುಗಳಾಗಿ ಪರಿವರ್ತಿಸಲಾಗುತ್ತದೆ. ಈ ನಿರೂಪಣೆಯು ಒಂದು ಸ್ಪರ್ಧಾ ಒತ್ತಡದ ಸಂಸ್ಕೃತಿಯನ್ನು ಬೆಳೆಸುತ್ತದೆ ಮತ್ತು ವಿದ್ಯಾರ್ಥಿಗಳನ್ನು ಕೇವಲ ಗ್ರಾಹಕರ ಮಟ್ಟಕ್ಕೆ ಇಳಿಸಲಾಗುತ್ತದೆ ಮತ್ತು ಅವರು ಹೊಂದಿದ ಕನಸುಗಳನ್ನು ತಮ್ಮ ಧನ ದಾಹಕ್ಕಾಗಿ ಬಳಸಿಕೊಳ್ಳುತ್ತದೆ.

ಸಾಮಾಜಿಕ–ಆರ್ಥಿಕ ಅಡೆತಡೆಗಳು ಭಾರತೀಯ ಯುವಕರ ಆಕಾಂಕ್ಷೆಗಳನ್ನು ರೂಪಿಸುತ್ತವೆ. ಈ ಟ್ಯೂಷನ್ ತರಗತಿಗಳಿಗೆ ಹಾಜರಾಗುವ ಹೆಚ್ಚಿನ ವಿದ್ಯಾರ್ಥಿಗಳು ಮಧ್ಯಮ ವರ್ಗ ಮತ್ತು ಕೆಳಮಧ್ಯಮ ವರ್ಗದವರಾಗಿದ್ದಾರೆ. ವರ್ಷಕ್ಕೆ ಎರಡು ಲಕ್ಷ ಸಂಪಾದಿಸುವವರ ಮಕ್ಕಳೂ ಸಹ ಈ ಕೋಚಿಂಗ್ ಸೆಂಟರ್‌ಗಳಲ್ಲಿ ಓದುವ ಯೋಚನೆ ಮಾಡಲಾಗದು. ಕಾರಣ, ಬಡವರ ವಿರುದ್ಧ ಈಗಾಗಲೇ ಚೆಲ್ಲಾಟ ನಡೆಯುತ್ತಿದೆ ಎಂಬುದು ಬೇರೆ ವಿಷಯ.

ಕೋಚಿಂಗ್ ಮಾರುಕಟ್ಟೆಯ ಗಾತ್ರ 50 ಸಾವಿರ ಕೋಟಿ ರೂ.ಗಳು

ಪ್ರತಿಷ್ಠಿತ ಕೋಚಿಂಗ್ ಸೆಂಟರ್‌ಗಳಲ್ಲಿ ವಾರ್ಷಿಕ ಬೋಧನಾ ಶುಲ್ಕವಾಗಿ 1.5 ಲಕ್ಷದಿಂದ 2 ಲಕ್ಷ ರೂ + ತಿಂಗಳ ರೂಮ್ ಬಾಡಿಗೆ 10 ರಿಂದ 25 ಸಾವಿರ ರೂ + ತಿಂಗಳ ಆಹಾರ, ಪುಸ್ತಕಗಳು ಮತ್ತು ಇತರ ವೆಚ್ಚಗಳಿಗಾಗಿ ಸುಮಾರು 8 ಸಾವಿರದ ವರೆಗೆ ತೆರಬೇಕಾಗುತ್ತದೆ. ಬಹುತೇಕ ವಿದ್ಯಾರ್ಥಿಗಳು ವಾಸಿಸುವ ಕೊಠಡಿಗಳು ಬಾಡಿಗೆ ಹಂಚಿಕೆಯ ಮೇಲೆ ಇರುವುದರಿಂದ ಮತ್ತು ಅವು ದುಃಸ್ಥಿತಿಯಲ್ಲಿರುವುದರಿಂದ, ಶೇ. 90 ವಿದ್ಯಾರ್ಥಿಗಳು ಅಧ್ಯಯನ ಮಾಡಲು 'ಗ್ರಂಥಾಲಯ'ಗಳನ್ನು ಆಶ್ರಯಿಸುತ್ತಾರೆ. (ಈ 'ಲೈಬ್ರರಿಗಳು' ಪುಸ್ತಕಗಳು ಮತ್ತು ರೆಫೆರೆನ್ಸ್ ಗ್ರಂಥಗಳನ್ನು ಹೊಂದಿರುವ ನಿಜ ಸಾರ್ವಜನಿಕ ಗ್ರಂಥಾಲಯಗಳು ಎಂದು ಭಾವಿಸುವ ತಪ್ಪನ್ನು ಮಾಡಬಾರದು). ಇವು ಮಧ್ಯಮ ವಿಸ್ತೀರ್ಣದ ಸಭಾಂಗಣಗಳಾಗಿದ್ದು, ಕೇವಲ ಟೇಬಲ್ ಮತ್ತು ಕುರ್ಚಿಗಳನ್ನು ಮಾತ್ರ ಹೊಂದಿರುತ್ತವೆ. ಇಲ್ಲಿ ಕುಳಿತು ಅಧ್ಯಯನ ಮಾಡಲು ಪ್ರತಿ ತಿಂಗಳು 2–3 ಸಾವಿರ ರೂ ಪಾವತಿಸಬೇಕಾಗುತ್ತದೆ. ಈ ಕಟ್ಟಡಗಳ ಮಾಲೀಕರ ಲಾಭ ದಾಹ ಎಷ್ಟಿದೆ ಎಂದರೆ, ದುರಂತ ಸಂಭವಿಸಿ ನೆಲಮಹಡಿಯಲ್ಲಿದ್ದ ಬಹುತೇಕ 'ಗ್ರಂಥಾಲಯ'ಗಳು ಜಲಾವೃತಗೊಂಡ ದಿನ, ಮೊದಲ ಮತ್ತು ಎರಡನೇ ಮಹಡಿಯಲ್ಲಿದ್ದವರ ಬಾಡಿಗೆಯನ್ನು ರಾತ್ರೋರಾತ್ರಿ 5 ಸಾವಿರಕ್ಕೆ ಏರಿಸಿದರು!

ಈ ಕೋಚಿಂಗ್ ಮಾರುಕಟ್ಟೆಯ ಗಾತ್ರ ಎಷ್ಟು ದೊಡ್ಡದು? ಪ್ರಸ್ತುತ, ಇದು ಸುಮಾರು 50 ಸಾವಿರ ಕೋಟಿ ರೂಗಳು ಎಂದು ಅಂದಾಜಿಸಲಾಗಿದೆ. ಕಳೆದ ವರ್ಷ ಕೋಚಿಂಗ್ ಸೆಂಟರ್‌ಗಳ ವಿದ್ಯಾರ್ಥಿಗಳಿಂದ 5,517 ಕೋಟಿ ರೂ ಜಿಎಸ್‌ಟಿ ಸಂಗ್ರಹಿಸಲಾಗಿತ್ತು. ಈ ಕೋಚಿಂಗ್ ಕೇಂದ್ರಗಳಲ್ಲಿ ಹಲವು ಸ್ಟಾಕ್ ಮಾರುಕಟ್ಟೆಯ ಪಟ್ಟಿಯಲ್ಲಿ ಸೇರಿವೆ ಅಥವಾ ಸೇರಲಿವೆ.

ಕೋಚಿಂಗ್ ಉದ್ಯಮವು ಇಂತಹ ಒಂದು ಉಜ್ವಲ ಸ್ಥಿತಿಗೆ ಏರಲು ಮುಖ್ಯ ಕಾರಣವೆಂದರೆ ಶಿಕ್ಷಣದಲ್ಲಿ ಸಾರ್ವಜನಿಕ ಹೂಡಿಕೆಯ ಕೊರತೆಯೇ. ಶಿಕ್ಷಣದ ಮೇಲೆ ಸರ್ಕಾರದ ವೆಚ್ಚವು 2013–14ರಲ್ಲಿ ಜಿಡಿಪಿಯ ಕೇವಲ 0.63% ಇತ್ತು ಮತ್ತು 2023–24ರಲ್ಲಿ ಅದು 0.37%ಗೆ ಇಳಿದಿದೆ. ಬ್ರಿಕ್ಸ್ ದೇಶಗಳ ಪೈಕಿ ಶಿಕ್ಷಣಕ್ಕಾಗಿ ಅತಿ ಕಡಿಮೆ ಖರ್ಚು ಮಾಡುವ ದೇಶವೆಂದರೆ, ಅದು ಭಾರತವೇ. 2022ರಲ್ಲಿ, ಚೀನಾ ತನ್ನ ಜಿಡಿಪಿಯ ಶೇ.4.01ರಷ್ಟನ್ನು ಶಿಕ್ಷಣಕ್ಕಾಗಿ ಖರ್ಚು ಮಾಡಿದೆ.

ಸಾಕಷ್ಟು ಹಣದ ಅಲಭ್ಯತೆಯ, ಅಸಮರ್ಪಕ ಮೂಲಸೌಕರ್ಯಗಳ ಮತ್ತು ಗುಣಮಟ್ಟದ ಕೊರತೆಯ ಅಂಶಗಳು ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಶೂನ್ಯತೆಯನ್ನು ಸೃಷ್ಟಿಸುತ್ತವೆ. ಈ ಅಭಾವವನ್ನು ತುಂಬುವ ಕೆಲಸವನ್ನು ಈ ಕೋಚಿಂಗ್ ಕೇಂದ್ರಗಳು ಬಹಳ ಉತ್ಸಾಹದಿಂದ ಮಾಡುತ್ತವೆ. ಗುಣಮಟ್ಟದ ಶಿಕ್ಷಣವನ್ನು ನೀಡುವ ತನ್ನ ಮೂಲಭೂತ ಜವಾಬ್ದಾರಿಯನ್ನು ನಿರ್ಲಕ್ಷಿಸುವ ಮೂಲಕ ಸರ್ಕಾರವು ಈ ಕೋಚಿಂಗ್ ಸೆಂಟರ್‌ಗಳನ್ನು ಪರಿಣಾಮಕಾರಿಯಾಗಿ ಪ್ರೋತ್ಸಾಹಿಸಿದೆ.

ಸರ್ಕಾರ ಎಸಗಿದ ಲೋಪದ ಬಹು ದೊಡ್ಡ ಫಲಾನುಭವಿಗಳು

ಭಾರತದಲ್ಲಿ ಶಿಕ್ಷಣದ ಬಗ್ಗೆ ಸರ್ಕಾರವು ತೋರುವ ದಿವ್ಯ ನಿರ್ಲಕ್ಷದಿಂದಾಗಿ, ಬಹುಪಾಲು ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಸರ್ಕಾರ ಎಸಗಿದ ಈ ಲೋಪದ ಬಹು ದೊಡ್ಡ ಫಲಾನುಭವಿಗಳೆಂದರೆ ಖಾಸಗಿ ಕೋಚಿಂಗ್ ಕೇಂದ್ರಗಳೇ. ಒಬ್ಬ ವಿದ್ಯಾರ್ಥಿಯು ಶಾಲಾ ಹಂತದಲ್ಲಿ ಕಲಿಯಬಹುದಾದ ಶಿಕ್ಷಣಕ್ಕೆ ಅವರು ಒಂದು ಬಹು ದೊಡ್ಡ ಶುಲ್ಕವನ್ನು ವಿಧಿಸುತ್ತಾರೆ.

ಈ ಕೋಚಿಂಗ್ ಮಾಫಿಯಾ ವಿದ್ಯಾರ್ಥಿಗಳ ಮೇಲೆ ಡಿಜಿಟಲ್ ಮಾನಸಿಕ ಯುದ್ಧವನ್ನು ಹೂಡುತ್ತದೆ. ಸಾಮಾಜಿಕ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುವ ಕ್ಲಿಪ್‌ಗಳು ಮತ್ತು ರೀಲ್‌ಗಳ ಜಾಣ ಬಳಕೆಯ ಮೂಲಕ ಅವರು ವಿದ್ಯಾರ್ಥಿಗಳನ್ನು ನಾಗರಿಕ ಸೇವೆಗಳ (ಐಎಎಸ್) ಬಲೆಗೆ ಸೆಳೆಯುತ್ತಾರೆ. ಒಂದು ಜೂಜಿನ ಅಡ್ಡಾದಲ್ಲಿ ಮೂಡುವ 'ಇಂದಲ್ಲಾ ನಾಳೆ ಗೆಲ್ಲುವ' ಮನೋಭಾವದ ರೀತಿಯಲ್ಲಿ ವಿದ್ಯಾರ್ಥಿಗಳು ತಮ್ಮ ಕಡು ಯೌವನದ ವರ್ಷಗಳಲ್ಲಿ ಹತ್ತಿರ ಹತ್ತಿರ ಒಂದು ದಶಕದ ಸಮಯವನ್ನು ವ್ಯರ್ಥ ಮಾಡಲು ತಯಾರಾಗುವಂತೆ ಹುರಿದುಂಬಿಸುತ್ತಾರೆ.

ಕೋಚಿಂಗ್ ಸೆಂಟರ್‌ಗಳ ಬಗ್ಗೆ ಹೇಳಬಹುದಾದ ಮತ್ತೊಂದು ದುಃಖದ ಸಂಗತಿಯೆಂದರೆ ಅವರ ಬೋಧನಶಾಸ್ತ್ರವೇ. ಅದನ್ನು 'ಅವಧ್ ಓಜಾ ಸರ್' (ಓಜಾ ಎಂಬ ಈ ಮಹಾನುಭಾವ ಒಬ್ಬ ಕೋಚ್) ಅವರ ವೀಡಿಯೊದಲ್ಲಿ ಸಂಪೂರ್ಣವಾಗಿ ವಿವರಿಸಲಾಗಿದೆ. ಇದರಲ್ಲಿ ಅವರು 'ಶೇ. 2 ಗಣ್ಯ ಶ್ರೀಮಂತರ' ಭಾಗವಾಗಲು ತಮ್ಮ ವಿದ್ಯಾರ್ಥಿಗಳನ್ನು ಕೋರುತ್ತಾರೆ. ಅವರು ತಮ್ಮ ವಿದ್ಯಾರ್ಥಿಗಳಿಗೆ "ನೀವು ರಾಜರು. ನಿಮ್ಮ ಪ್ರಜೆಗಳೊಂದಿಗೆ ನೀವು ಮಾತನಾಡಬಾರದು. ಅವರೇ ನಿಮ್ಮೊಂದಿಗೆ ಮಾತನಾಡಲು ಹಂಬಲಿಸಬೇಕು.... ಸಾಮಾನ್ಯರೊಂದಿಗೆ ನೀವು ಮಾತನಾಡುವುದನ್ನು ನಿಲ್ಲಿಸಿದ ಕೂಡಲೇ ನೀವು ಐಎಎಸ್ ಅಧಿಕಾರಿಯಾಗುತ್ತೀರಿ" ಈ 'ಓಜಾ ಸರ್', ಪ್ರಜಾಪ್ರಭುತ್ವದಲ್ಲಿ ಕಾರ್ಯನಿರ್ವಹಿಸುವ ಸಾರ್ವಜನಿಕ ಸೇವಕರನ್ನು ತರಬೇತುಗೊಳಿಸುತ್ತಾರೋ ಅಥವಾ ಮೊಘಲ್ ನ್ಯಾಯಾಲಯದ ಜಾಗೀರ್ದಾರರು ಮತ್ತು ಮನ್ಸಬ್ದಾರ್‌ಗಳನ್ನು ತರಬೇತುಗೊಳಿಸುತ್ತಾರೋ ಎಂಬುದು ಒಂದು ವಿಸ್ಮಯವೇ ಸರಿ!

ಯೂನಿಯನ್ ಪಬ್ಲಿಕ್ ಸರ್ವೀಸಸ್ ಕಮಿಷನ್ (ಲೋಕ ಸೇವಾ ಆಯೋಗ) ವಾರ್ಷಿಕವಾಗಿ ನಡೆಸುವ ಪರೀಕ್ಷೆಗೆ ಸುಮಾರು ಒಂದು ದಶಲಕ್ಷ ವಿದ್ಯಾರ್ಥಿಗಳು ಕುಳಿತುಕೊಳ್ಳುತ್ತಾರೆ. ಭರ್ತಿ ಮಾಡಲು 2013ರಲ್ಲಿ 1,228 ಹುದ್ದೆಗಳು ಘೋಷಣೆಯಾಗಿದ್ದವು. 2021ರಲ್ಲಿ ಈ ಸಂಖ್ಯೆಯು 749ಕ್ಕೆ ಇಳಿದಿತ್ತು. ಈ ಸನ್ನಿವೇಶದಲ್ಲಿ, ಗುಣಮಟ್ಟದ ಉದ್ಯೋಗಗಳ ಸೀಮಿತ ಲಭ್ಯತೆಯು ಒಂದು ಸ್ಪರ್ಧಾತ್ಮಕ ವಾತಾವರಣವನ್ನು ಸೃಷ್ಟಿಸುತ್ತದೆ ಮತ್ತು ಉದ್ಯೋಗದ ಗಳಿಕೆಯನ್ನು ಭದ್ರಪಡಿಸಿಕೊಳ್ಳಲು ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರುತ್ತದೆ. ಜಾತಿ, ಧರ್ಮ, ಲಿಂಗ ಇತ್ಯಾದಿ ಅಂಶಗಳು ಅವರ ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸುತ್ತವೆ ಮತ್ತು ಉದ್ಯೋಗವನ್ನು ಭದ್ರಪಡಿಸಿಕೊಳ್ಳುವ ಅವರ ಕನಸನ್ನು ಭಗ್ನಗೊಳಿಸುತ್ತದೆ. ಹಾಗಾಗಿ ಅವರು ಕೇವಲ ಕೆಲವೇ ಕೆಲವು ಸಂಖ್ಯೆಯ ಪ್ರತಿಷ್ಠಿತ ಹುದ್ದೆಗಳ ಮೇಲೆ ಕಣ್ಣುಹಾಯಿಸಲು ಕಾರಣವಾಗುತ್ತದೆ ಮತ್ತು ಅದು ಅವರ ಮೇಲ್ಮುಖ ಚಲನೆಗೆ ಸಾಧ್ಯವಿರುವ ಏಕೈಕ ಮಾರ್ಗವಾಗುತ್ತದೆ.

ಭವಿಷ್ಯದ ಬಗ್ಗೆ ಆತಂಕ

ಭಾರತ ಸರ್ಕಾರವು ನವ ಉದಾರವಾದಿ ನೀತಿಗಳನ್ನು ಸ್ವೀಕರಿಸಿದ ಕಾರಣದಿಂದಾಗಿ, 1990ರ ದಶಕದಿಂದ ಹಿಡಿದು ಇಂದಿನವರೆಗೂ ಸಾರ್ವಜನಿಕ ವಲಯದ ಉದ್ಯೋಗಗಳು ಸತತವಾಗಿ ಮತ್ತು ತೀವ್ರವಾಗಿ ಇಳಿಕೆಯಾಗುತ್ತಿವೆ. 1992–93ರಲ್ಲಿ, ಸಾರ್ವಜನಿಕ ವಲಯದಲ್ಲಿ 19.5 ದಶಲಕ್ಷ ಉದ್ಯೋಗಗಳು ಇದ್ದವು ಮತ್ತು ಆಗ ಭಾರತದ ಜನಸಂಖ್ಯೆಯು 839 ದಶಲಕ್ಷದಷ್ಟಿತ್ತು. ದೇಶದ ಜನಸಂಖ್ಯೆಯು 1.4 ಶತಕೋಟಿಗೆ ಏರಿಕೆಯಾಗಿರುವ ಇಂದಿನ ದಿನಗಳಲ್ಲಿ ಉದ್ಯೋಗಗಳ ಸಂಖ್ಯೆಯು ಸುಮಾರು 17.6 ದಶಲಕ್ಷದ ಮಟ್ಟಕ್ಕೆ ಕುಗ್ಗಿದೆ. ಈ ವಿದ್ಯಮಾನವು ಭವಿಷ್ಯದಲ್ಲಿ ಭಾರತವು ಕಷ್ಟದ ದಿನಗಳನ್ನು ಕಾಣಲಿದೆ ಎಂಬುದನ್ನು ಸೂಚಿಸುತ್ತದೆ. 1980ರ ದಶಕದ ಆರಂಭದಲ್ಲಿ ನವ–ಉದಾರವಾದಿ ನೀತಿಗಳನ್ನು ಮೊದಲು ಅಳವಡಿಸಿಕೊಂಡ ದೇಶಗಳ ಅನುಭವವನ್ನು ನಾವು ಗಮನಿಸಿದರೆ ಭವಿಷ್ಯದ ಬಗೆಗಿನ ಈ ಆತಂಕವು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಮಾರ್ಗರೆಟ್ ಥ್ಯಾಚರ್ ಪ್ರಧಾನ ಮಂತ್ರಿಯಾಗಿದ್ದ ಅವಧಿಯಲ್ಲಿ, 1979 ಮತ್ತು 1983ರ ನಡುವೆ, ಬ್ರಿಟನ್ನಿನ ಉದ್ಯಮ ವಲಯದಲ್ಲಿ ಎರಡು ದಶಲಕ್ಷ ಉದ್ಯೋಗಗಳು ಮತ್ತು ತಯಾರಿಕಾ ವಲಯದಲ್ಲಿ 1.7

ಪುಟ 15 ಕ್ಕೆ

ಯು.ಕೆ.ಯಲ್ಲಿ ಅಭೂತಪೂರ್ವ ಫ್ಯಾಸಿಸ್ಟ್ ದಂಗೆಗಳೂ, "ಫ್ಯಾಸಿಸಂ ವಿರುದ್ಧ ಒಟ್ಟಾಗಿ ನಿಲ್ಲಿ" ಪ್ರತಿರೋಧವೂ

ಸೌತ್ ಪೋರ್ಟ್ ಎಂಬಲ್ಲಿ ಮೂವರು ಹುಡುಗಿಯರ ಹತ್ಯೆಯ ನಂತರದ ದಿನಗಳಲ್ಲಿ ಯು.ಕೆ ಯ 35 ಕ್ಕೂ ಹೆಚ್ಚು ನಗರಗಳಲ್ಲಿ ಉಗ್ರ–ಬಲಪಂಥೀಯ ಪಡೆಗಳ ದಂಗೆಗಳನ್ನು ಕಂಡಿವೆ. ಈ ಜನಾಂಗ–ದ್ವೇಷಿ ಮತ್ತು ಮುಸ್ಲಿಂ–ದ್ವೇಷಿ ದಂಗೆಗಳು ಯು.ಕೆ ಯಲ್ಲಿ ಹಿಂದೆಂದೂ ಕಾಣದ ಪ್ರಮಾಣ ಮತ್ತು ಭೀಕರತೆಯಲ್ಲಿ ಇದ್ದವು ಎನ್ನಲಾಗಿದೆ. ಎಲ್ಲೆಡೆ ಫ್ಯಾಸಿಸ್ಟ್ ಪ್ರಚೋದಕರಿಗೆ ಪ್ರತಿಕ್ರಿಯೆಯಾಗಿ ಸ್ವಯಂ–ಸ್ಫೂರ್ತವಾಗಿ ''ಫ್ಯಾಸಿಸಂ ವಿರುದ್ಧ ಒಟ್ಟಾಗಿ ನಿಲ್ಲಿ'' ಯಂತಹ ಫ್ಯಾಸಿಸ್ಟ್ ವಿರೋಧಿ ಒಕ್ಕೂಟಗಳು ಸಹ ಹೊರಹೊಮ್ಮಿವೆ. ಈ ಫ್ಯಾಸಿಸ್ಟ್ ದಂಗೆಗಳು ಪ್ರಪಂಚದಾದ್ಯಂತ ಇತರ ಉಗ್ರ ಬಲಪಂಥೀಯ ಚಳುವಳಿಗಳಲ್ಲಿ ಕಂಡು ಬರುತ್ತಿರುವ ಪ್ರವೃತ್ತಿಯ ಬ್ರಿಟಿಷ್ ಅಭಿವ್ಯಕ್ತಿಯಾಗಿದೆ. ಯುಕೆಯಲ್ಲಿ ಇದಕ್ಕೆ ಕಾರಣವಾದ ಅದರದ್ದೇ ಆದ ಇತಿಹಾಸವಿದೆ. ಇವೆಲ್ಲದರ ಕುರಿತು ಒಂದು ಸ್ಥೂಲ ನೋಟ.

ಜಗದ ಸುತ್ತ

ವಸಂತರಾಜ್ ಎನ್.ಕೆ.

ಈ ವಾರಾಂತ್ಯದಲ್ಲಿ (ಅಗಸ್ಟ್ 3–4) ಯುಕೆಯಾದ್ಯಂತ ಫ್ಯಾಸಿಸ್ಟ್ ಗಲಭೆಗಳು ಮತ್ತು ಮುಸ್ಲಿಂ ವಿರೋಧಿ ದ್ವೇಷದ ಮೆರವಣಿಗೆಗಳು ಹಿಂಸಾಚಾರವನ್ನು ಪ್ರಚೋದಿಸಿದವು. ಸೌತ್ ಪೋರ್ಟ್ ಎಂಬಲ್ಲಿ ನೃತ್ಯ ತರಗತಿಯಲ್ಲಿ ಮೂವರು ಯುವತಿಯರನ್ನು ಮಾರಣಾಂತಿಕವಾಗಿ ಇರಿದ ಘಟನೆಯನ್ನು ಉಗ್ರ–ಬಲಪಂಥೀಯ ಪಡೆಗಳು ದುರ್ಬಳಕೆ ಮಾಡಿಕೊಂಡವು. ಆನ್–ಲೈನ್ ನಲ್ಲಿ ಮತ್ತು ಸಾಮಾಜಿಕ ಮಾಧ್ಯಮದ ಮೂಲಕ ಅಣಿ ನೆರೆಸಲಾದ ಹಿಂಸಾತ್ಮಕ ಉಗ್ರ–ಬಲಪಂಥೀಯ ಗ್ಯಾಂಗುಗಳು ಮಸೀದಿಗಳು ಮತ್ತು ನಿರಾಶ್ರಿತರು ಮತ್ತು ಆಶ್ರಯ ಕೇಳಿ ಬಂದವರು ವಾಸಿಸುತ್ತಿರುವ ಹೋಟೆಲ್ ಗಳ ಮೇಲೆ ದಾಳಿಗಳನ್ನು ಪ್ರಾರಂಭಿಸಿತು. ಈ ಗ್ಯಾಂಗುಗಳು ಕಿಟಕಿಗಳನ್ನು ಒಡೆದು ಕಟ್ಟಡಗಳನ್ನು ಸುಡಲು ಪ್ರಯತ್ನಿಸಿ, ಜರ್ಮನಿಯ ಭೀಕರ ನಾಜಿ ಹಿಂಸಾಚಾರವನ್ನು ನೆನಪಿಸುವ ದೃಶ್ಯಗಳು ಕೆಲವು ಪಟ್ಟಣಗಳಲ್ಲಿ ಕಾಣಿಸಿದವು.

ರೊಥರ್ ಹ್ಯಾಮ್ ಪಟ್ಟಣದಲ್ಲಿ ಅಗಸ್ಟ್ 4ರಂದು ಗಲಭೆಕೋರರು ಆಶ್ರಯ ಕೇಳಿ ಬಂದವರು ತಂಗಿರುವ ಹಾಲಿಡೇ ಇನ್ ಮೇಲೆ ಆಕ್ರಮಣ ಮಾಡಿದರು. ಗಾಜು ಒಡೆಯುವ ಶಬ್ದದೊಂದಿಗೆ ಗೋಡೆಗಳು ಪ್ರತಿಧ್ವನಿಸಿದವು ಮತ್ತು ಫ್ಯಾಸಿಸ್ಟರು ಕಟ್ಟಡದಲ್ಲಿ ಹಲವು ಕಡೆ ಬೆಂಕಿ ಹಚ್ಚಿ ಒಳಗೆ ಸಿಲುಕಿದ್ದ ನಿರಾಶ್ರಿತರನ್ನು ಸುಟ್ಟು ಸಾಯಿಸುವ ಪ್ರಯತ್ನದಲ್ಲಿ ದಟ್ಟ ಹೊಗೆಯಾಡಿತು.

ನೂರಾರು ಪ್ರತಿ–ಪ್ರದರ್ಶಕರು ಆಗಮಿಸಿದ ನಂತರ ಕಾರ್ಡಿಫ್ ನಲ್ಲಿ ಇದೇ ರೀತಿಯ ಭೀಕರ ದಾಳಿಯನ್ನು ಹಿಮ್ಮೆಟ್ಟಿಸಲಾಯಿತು. ಅಲ್ಲಿದ್ದ ಬೃಹತ್ ಸಂಖ್ಯೆಯ ಫ್ಯಾಸಿಸ್ಟ್ ಗುಂಪನ್ನು ಓಡಿಸಲಾಯಿತು. ಲಿವರ್ಪೂಲ್, ಸುಂದರ್ಲ್ಯಾಂಡ್, ಲೀಡ್ಸ್ ಮತ್ತು ಇತರ ಸ್ಥಳಗಳಲ್ಲಿ, ಜನಾಂಗವಾದ–ವಿರೋಧಿ ಪ್ರದರ್ಶನಕಾರರು ಸಹ ಪ್ರತಿ–ಪ್ರದರ್ಶನಗಳ ಕರೆಗೆ ಓಗೊಟ್ಟು ನೆರೆದರು.

ಅಗಸ್ಟ್ 5ರಂದು ಕಡಲತೀರದ ಇಂಗ್ಲಿಷ್ ಪಟ್ಟಣವಾದ ಸೌತ್ ಪೋರ್ಟ್‌ಲ್ಲಿ, 17 ವರ್ಷದ ಶಸ್ತ್ರಸಜ್ಜಿತ ಹುಡುಗ, ನೃತ್ಯ ಪಾಠ ಮತ್ತು ಯೋಗ ಕಾರ್ಯಾಗಾರದೊಳಹೆ ನುಗ್ಗಿ ಮೂವರು ಹುಡುಗಿಯರ ಹತ್ಯೆ ಮಾಡಿದ ನಂತರ, ಉಗ್ರ ಬಲಪಂಥೀಯ ಪಡೆಗಳು ಹಿಂಸಾಚಾರದ ಚಕ್ರ ಪ್ರಾರಂಭಿಸಿದವು. ಈ ಪ್ರಕರಣದಲ್ಲಿ ಗಂಭೀರ ಸ್ಥಿತಿಯಲ್ಲಿರುವ ಐವರು ಸೇರಿದಂತೆ ಇತರ ಎಂಟು ಮಕ್ಕಳು ಗಾಯಗೊಂಡಿದ್ದಾರೆ. ಇಬ್ಬರು ವಯಸ್ಕರು ಇನ್ನೂ ಆಸ್ಪತ್ರೆಯಲ್ಲಿದ್ದಾರೆ.

ದಾಳಿಕೋರನು ಅಪ್ರಾಪ್ತನಾಗಿದ್ದ ಕಾರಣ, ಅವನ ಗುರುತನ್ನು ಆರಂಭದಲ್ಲಿ ಕಾನೂನಿಗೆ ಅನುಗುಣವಾಗಿ ಪೊಲೀಸರು ತಡೆಹಿಡಿದರು. ಫ್ಯಾಸಿಸ್ಟ್ ಮತ್ತು ಬಿಳಿಯ ಪ್ರಾಬಲ್ಯವಾದಿ ಗುಂಪುಗಳು ತಮ್ಮದೇ ಆದ ಉದ್ದೇಶಪೂರ್ವಕ ತಪ್ಪು ಮಾಹಿತಿ ಮತ್ತು ಅಪರಾಧಿಯ ಬಗ್ಗೆ ಸುಳ್ಳುಗಳನ್ನು ಹರಡಲು ಈ ಮಾಹಿತಿ ನಿರ್ವಾತದ ಲಾಭವನ್ನು ಪಡೆದುಕೊಂಡವು. ದಾಳಿಕೋರ ಮುಸ್ಲಿಂ ಮತ್ತು ವಲಸಿಗ ಎಂದು ಸುಳ್ಳು ಹೇಳಿಕೆಗಳನ್ನು ವ್ಯಾಪಕವಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಸಾರ ಮಾಡಲಾಯಿತು. ಅಪರಾಧಿ, ಮುಸ್ಲಿಂ ವಿರೋಧಿ 'ಇಂಗ್ಲಿಷ್ ಡಿಫೆನ್ಸ್ ಲೀಗ್' ನ ಸಂಸ್ಥಾಪಕ ಮತ್ತು ಬಲಪಂಥೀಯ ಯು.ಎಸ್ ಬಿಲಿಯಾಧೀಶರ ಮತ್ತು ಫ್ಯಾಸಿಸ್ಟ್ ಚಿಂತನಾ ಕೂಟಗಳ ಮಿತ್ರ ನವ–ನಾಜಿ ನಾಯಕ



ಟಾಮಿ ರಾಬಿನ್ಸನ್, ಈ ಅಪಪ್ರಚಾರದ ಹಿಂದಿದ್ದ ಪ್ರಮುಖ ವ್ಯಕ್ತಿ.

ಬಿಳಿ ರಾಷ್ಟ್ರೀಯತಾವಾದಿ ಗುಂಪು "ಪೇಟ್ರಿಯಾಟಿಕ್ ಆಲ್ಟರ್ನೇಟಿವ್" ಮತ್ತಷ್ಟು ಸುಳ್ಳುಗಳ ಸುನಾಮಿ ಹರಡಲು ಮತ್ತು ಪ್ರತಿಭಟನೆಗಳನ್ನು ಸಂಘಟಿಸಲು ಟೆಲಿಗ್ರಾಮ್ ಸಂದೇಶ ವೇದಿಕೆಯನ್ನು ಬಳಸಿತು. ಮೂವರು ಹುಡುಗಿಯರ ಹತ್ಯೆಯ ನಂತರದ ದಿನಗಳಲ್ಲಿ 35 ಕ್ಕೂ ಹೆಚ್ಚು ನಗರಗಳ ಈ ಉಗ್ರ–ಬಲಪಂಥೀಯ ಪಡೆಗಳಿಂದ ಕಾನೂನುಬಾಹಿರ ಗಲಭೆಗಳನ್ನು ಕಂಡಿವೆ. ಈ ಜನಾಂಗ ಮತ್ತು ಮುಸ್ಲಿಂ ದ್ವೇಷಿ ದಂಗೆಗಳು ಯು.ಕೆ ಯಲ್ಲಿ ಹಿಂದೆಂದೂ ಕಾಣದ ಪ್ರಮಾಣ ಮತ್ತು ಭೀಕರತೆಯಲ್ಲಿ ಇದ್ದವು ಎನ್ನಲಾಗಿದೆ.

ನ್ಯಾಯಾಧೀಶರು ಅಂತಿಮವಾಗಿ ಉಗ್ರ–ಬಲಪಂಥೀಯರ ದಂಗೆಯನ್ನು ಕುಗ್ಗಿಸುವ ಪ್ರಯತ್ನದಲ್ಲಿ ಇರಿತದ ಶಂಕಿತನನ್ನು ಸಾರ್ವಜನಿಕವಾಗಿ ಗುರುತಿಸಲು ಪೊಲೀಸರಿಗೆ ಅವಕಾಶ ನೀಡಿದರು. ನಿರೀಕ್ಷೆಯಂತೆ, ಆಕ್ರಮಣಕಾರರ ಧರ್ಮ ಮತ್ತು ವಲಸೆಯ ಸ್ಥಿತಿಯ ಬಗ್ಗೆ ಅವರು ಮಾಡಿದ ಎಲ್ಲಾ ಸುದ್ದಿಗಳು ಹಸಿ ಸುಳ್ಳು ಎಂಬುದು ಬಯಲಾಯಿತು. ದಾಳಿಕೋರ ಯುಕೆಯಲ್ಲಿಯೇ ಜನಿಸಿದವ ಮತ್ತು ಕ್ರಿಶ್ಚಿಯನ್ ಎಂಬುದು ತಿಳಿದು ಬಂತು.

ಫ್ಯಾಸಿಸಂ ವಿರುದ್ಧ ಒಟ್ಟಾಗಿ ನಿಲ್ಲಿ !

ಸೌತ್ ಪೋರ್ಟ್ ಹತ್ಯೆಗಳಿಗೆ ಮುಂಚೆಯೇ ಬ್ರಿಟನಿನ ಫ್ಯಾಸಿಸ್ಟರು ಈಗಾಗಲೇ ದೊಡ್ಡ ರೀತಿಯಲ್ಲಿ ಅಣಿ ನೆರೆಯಲಾರಂಭಿಸಿದ್ದರು. ಅವರಲ್ಲಿ 15,000 ಜನರು ಕಳೆದ ವಾರಾಂತ್ಯದಲ್ಲಿ ಲಂಡನ್ ನಲ್ಲಿ,



ಸಂಸತ್ತಿನ ಚುನಾವಣೆಯಲ್ಲಿ ಟ್ರಂಪ್ ಮಿತ್ರ ನಿಗೆಲ್ ಫರಾಜ್ ಅವರ ನಾಯಕತ್ವದ ಜನಾಂಗವಾದಿ 'ರಿಫೋರ್ಮ್ ಯುಕೆ' ಪಕ್ಷದ ದೊಡ್ಡ ಗೆಲುವನ್ನು ಸಂಭ್ರಮದಿಂದ ಆಚರಿಸಲು ಭಾರೀ ಮೆರವಣಿಗೆ ನಡೆಸಿದರು. ಇದಕ್ಕೆ ಪ್ರತಿಯಾಗಿ ಫ್ಯಾಸಿಸ್ಟ್–ವಿರೋಧಿ ಪ್ರತಿಭಟನಕಾರರು ಅವರಿಗೆ ಇದಿರಾದರು. ಓಸ್ವಾಲ್ಡ್ ಮೊಸ್ಲಿಯ ಫ್ಯಾಸಿಸ್ಟ್ 'ಬ್ಲ್ಯಾಕ್ ಶರ್ಟ್' ಗಳನ್ನು 1936 ರ ಕೇಬಲ್ ಸ್ಟ್ರೀಟ್ ಕದನ' ದಲ್ಲಿ ಯಹೂದಿಗಳು, ಕಮ್ಯುನಿಸ್ಟರು ಮತ್ತು ಯೂನಿಯನಿಸ್ಟರು ಹಿಮ್ಮೆಟ್ಟಿಸಿದಾಗಿನ ನೆನಪಿಸುವ ಚಿತ್ರಗಳನ್ನು ಪ್ರತಿಭಟನಾಕಾರರು ಹಿಡಿದಿದ್ದರು.

'ಫ್ಯಾಸಿಸಂ ವಿರುದ್ಧ ಒಟ್ಟಾಗಿ ನಿಲ್ಲಿ' (Stand Upto Fascism) ಸಹ–ಸಂಚಾಲಕ ವೇಮನ್ ಬೆನೆಟ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತಾಡುತ್ತಾ "ಪ್ರತಿ ಬಾರಿ ಟಾಮಿ ರಾಬಿನ್ಸನ್ ಜನಾಂಗೀಯ ಮತ್ತು ನಾಜಿ ಕೊಲೆಗಡುಕರನ್ನು ಬೀದಿಗೆ ತಂದಾಗ, ಅವರನ್ನು ವಿರೋಧಿಸಲು ನಾವು ಇರುತ್ತೇವೆ." ಎಂದರು.

ಸೌತ್ ಪೋರ್ಟ್ ಘಟನೆಯ ನಂತರ ನಂತರ, ಎಲ್ಲೆಡೆ ಫ್ಯಾಸಿಸ್ಟ್ ಪ್ರಚೋದಕರು ತಲೆ ಎತ್ತಿದ್ದಾರೆ, ಅದಕ್ಕೆ ಪ್ರತಿಕ್ರಿಯೆಯಾಗಿ ಸ್ವಯಂ–ಸ್ಫೂರ್ತವಾಗಿ ಫ್ಯಾಸಿಸ್ಟ್ ವಿರೋಧಿ ಒಕ್ಕೂಟಗಳು ಹೊರಹೊಮ್ಮಿವೆ. ಮುಸ್ಲಿಂ ಗುಂಪುಗಳು, ಟ್ರೇಡ್ ಯೂನಿಯನ್ ಗಳು, ಪ್ಯಾಲೆಸ್ಟೈನ್ ಸೌಹಾರ್ದ ಬೆಂಬಲ ಸಂಘಟನೆಗಳು ಮತ್ತು "ಬ್ಲ್ಯಾಕ್ ಲೈವ್ಸ್ ಮ್ಯಾಟರ್" ಗುಂಪುಗಳು– ಎಲ್ಲವೂ ಈ ಪ್ರಯತ್ನದಲ್ಲಿ ಕೈಜೋಡಿಸಿವೆ.

ಕಾರ್ಡಿಫ್ ನಲ್ಲಿ, "ಬ್ಲ್ಯಾಕ್ ಲೈವ್ಸ್ ಮ್ಯಾಟರ್" ವಕ್ತಾರ ಕ್ವಾಬೆನಾ ಡೆವೊನಿಶ್ ಅವರು "ಫ್ಯಾಸಿಸ್ಟರನ್ನು ನಮ್ಮ ಬೀದಿಗಳಿಂದ ಹೊರದಬ್ಬಲು ಮತ್ತು ಜನಾಂಗೀಯ ವಿಷವನ್ನು ನಮ್ಮ ಸಮುದಾಯಗಳಲ್ಲಿ ಹರಡದಂತೆ ತಡೆಯಲು ಒಕ್ಕೂಟಗಳು ಜನಾಂಗೀಯ–ವಿರೋಧಿ ಪ್ರತಿರೋಧವನ್ನು ನಿರ್ಮಿಸುವುದನ್ನು ಮುಂದುವರಿಸಬೇಕು" ಎಂದು ಹೇಳಿದರು.

ವೇಲ್ಸ್ ನಲ್ಲಿ, ಟಿಯುಸಿ (ಟ್ರೇಡ್ಸ್ ಯೂನಿಯನ್ ಕಾಂಗ್ರೆಸ್) ಸಿಮ್ರು ಕ್ಷೇತ್ರದ ಕಾರ್ಮಿಕ ನಾಯಕ ಶವಾನಾ ತಾಜ್ ಮಾತನಾಡಿ, ಸೌತ್ ಪೋರ್ಟ ಜನರೊಂದಿಗೆ ಮತ್ತು ಉಗ್ರ ಬಲಪಂಥೀಯ ಪಡೆಗಳಿಂದ ಆಕ್ರಮಣಕ್ಕೊಳಗಾದ ಸಮುದಾಯಗಳೊಂದಿಗೆ ಕಾರ್ಮಿಕರ ಸೌಹಾರ್ದ ಬೆಂಬಲವನ್ನು ಒತ್ತಿಹೇಳಿದರು.

ಸರಕಾರದ, ಆಡಳಿತದ ಪ್ರತಿಕ್ರಿಯೆ

ಈ ಬಿಕ್ಕಟ್ಟಿನ ನಡುವೆ ಹಲವಾರು ಸರ್ಕಾರಿ ವ್ಯಕ್ತಿಗಳ ಮಾತುಗಳು ಮತ್ತು ಕ್ರಮಗಳು ಸಹ ವಿವಾದಾಸ್ಪದವಾಗಿವೆ. ಹಿರಿಯ ಪೊಲೀಸ್ ಕಮಿಷನರ್, ಕನ್ಸರ್ವೇಟಿವ್ ಪಕ್ಷದ ರಾಜಕಾರಣಿ ಡೊನ್ನಾ ಜೋನ್ಸ್, ತಮಗೆ ಫ್ಯಾಸಿಸ್ಟರೊಂದಿಗೆ ಸಹಾನುಭೂತಿಯಿದೆ ಎಂದು ಸ್ವತಃ ಬಹಿರಂಗಪಡಿಸಿದರು. ಅವರನ್ನು ಬಂಧಿಸುವುದು "ರೋಗಲಕ್ಷಣಕ್ಕೆ ಚಿಕಿತ್ಸೆ ನೀಡುತ್ತಿದೆಯೇ ಹೊರತು ರೋಗದ ಮೂಲ ಕಾರಣಕ್ಕಲ್ಲ" ಎಂದು ಅವರು ಹೇಳಿದರು. 2017 ರ ಚಾರ್ಲೊಟೆಸ್ವಿಲ್ಲೆ ನವ–ನಾಜಿ ಮೆರವಣಿಗೆಗಳ ನಂತರ ಪ್ರತಿಭಟನಾಕಾರರು "ಬ್ರಿಟನಿನ ಸಾರ್ವಭೌಮತ್ವವನ್ನು ರಕ್ಷಿಸುವ ಬಯಕೆ" ಮತ್ತು "ಬ್ರಿಟಿಷ್ ಮೌಲ್ಯಗಳನ್ನು ಎತ್ತಿಹಿಡಿಯುವ ಅಗತ್ಯತೆಯ ಮೇಲೆ" ಕೇಂದ್ರೀಕರಿಸಿದ್ದಾರೆ ಎಂದು ಜೋನ್ಸ್ ಹೇಳಿದ್ದರು. ನಂತರ ಅವರು ಲೇಬರ್ ಪಕ್ಷದ ಸರ್ಕಾರವು "ಸಾಮೂಹಿಕ ಅನಿಯಂತ್ರಿತ ವಲಸೆಗೆ ಯಾವುದೇ ಪರಿಹಾರವನ್ನು ಹೊಂದಿಲ್ಲ" ಎಂದು ಆರೋಪಿಸಿದರು.

ಫ್ಯಾಸಿಸ್ಟ್ ಗಲಭೆಗಳಿಗೆ ಪ್ರಧಾನ ಮಂತ್ರಿ ಕೀರ್ ಸ್ಟಾರ್ಮರ್ ಅವರ ಪ್ರಾಥಮಿಕ ಪ್ರತಿಕ್ರಿಯೆಯು, ಪೊಲೀಸರಿಗೆ ಹೆಚ್ಚಿನ ಅಧಿಕಾರವನ್ನು ಪಡೆಯುವುದಕ್ಕೆ ಸೀಮಿತವಾಗಿದೆ. ಇದು ತಾತ್ಕಾಲಿಕವಲ್ಲ ಮತ್ತು ವಾಸ್ತವವಾಗಿ ಭವಿಷ್ಯದಲ್ಲಿ ಎಡ, ಜನಾಂಗೀಯ–ವಿರೋಧಿ, ಕಾರ್ಮಿಕ ಮತ್ತು ಶಾಂತಿ ಚಳುವಳಿಗಳ ವಿರುದ್ಧ ಬಳಸಲ್ಪಡುತ್ತದೆ ಎಂದು ಅನೇಕ ಪ್ರಗತಿಪರರು ಎಚ್ಚರಿಸಿದ್ದಾರೆ.

ಸಾರ್ವಜನಿಕ ಭದ್ರತಾ ಕ್ಯಾಮೆರಾಗಳಲ್ಲಿ 'ಮುಖ ಗುರುತಿಸುವಿಕೆ ತಂತ್ರಜ್ಞಾನ' ದ ಬಳಕೆಯನ್ನು ವಿಸ್ತರಿಸುವ ಉದ್ದೇಶವನ್ನು ಪ್ರಧಾನಿ ಘೋಷಿಸಿದರು ಮತ್ತು ರಾಜಕೀಯ ಪ್ರತಿಭಟನೆಗಳಲ್ಲಿ ತೊಡಗಿರುವ ಜನರ ಚಲನೆಯನ್ನು ನಿರ್ಬಂಧಿಸಲು "ಕ್ರಿಮಿನಲ್ ನಡವಳಿಕೆಯ ಆದೇಶಗಳ" ಬಳಕೆಯನ್ನು ಹೆಚ್ಚಿಸಿದರು. ಅಲ್ಪಸಂಖ್ಯಾತರ ಮತ್ತು ರಾಜಕೀಯ ಚಳುವಳಿಗಾರರ ಮೇಲೆ ಈಗಾಗಲೇ ಇರುವ "ಪೋಲಿಸ್ ದಬ್ಬಾಳಿಕೆ"ಯನ್ನು ಇದು ಹೆಚ್ಚಿಸಲಿದೆ ಎಂದು ಮಾನವ ಹಕ್ಕುಗಳ ವೀಕ್ಷಕರು ಹೇಳಿದ್ದಾರೆ.

ಬ್ರಿಟನ್ ಕಮ್ಯುನಿಸ್ಟ್ ಪಕ್ಷವು ಭಾನುವಾರ ತಡರಾತ್ರಿ ಹೇಳಿಕೆಯನ್ನು ನೀಡಿದ್ದು, ಫ್ಯಾಸಿಸ್ಟ್ ದಾಳಿಗಳು ಮತ್ತು ಸರ್ಕಾರದ ಪ್ರತಿಕ್ರಿಯೆ "ಮುಸ್ಲಿಮರು ಅಥವಾ ಕಪ್ಪು ಸಮುದಾಯಗಳನ್ನು ರಕ್ಷಿಸಲು, ಎಡ ಮತ್ತು ಟ್ರೇಡ್ ಯೂನಿಯನ್ ಚಳವಳಿಯು ನಿರಾಶ್ರಿತರು ಪೊಲೀಸರನ್ನು ನಂಬಲು ಸಾಧ್ಯವಿಲ್ಲ ಎಂದು ತೋರಿಸುತ್ತದೆ? ನಾವೆಲ್ಲರೂ ನಮ್ಮ ಸಮುದಾಯಗಳನ್ನು ರಕ್ಷಿಸಬೇಕು ಮತ್ತು ನಮ್ಮ ಬೀದಿಗಳನ್ನು ಒಟ್ಟಾಗಿ ವಾಪಸು ಪಡೆಯಬೇಕು." ಎಂದು ಹೇಳಿದೆ.

ಫ್ಯಾಸಿಸ್ಟ್ ದಂಗೆಗಳ ಮೂಲಕಾರಣ

ಕಳೆದ ವಾರ ಯು.ಕೆ ನಲ್ಲಿ ಸ್ಫೋಟಗೊಂಡ ವಲಸೆ–ವಿರೋಧಿ ಮತ್ತು ಮುಸ್ಲಿಂ ವಿರೋಧಿ ಹಿಂಸಾಚಾರವು ಪ್ರಪಂಚದಾದ್ಯಂತದ ಇತರ ಉಗ್ರ ಬಲಪಂಥೀಯ ಚಳುವಳಿಗಳಲ್ಲಿ ಕಂಡುಬರುತ್ತಿರುವ ಪ್ರವೃತ್ತಿಯ ಬ್ರಿಟಿಷ್ ಅಭಿವ್ಯಕ್ತಿಯಾಗಿದೆ. ➚

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಒಳ ಮೀಸಲಾತಿ ಪ್ರಶ್ನೆ ಮತ್ತು ಕೆನೆಪದರ........ ಪುಟ 11 ರಿಂದ

ಅದೇ ದಿನ, ಅರುಂಧತಿಯರ ಕಲ್ಯಾಣವನ್ನು ಸುಧಾರಿಸಲು ನೈರ್ಮಲ್ಯ ಕಾರ್ಮಿಕರ ಕಲ್ಯಾಣ ಮಂಡಳಿಯ ರಚನೆಯನ್ನು ಘೋಷಿಸಲಾಯಿತು. TNUEF ನ ನಾಲ್ಕು ಪ್ರತಿನಿಧಿಗಳು ಸೇರಿದ್ದಾರೆ.

ರಾಜ್ಯ ಸರ್ಕಾರವು ತಕ್ಷಣವೇ ನ್ಯಾಯಮೂರ್ತಿ ಜನಾರ್ಧನಂ ಸಮಿತಿಯನ್ನು ಸ್ಥಾಪಿಸುವ ಮೂಲಕ ಕಾನೂನು ಪ್ರಕ್ರಿಯೆಯನ್ನು ಪ್ರಾರಂಭಿಸಿತು. ಅರುಂಧತಿಯಾರ್ ಸಮುದಾಯದ ಸಾಮಾಜಿಕ-ಆರ್ಥಿಕ ಸ್ಥಿತಿಯ ಬಗ್ಗೆ ಡೇಟಾವನ್ನು ಸಂಗ್ರಹಿಸಲು ನಿರ್ದೇಶಿಸಿತು. ಒಂಬತ್ತು ತಿಂಗಳೊಳಗೆ ವರದಿ ಸಲ್ಲಿಸಲಾಗಿದೆ. CPI(M) ಮತ್ತು TNUEF ಆಯೋಗಕ್ಕೆ ಹೆಚ್ಚಿನ ಪ್ರಮಾಣದ ಡೇಟಾವನ್ನು ಪ್ರಸ್ತುತ ಪಡಿಸಿದವು, ಮತ್ತು ಹಲವಾರು ಅರುಂಧತಿಯಾರ್ ಸಂಘಟನೆಗಳು ಸಹ ತಮ್ಮ ನಿಲುವುಗಳನ್ನು ಸಲ್ಲಿಸಿದ್ದರು.

ಜನಾರ್ದನಂ ಸಮಿತಿ ಸಲ್ಲಿಸಿದ ವರದಿಯು ಸುಪ್ರೀಂ ಕೋರ್ಟ್ ಪ್ರಸ್ತುತ ತೀರ್ಪಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಜನಾರ್ದನ ಸಮಿತಿ ತನ್ನ ವರದಿಯಲ್ಲಿ ತಮಿಳುನಾಡಿನಲ್ಲಿ ದಲಿತರಿಗೆ 18 ಪ್ರತಿಶತ ಮೀಸಲಾತಿಯಲ್ಲಿ 3 ಪ್ರತಿಶತದಷ್ಟು ಒಳ ಮೀಸಲಾತಿಯನ್ನು ಶಿಫಾರಸು ಮಾಡಿತು ಎಂಬುದನ್ನು ನಾವಿಲ್ಲಿ ಗಮನಿಸಬೇಕು.

ಸರ್ವಪಕ್ಷ ಸಭೆ ನಡೆಸಿದ್ದು, ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಅರುಂಧತಿಯಾರ್ ಸಮುದಾಯಕ್ಕೆ ಶೇ.3 ರಷ್ಟು ಒಳ ಮೀಸಲಾತಿಗೆ ಮುಖ್ಯಮಂತ್ರಿ ನಿರ್ಣಯ ಮಂಡಿಸಿದರು. ಪುತಿಯಾ ತಮಿಳಗಂ'ನ ಕೃಷ್ಣಸಾಮಿ ಹೊರತುಪಡಿಸಿ ಎಲ್ಲಾ ರಾಜಕೀಯ ನಾಯಕರು ಈ ನಿರ್ಣಯದ ಕ್ರಮವನ್ನು ಬೆಂಬಲಿಸಿದರು. ವಿಸಿಕೆ ನಾಯಕ ತೋಲ್ ಎಂಬುವವರು, ಅಂದರೆ, ತಿರುಮಾವಳವನ್ ಸಹ ಉಪ-ವರ್ಗೀಕರಣವನ್ನು ಬೆಂಬಲಿಸಿದರು. ನಂತರ, ಆಗಿನ ಸ್ಥಳೀಯ ಆಡಳಿತ ಸಚಿವರು ಮತ್ತು ಹಾಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದರು, ಅಲ್ಲಿ ಅದು ಬಹುಮತದೊಂದಿಗೆ ಅಂಗೀಕರಿಸಲ್ಪಟ್ಟಿತು, ಅಂತಿಮವಾಗಿ ಅದು ಕಾಯ್ದೆಯಾಯಿತು.

ನ್ಯಾಯಾಲಯದ ಪ್ರಕರಣಗಳು

ಉಪ-ವರ್ಗೀಕರಣ ಮತ್ತು ಒಳ ಮೀಸಲಾತಿ ಕಳೆದ 15 ವರ್ಷಗಳಲ್ಲಿ ಅರುಂಧತಿಯಾರ್ ಸಮುದಾಯದವರ ಜೀವನವನ್ನು ಗಣನೀಯವಾಗಿ ಸುಧಾರಿಸಿದೆ. ಆದರೆ, ಕೃಷ್ಣಸಾಮಿ ಸೇರಿದಂತೆ ಕೆಲವು ವ್ಯಕ್ತಿಗಳು ಈ ಕಾಯ್ದೆಯ ವಿರುದ್ಧ ಮದ್ರಾಸ್ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದರು. ದಿ ಮದ್ರಾಸ್ ಹೈಕೋರ್ಟ್ ಈ ಪ್ರಕರಣವನ್ನು ಈಗಾಗಲೇ ಸುಪ್ರೀಂ ಕೋರ್ಟ್ ಪರಿಶೀಲಿಸುತ್ತಿರುವ ವಿವಿಧ ರಾಜ್ಯಗಳ ಇದೇ ರೀತಿಯ ಪ್ರಕರಣಗಳೊಂದಿಗೆ ಸಂಯೋಜಿಸಲು ಸೂಚಿಸಿದೆ. ಮುಖ್ಯವಾಗಿ, ಮಧ್ಯಂತರ ಅವಧಿಯಲ್ಲಿ, ಮದ್ರಾಸ್ ಹೈಕೋರ್ಟ್ ಕೂಡ ಈ ಕಾಯಿದೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿತು.

ಹಲವು ವರ್ಷಗಳ ಮತ್ತು ವ್ಯಾಪಕವಾದ ಚರ್ಚೆಗಳ ನಂತರ, ಸುಪ್ರೀಂ ಕೋರ್ಟ್ ಈಗ ಪ್ರಕರಣವನ್ನು ಆಲಿಸಿದೆ ಮತ್ತು ಬಹುಮತದ ತೀರ್ಪಿನ ಮೂಲಕ ಉಪ-ವರ್ಗೀಕರಣವು ಕಾನೂನುಬದ್ಧವಾಗಿದೆ ಮತ್ತು ರಾಜ್ಯ ಸರ್ಕಾರಗಳು ದತ್ತಾಂಶದ ಆಧಾರದ ಮೇಲೆ ಉಪ-ವರ್ಗೀಕರಿಸುವ ಹಕ್ಕನ್ನು ಹೊಂದಿದೆ ಎಂದು ತೀರ್ಪು ನೀಡಿದೆ.

ಈ ಪ್ರಕರಣದಲ್ಲಿ, ಸಿಪಿಐ(ಎಂ) ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿತು. ಮೊದಲು ಎನ್. ವರದರಾಜನ್ ಮತ್ತು ನಂತರ ಜಿ.ರಾಮಕೃಷ್ಣನ್ ಅವರ ಹೆಸರಿನಲ್ಲಿ. ಹಾಗೂ ಪಿ.ಸಂಪತ್ ಟಿಎನ್‌ಯುಇಎಫ್ ಹೆಸರಿನಲ್ಲಿ ಕೂಡ ಮಧ್ಯಪ್ರವೇಶಿಸಿದರು. ನಾವು ಕೊನೆಯವರೆಗೂ ಕಾನೂನು ಹೋರಾಟಕ್ಕೆ ಬದ್ಧರಾಗಿದ್ದೇವೆ ಎಂಬುದನ್ನು ಎತ್ತಿ ಹಿಡಿಯಲಾಗಿದೆ.

ಶೇ.3 ರಷ್ಟು ಒಳ ಮೀಸಲಾತಿಯ ನಿರ್ಧಾರವು ತಮಿಳುನಾಡಿನಲ್ಲಿ ಅರುಂಧತಿಯಾರ್ ಸಮುದಾಯಕ್ಕೆ ಮಾತ್ರವಲ್ಲದೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ಬದ್ಧವಾಗಿರುವ ಮತ್ತು ಜಾತಿ ತಾರತಮ್ಯವನ್ನು ವಿರೋಧಿಸುವ ಎಲ್ಲಾ ಪ್ರಜಾಪ್ರಭುತ್ವ ಮತ್ತು ಪ್ರಗತಿಪರ ಜನರಿಗೆ ಅಪಾರ ಸಂತೋಷವನ್ನು ತಂದಿದೆ. ಸಿಪಿಐ(ಎಂ) ಮತ್ತು ಡಿಎಸ್‌ಎಂಎಂ, ಡಿಎಚ್‌ಎಸ್, ಟಿಎನ್‌ಯುಇಎಫ್ ಈ ತೀರ್ಪನ್ನು ಮನಃಪೂರ್ವಕವಾಗಿ ಸ್ವಾಗತಿಸುತ್ತದೆ. ಈ ವಿಚಾರದಲ್ಲಿ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯ ಕಂಡುಬಂದಿಲ್ಲ ಎಂಬ ಅಂಶವನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

ಕರ್ನಾಟಕದಲ್ಲಿ ನ್ಯಾ.ಮೂರ್ತಿ ಸದಾಶಿವ ಆಯೋಗವನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿ, ವಿಮರ್ಶೆಗೆ ಒಳಪಡಿಸಬೇಕು. ಆನಂತರ ಒಳಮೀಸಲಾತಿ ಮತ್ತು ಉಪವರ್ಗೀಕರಣವನ್ನು ಪುನರ್ ರೂಪಿಸಿ, ಅದಕ್ಕನುಗುಣವಾಗಿ ಶೇಕಡಾವಾರು ಉಪವರ್ಗೀಕರಿಸಿ ಅನುಷ್ಠಾನಕ್ಕೆ ತರಬೇಕು ಎಂದು ಡಿಎಚ್‌ಎಸ್‌ನ ಆಗ್ರಹವಾಗಿದೆ. ❍

ಐಎಎಸ್ ಕೋಚಿಂಗ್ ಕೇಂದ್ರಗಳ ಯಶೋಗಾಥೆ.... ಪುಟ 13 ರಿಂದ

ದಶಲಕ್ಷ ಉದ್ಯೋಗಗಳು ಕಣ್ಮರೆಯಾದವು.

ಈ ಕೋಚಿಂಗ್ ಕೇಂದ್ರಗಳ ದುಷ್ಕೃತ್ಯಗಳ ಕುರಿತು ಹಿರಿಯ ಪತ್ರಕರ್ತ ಶೇಖರ್ ಗುಪ್ತಾ ತಮ್ಮ ಒಂದು ಲೇಖನದಲ್ಲಿ ಹೀಗೆ ಪ್ರತಿಕ್ರಿಯಿಸಿದ್ದಾರೆ: "ಚೀನಾದಲ್ಲಿ ಕೂಡ ಖಾಸಗಿ ಟ್ಯೂಷನ್ ಮತ್ತು ಕೋಚಿಂಗ್ ಕೇಂದ್ರಗಳು ಇದೇ ರೀತಿಯಲ್ಲಿ ಮತ್ತು ಬೃಹತ್ ಪ್ರಮಾಣದಲ್ಲಿ ನಾಯಿಕೊಡೆಗಳಂತೆ (ಅಣಬೆಗಳಂತೆ) ಹುಟ್ಟಿ ಕೊಂಡಿದ್ದವು. ಕ್ಸಿ ಜಿನ್‌ಪಿಂಗ್ (ಚೀನಾದ ಅಧ್ಯಕ್ಷ) ಈ ಸಮಸ್ಯೆಯನ್ನು 2021 ರಲ್ಲಿ ಕೊನೆಗೊಳಿಸಿದರು. ಟ್ಯೂಷನ್ ಮತ್ತು ಕೋಚಿಂಗ್ ಉದ್ಯಮವನ್ನು ಸಂಪೂರ್ಣವಾಗಿ ಕೆಡವಿ ಹಾಕಿದರು. ಕಾರಣವೆಂದರೆ: ಅದು ಕುಟುಂಬಗಳಿಗೆ ಹಣಕಾಸಿನ ಮುಗ್ಗಟ್ಟನ್ನು ಉಂಟುಮಾಡುತ್ತದೆ, ಅಸಮಾನತೆಯನ್ನು ಹುಟ್ಟಿಹಾಕುತ್ತದೆ, ಕುಟುಂಬಗಳ ಸಮಯವನ್ನು ವ್ಯರ್ಥಗೊಳಿಸುತ್ತದೆ ಮತ್ತು ಯುವಕರನ್ನು ಆಟ ಪಾಟಗಳಿಂದ ಮತ್ತು ವಿನೋದಗಳಿಂದ ದೂರ ಮಾಡುತ್ತದೆ. ಚೀನಾದ ಪ್ರಸಿದ್ಧ 'ಗಾವೊ ಕಾವೊ' (ನಮ್ಮ ಐಎಎಸ್‌ಗೆ ಸಮಾನ) ತರಬೇತಿ ಕೇಂದ್ರಗಳೂ ಸೇರಿದಂತೆ ಎಲ್ಲ ಕೋಚಿಂಗ್ ಕೇಂದ್ರಗಳನ್ನೂ ನಿಷೇಧಿಸಲಾಯಿತು. ಆನ್‌ಲೈನ್ ಕಲಿಕೆಗೆ ಒಂದು ಮಿತಿಯನ್ನು ವಿಧಿಸಲಾಯಿತು. ಲಾಭಕ್ಕಾಗಿ ತರಬೇತಿ ಎಂಬುದು ಇಲ್ಲ, ಸಾರ್ವಜನಿಕರಿಗೆ ಆರಂಭಿಕ ಷೇರುಗಳ ಕೊಡುಗೆ ಇಲ್ಲ, ಕೋಚಿಂಗ್ ಕೇಂದ್ರಗಳ ಷೇರು ಮಾರಾಟವಿಲ್ಲ, ವಿಲೀನವಿಲ್ಲ, ಸ್ವಾಧೀನಪಡಿಸಿಕೊಳ್ಳುವಂತಿಲ್ಲ, ವಿದೇಶಿ ಸಹಯೋಗವಿಲ್ಲ. ಕಥೆ ಮುಗಿಯಿತು. ರಾತ್ರೋರಾತ್ರಿ, ಚೀನೀ ಶಿಕ್ಷಣ ಕಂಪನಿಗಳು ಸ್ಟಾಕ್ ಮಾರುಕಟ್ಟೆಯಲ್ಲಿ ಒಂದು ಟ್ರಿಲಿಯನ್ ಡಾಲರ್‌ಗಳಿಗಿಂತ ಹೆಚ್ಚು ಹಣ ಕಳೆದುಕೊಂಡವು. ಅವರಿಗೆ ತಗಿಲಿದ ಈ ನಷ್ಟವು 2008ರ ಜಾಗತಿಕ ಆರ್ಥಿಕ ಕುಸಿತದ ಹಾನಿಗಿಂತಲೂ ದೊಡ್ಡದಿತ್ತು. ಜ್ಯಾಕ್ ಮಾ ಹೊರತುಪಡಿಸಿ (ಅವರನ್ನು ವಿಭಿನ್ನವಾಗಿ ಮಕಾಡೆ ಮಲಗಿಸಲಾಯಿತು), ಮೂವರು ಅಗ್ರ ಬಿಲಿಯನೇರ್‌ಗಳಾದ ಲ್ಯಾರಿ ಚೆನ್, ಮೈಕೆಲ್ ಯು ಮತ್ತು ಝಾಂಗ್ ಬಾಂಕ್ಸಿನ್, ತಮ್ಮ ಸಂಪತ್ತಿನ ಶೇ. 50ರಿಂದ ಶೇ. 90ರ ವರೆಗೆ ಕಳೆದುಕೊಂಡರು-ಎಲ್ಲವೂ ಈ ಕೋಚಿಂಗ್ ಸಂಬಂಧವಾಗಿಯೇ. ಕ್ಸಿ ಜಿನ್‌ಪಿಂಗ್ ಹೋದಷ್ಟು ದೂರ ಹೋಗಬೇಕು ಎಂದಾದರೆ ತುಂಬಾ ತುಂಬಾ ದೂರ ಹೋಗಬೇಕು ಎಂದು ತೋರುತ್ತದೆ. ಆದರೆ ನೀವು ಅವರು ಬಗೆಹರಿಸಿದ ಸಮಸ್ಯೆಗಳನ್ನು ಪಟ್ಟಿ ಮಾಡಿದರೆ, ಅದು ಭಾರತದಲ್ಲಿರುವ ಸಮಸ್ಯೆಗಳ ಪಟ್ಟಿಯೇ ಆಗುತ್ತದೆ. ಆದ್ದರಿಂದ, ಏನಾದರೂ ಕ್ರಮ ಕೈಗೊಳ್ಳಲೇಬೇಕು. ಮುರಿದು ಬಿದ್ದ ಶಿಕ್ಷಣ ವ್ಯವಸ್ಥೆಯ ಬೆನ್ನೇರಿ ನಿರ್ಮಿಸಲಾದ ಈ ಕೋಚಿಂಗ್-ಟ್ಯೂಷನ್-ಲಾಭದ ಮಾದರಿಯು ಒಂದು ಹಗರಣವೂ ಹೌದು, ಒಂದು ಹೇವರಿಕೆಯೂ ಹೌದು. ಅದು ತೊಲಗಲೇಬೇಕು".

(ಶಿರೀನ್ ಅಖ್ತರ್ ಮತ್ತು ವಿಜೇಂದ್ರ ಸಿಂಗ್ ಚೌಹಾಣ್ ಝಕಿರ್‌ಹುಸೇನ್ ದಿಲ್ಲಿ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕರು ಮತ್ತು ಶುಭಂ ಶರ್ಮ, ಯುಎಸ್ ನ ಕನೆಕ್ಟಿಕಟ್ ವಿಶ್ವವಿದ್ಯಾಲಯದ ರಾಜೀಯ ಶಾಸ್ತ್ರದ ವಿಭಾಗದಲ್ಲಿ ಸಂಶೋಧನಾ ವಿದ್ಯಾರ್ಥಿ) ❍

↘ ಯುಕೆಯಲ್ಲಿ ಇದಕ್ಕೆ ಕಾರಣವಾದ ಅದರದ್ದೇ ಆದ ಇತಿಹಾಸವಿದೆ.

ಯುಕೆ ಯಲ್ಲಿ ಈ ಫ್ಯಾಸಿಸ್ಟ್ ದಂಗೆಗಳ ಮೂಲಕಾರಣ ಶೋಧಿಸಬೇಕಾದರೆ 50 ವರ್ಷಗಳಷ್ಟು ಹಿಂದಕ್ಕೆ 80ರ ದಶಕದ ಮಾರ್ಗರೇಟ್ ಥ್ಯಾಚರ್ ಆಡಳಿತದ ಅವಧಿಗೆ ಮತ್ತು ಆ ನಂತರದ ಥ್ಯಾಚರ್ ವಾದಿ ರಾಜಕಾರಣವನ್ನು ವಿಶ್ಲೇಷಿಸಬೇಕು.. ಟ್ರೇಡ್ ಯೂನಿಯನ್‌ಗಳ ಸೊಂಟ ಮುರಿಯಲು ಹೊರಟ ಥ್ಯಾಚರ್, ಆ ಪ್ರಕ್ರಿಯೆಯಲ್ಲಿ ಯುಕೆಯ ಕೈಗಾರಿಕಾ ಉತ್ಪಾದನೆಯ ವಲಯವನ್ನೇ ನಾಶ ಮಾಡಿದರು. ಕಲ್ಲಿದ್ದಲು ಗಣಿ, ಉಕ್ಕಿನ ಕಾರ್ಖಾನೆ ಮುಂತಾದವಕ್ಕೆ ಪ್ರಸಿದ್ಧವಾಗಿದ್ದ ಬ್ರಿಟಿಷ್ ಉದ್ಯಮಗಳನ್ನು ನಾಶ ಮಾಡಿದರು. ಸಾರ್ವಜನಿಕ ಸೇವೆಗಳಲ್ಲಿ ಯೂನಿಯನುಗಳು ಪ್ರಬಲವಾಗಿದ್ದರಿಂದ ಅವುಗಳ ಖಾಸಗೀಕರಣವನ್ನು ಸಹ ಮಾಡಿದರು. 80ರ ದಶಕದ ಯುಕೆಯ 'ಥ್ಯಾಚರ್ ವಾದ' ಮತ್ತು ಯು.ಎಸ್ ನ 'ರೇಗನ್ ವಾದ' ನವ-ಉದಾರವಾದಿ ನೀತಿಗಳ ಹರಿಕಾರನಾಗಿತ್ತು. ಯುಕೆ ಯಲ್ಲಿ ಲೇಬರ್ ಒಳಗೊಂಡಂತೆ ಯಾವ ಸರಕಾರ ಬಂದರೂ 'ಥ್ಯಾಚರ್ ವಾದ', 'ಮಿತವ್ಯಯ' 'ಹೊಸ ಲೇಬರ್' ಮುಂತಾದ ವಿವಿಧ ಹೆಸರುಗಳಲ್ಲಿ ಮುಂದುವರೆಯಿತು.

ಯುಕೆಯಲ್ಲಿ ಕಳೆದ ಅರ್ಧ ಶತಮಾನದ-ಅಪ-ಕೈಗಾರಿಕೀಕರಣ, ಸಾರ್ವಜನಿಕ ಸೇವೆಗಳು ಮತ್ತು ಮೂಲಸೌಕರ್ಯಗಳನ್ನು ಬಡವಾಗಿಸಿ ದುರ್ಬಲಗೊಳಿಸಿದ್ದು, ಹಣದುಬ್ಬರದಿಂದ ಜೀವನಮಟ್ಟ ಕುಸಿಯುತ್ತಿದ್ದದ್ದು, ವೇತನದಲ್ಲಿ ತೀವ್ರ ಕಡಿತ, ಶ್ರೀಮಂತರಿಗೆ ಹೆಚ್ಚಿನ ನೇರ ತೆರಿಗೆ ವಿನಾಯಿತಿಗಳು ಮತ್ತು ಉಳಿದವರಿಗೆ ಪರೋಕ್ಷೆ ತೆರಿಗೆ ಹೊರಿಸುವ ತೆರಿಗೆ ನೀತಿ-ಇತ್ಯಾದಿ 'ಥ್ಯಾಚರ್ ವಾದಿ' ನೀತಿಗಳು ಇಂದಿನ ಬಿಕ್ಕಟ್ಟಿನ ಮೂಲ.

ಯುಕೆ ಯುರೋ ಕೂಟ ಸೇರಿದ್ದು ಪೂರ್ವ ಯುರೋಪಿನ ವಲಸೆಗಾರರ ಅಲೆ ಸೃಷ್ಟಿಸಿತು. ಅದನ್ನು ಕಾರ್ಮಿಕ ವೇತನ ಕಡಿತ ಮಾಡಲು, ಅವರನ್ನು ಬೆದರಿಸಲು ಇದ್ದಬದ್ದ ಯೂನಿಯನ್ ಒಡೆಯಲು ಯುಕೆ ಯ ಕಾರ್ಪೊರೇಟುಗಳು ಬಳಸಿಕೊಂಡವು. ಯುಕೆ ಸಕ್ರಿಯ ಪಾತ್ರ ವಹಿಸಿದ ನಾಟೋ ಯುದ್ಧಗಳು ಸೃಷ್ಟಿಸಿದ ವಲಸಿಗರು ಯುಕೆಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಬರುತ್ತಿದ್ದಾರೆ. ತಮ್ಮ ಹಿಂದಿನ "ವಸಾಹತುಶಾಹಿ ಸುವರ್ಣ ಯುಗದ ಆರ್ಥಿಕ ಪ್ರಾಬಲ್ಯದ" ಹುಸಿ ಕನಸನ್ನು ಬೆಂಬತ್ತಿ ಯುರೋ ಕೂಟದಿಂದ ಹೊರಬಂದ ಬ್ರೆಕ್ಸಿಟ್ ನೀತಿ ಮತ್ತು ಇತ್ತೀಚಿನ ಉಕ್ರೇನ್ ಯುದ್ಧದ ನಂತರ ರಶ್ಯಾದ ಮೇಲೆ ಹೊರಿಸಲಾದ ಆರ್ಥಿಕ ದಿಗ್ಬಂಧನ ಯುಕೆಯ ಆರ್ಥಿಕವನ್ನು ಇನ್ನಷ್ಟು ಹದಗೆಡಿಸಿದೆ.



ಇವೆಲ್ಲದರ ಪರಿಣಾಮವಾಗಿ ಉತ್ತಮ-ವೇತನಗಳ ಉದ್ಯೋಗಗಳು ಮಾಯವಾಗಿವೆ. ನಿರುದ್ಯೋಗ ಅದರಲ್ಲೂ ಯುವಜನರಲ್ಲಿ ಭೀಕರ ನಿರುದ್ಯೋಗ ತಾಂಡವವಾಡುತ್ತಿದೆ. ಸರಕು-ಸೇವೆಗಳ ಕೊರತೆ, ಭಾರೀ ಬೆಲೆಏರಿಕೆ ಗಂಭಿರ ಪ್ರಮಾಣದಲ್ಲಿ ಬಾಧಿಸುತ್ತಿವೆ.

ಟೋರಿ, ಲಿಬರಲ್ ಅಥವಾ ಲೇಬರ್, ಈ ನವ-ಉದಾರವಾದಿ ಆರ್ಥಿಕ ದಾಳಿಗೆ ವಿಶ್ವಾಸಾರ್ಹ ಪರ್ಯಾಯವನ್ನು ನೀಡಲು ವಿಫಲವಾಗಿವೆ; ಬದಲಿಗೆ ಅವರು ವಾಸ್ತವವಾಗಿ ಅದನ್ನು ಉತ್ತೇಜಿಸಿದ್ದಾರೆ. ಥ್ಯಾಚರ್ ವಾದಿ ನೀತಿಗಳಿಗಾಗಲಿ, ವಲಸೆ ಪ್ರಶ್ನೆಗಾಗಲಿ, ಉಕ್ರೇನ್ ಯುದ್ಧ ಸೇರಿದಂತೆ ನಾಟೋ ಯುದ್ಧಗಳ ಬಗ್ಗೆ, ಗಾಜಾದಲ್ಲಿ ಪ್ಯಾಲೆಸ್ಟೈನ್ ನರಮೇಧದ ಬಗ್ಗೆಯಾಗಲಿ ಈ ಸಾಂಪ್ರದಾಯಿಕ ಪಕ್ಷಗಳ ನಡುವೆ ಭಾರಿ ಭಿನ್ನಾಭಿಪ್ರಾಯವಿಲ್ಲ. ಬ್ರೆಕ್ಸಿಟ್ ಬಗ್ಗೆ ಮಾತ್ರ ಲೇಬರ್ ವಿರೋಧ ವ್ಯಕ್ತ ಪಡಿಸಿತ್ತು. ವಲಸೆಗಾರರ, ಗಾಜಾ ನರಮೇಧದ ಪ್ರಶ್ನೆಯಲ್ಲಿ ಮತ್ತು ಮುಸ್ಲಿಂ-ದ್ವೇಷದ ಉಗ್ರ ಬಲಪಂಥೀಯರ ಆಕ್ರೋಶದ ಬೆಂಕಿಗೆ ಇವು ತುಪ್ಪ ಎರೆದಿವೆ. ಈ ಪಕ್ಷಗಳ ವಿಫಲತೆ ಬಗ್ಗೆ ಜನರ ಆಕ್ರೋಶವನ್ನು ವಲಸೆಗಾರರ, ಮುಸ್ಲಿಮರ ವಿರುದ್ಧ ತಿರುಗಿಸಲು ಪ್ರಯತ್ನಿಸುತ್ತಿವೆ. ನವ-ನಾಜಿಗಳ ಬೀದಿ ಹಿಂಸಾಚಾರ ಮತ್ತು ಮುಖ್ಯವಾಹಿನಿಯ ಬಂಡವಾಳಶಾಹಿ ಪಕ್ಷಗಳ ದೊಡ್ಡ ಪ್ರತಿಗಾಮಿ ಕಾರ್ಯಸೂಚಿಗಳ ನಡುವಿನ ನೇರ ಸಂಪರ್ಕವನ್ನು ಇವು ಸೂಚಿಸುತ್ತವೆ. ಆದರೆ ಆ ಮೂಲಕ ಇವು ತಮ್ಮ ಚುನಾವಣಾ ಭವಿಷ್ಯದ ಮೇಲೆ ಸಹ ಕೊಡಲಿಯೇಟು ಹಾಕಿಕೊಂಡಿವೆ.

ಯುಕೆಯ ದುಡಿಯುವ ಜನರ, ಸಮಾಜವಾದಿ, ಶಾಂತಿವಾದಿಗಳ, ಅಲ್ಪಸಂಖ್ಯಾತ ಸಮುದಾಯಗಳ ಸಂಘಟನೆಗಳು ಚಳುವಳಿಗಳು ಇದಕ್ಕೆ 'ಫ್ಯಾಸಿಸಂ ವಿರುದ್ಧ ಒಟ್ಟಾಗಿ ನಿಲ್ಲಿ' (Stand Upto Fascism) ನಂತಹ ಸಂಘಟಿತ ಪ್ರತಿರೋಧ ಒಡ್ಡುತ್ತಿವೆ ಎಂಬುದು ಮಾತ್ರ ಆಶಾದಾಯಕ ಬೆಳವಣಿಗೆಯಾಗಿದೆ. ❍

NEW No. MAG(3)/NPP/205/2021-2022
JANASHAKTHI KANNADA VARA PATRIKE August 12-18, 2024 Price: Rs. 10/- Date of Publication: 9 August 2024 RNI No. KARKAN /2006/17926 Posted on 13-08-2024
Posted at BG PSO, BG - 560026 **Posted at Periodical Rate -** Rs. 2





ಕಾಮ್ರೇಡ್ ಸೂರಿಯವರ ಜನ್ಮ ಶತಮಾನೋತ್ಸವದ ಉದ್ಘಾಟನೆ 'ಶ್ರಮ ಸಂಸ್ಕೃತಿ' ನಾಟಕೋತ್ಸವದಲ್ಲಿ ಮೂರು ನಾಟಕಗಳ ಪ್ರದರ್ಶನ

ಅತ್ಯಂತ ಕಿರಿಯ ವಯಸ್ಸಿನಲ್ಲೇ ಸ್ವಾಂತಂತ್ರ ಹೋರಾಟದಲ್ಲಿ ಭಾಗಿಯಾದ ಕಾಮ್ರೇಡ್ ಸೂರ್ಯನಾರಾಯಣ ರಾವ್ ಅವರು ತಮ್ಮ ಬದುಕಿನ ಅಂತ್ಯದವರೆಗೂ ವಿದ್ಯಾರ್ಥಿ ಚಳುವಳಿಗೆ, ಕಾರ್ಮಿಕ ವರ್ಗದ ಚಳುವಳಿಗೆ ಹಾಗೂ ಎಡ ಚಳುವಳಿಗೆ ಇಡೀ ಜೀವನವನ್ನೇ ಮುಡಿಪಾಗಿಟ್ಟರು. ಆ ಸಂಘರ್ಷದಲ್ಲಿ ಮೂಡಿಬಂದ ಸಮರಧೀರ ಚೇತನ ಕಾಮ್ರೇಡ್ ಸೂರಿ. ಆರು ದಶಕಗಳ ಅವರ ಸಾರ್ವಜನಿಕ ಜೀವನವೇ ಹೋರಾಟಗಳ ಒಂದು ವೀರಗಾಥೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾರ್ವಜನಿಕ ಒಡೆತನದ ಬೃಹತ್ ಕಾರ್ಖಾನೆಗಳು ಹಾಗೂ ಖಾಸಗಿ ಒಡೆತನದ ಕಾರ್ಖಾನೆಗಳ ಕಾರ್ಮಿಕರನ್ನು ಸಂಘಟಿಸಿ ಅವರ ಹೋರಾಟಕ್ಕೆ ನಾಯಕತ್ವ ನೀಡಿದ್ದು ಮಾತ್ರವಲ್ಲದೆ, ಹೋಟೆಲ್, ಬೀಡಿ, ಗಾರ್ಮೆಂಟ್ಸ್, ಕೈಮಗ್ಗ ಕಾರ್ಮಿಕರು, ಆಟೋ ಚಾಲಕರು ಸೇರಿದಂತೆ ಹಲವು ವಿಭಾಗಗಳ ಅಸಂಘಟಿತ ಕಾರ್ಮಿಕರನ್ನು ಸಂಘಟಿಸಿ, ಅವರಲ್ಲಿ ಹೋರಾಟದ ಚೈತನ್ಯ ತುಂಬುವ ಮೂಲಕ ಶ್ರಮಿಕರ ಬದುಕಿನ ಸಮಸ್ಯೆಗಳ ಪರಿಹಾರಕ್ಕಾಗಿ ರಾಜಿಯಿಲ್ಲದ ದಿಟ್ಟ ಹೋರಾಟ ನಡೆಸಿದವರು ಕಾಂ.ಸೂರಿ ಅವರು ಸಿಐಟಿಯುನ ಅಖಿಲ ಭಾರತ ಉಪಾಧ್ಯಕ್ಷರೂ, ರಾಜ್ಯಾಧ್ಯಕ್ಷರೂ ಹಾಗೂ ಸಿಪಿಐ(ಎಂ)ನ ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದರು.


ಕಾಮ್ರೆಡ್ ಸೂರ್ಯನಾರಾಯಣ ರಾವ್ ಅವರು 1924ರಲ್ಲಿ ಜನಿಸಿದರು. 2024 ಆಗಸ್ಟ್ 24 ರಂದು ನೂರು ವರ್ಷಗಳು ತುಂಬಲಿವೆ. ಈಗ ರಾಜ್ಯದೆಲ್ಲೆಡೆ ಸೂರಿಯವರ ಜನ್ಮಶತಮಾನೋತ್ಸವ ನಡೆಯುತ್ತಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಶ್ರಮ ಸಂಸ್ಕೃತಿ' ನಾಟಕೋತ್ಸವದ ಮೂಲಕ ಶತಮಾನೋತ್ಸವದ ಉದ್ಘಾಟನಾ ಕಾರ್ಯಕ್ರಮ ಆಗಸ್ಟ್ 6 ರಂದು ನಡೆಯಿತು.

ಹೋರಾಟಗಾರರಿಗೆ ಸ್ಫೂರ್ತಿಯಾಗಿದ್ದ ಸೂರಿ: ನಟ ಪ್ರಕಾಶ್ ರಾಜ್

'ಶ್ರಮ ಸಂಸ್ಕೃತಿ' ನಾಟಕೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ನಟ ಪ್ರಕಾಶ್ ರಾಜ್ ಅವರು 'ಬದುಕು ಅರ್ಥಪೂರ್ಣವಾಗುವುದು ಇನ್ನೊಂದಿಷ್ಟು ಬದುಕುಗಳನ್ನು ಪ್ರೇರೇಪಿಸುವುದರಿಂದ. ಹಾಗೆ ಸಾವಿರಾರು ಹೋರಾಟಗಾರರಿಗೆ ಸ್ಪೂರ್ತಿಯಾದವರು ಕಾಮ್ರೆಡ್ ಸೂರ್ಯನಾರಾಣರಾವ್. 'ರಂಗಭೂಮಿ ಕೆಲಸ ಕೂಡ, ಮತ್ತೊಬ್ಬರನ್ನು ಪ್ರೇರೇಪಿಸುವುದಾಗಿದೆ. ನಾನು ಸೂರಿ ಅವರನ್ನು ನೇರವಾಗಿ ಭೇಟಿಯಾಗಿಲ್ಲ. ಆದರೆ, ಅವರು ಬೆಳೆಸಿದ ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ ಕಾರ್ಯಕರ್ತೆಯರ ಪರ ಹೋರಾಟಗಾರರ ಮೂಲಕ ನನಗೆ ಅವರು ಅರ್ಥವಾಗಿದ್ದಾರೆ' ಎಂದರು.

ನಾಟಕೋತ್ಸವ ಉದ್ಘಾಟಿಸಿ ಮಾತನಾಡಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, '1965ರಿಂದ 1991ರವರೆಗೆ ಸೂರಿಯವರು ನಡೆಸಿದ ಕಾರ್ಮಿಕ ಚಳುವಳಿಗಳು, ಹೋರಾಟಗಳು ಐತಿಹಾಸಿಕವಾದವು. ಕಾರ್ಮಿಕ ಹೋರಾಟಗಳ ಸ್ವರೂಪ ಮತ್ತು ನಾಯಕರು ಹೇಗಿರಬೇಕು ಎಂಬುದಕ್ಕೆ ಸೂರಿ ಮಾದರಿಯಾಗಿದ್ದರು' ಎಂದು ಸ್ಮರಿಸುತ್ತ, '1992ರ ನಂತರ ಭಾರತ ಜಾಗತೀಕರಣಕ್ಕೆ ತೆರೆದುಕೊಂಡ ಮೇಲೆ ಕಾರ್ಮಿಕರು, ಹೋರಾಟ, ರಾಷ್ಟ್ರೀಯತೆಯಂತಹ ಕಲ್ಪನೆ ಬದಲಾಗಿದ್ದು, ಹೋರಾಟದ ಸ್ವರೂಪವೂ ಬದಲಾಗಬೇಕಾಗಿದೆ' ಎಂದರು.

ಈ ಸಂದರ್ಭದಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಂತೇಶ್ ಮಾತನಾಡಿದರು. ಸಿಐಟಿಯು ರಾಜ್ಯ ಘಟಕದ ಅಧ್ಯಕ್ಷೆ ಕೆ.ಎಸ್. ವರಲಕ್ಷ್ಮಿ, ಉಪಾಧ್ಯಕ್ಷರಾದ ವಿಜೆಕೆ ನಾಯರ್, ಸೂರ್ಯನಾರಾಯಣ ರಾವ್ ಅವರ ಕಿರಿಯ ಪುತ್ರಿ ರೇಖಾ, ನಿವೃತ್ತ ಪ್ರಾಧ್ಯಾಪಕ ರಾಜಪ್ಪ ದಳವಾಯಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಕಲಾವಿದರಿಗೆ 'ರಂಗ ಗೌರವ'

ಈ ಸಂದರ್ಭದಲ್ಲಿ ರಂಗ ನಿರ್ದೇಶಕರಾದ ಮಾಲತೇಶ ಬಡಿಗೇರ ಮತ್ತು ಸುಮತಿ ಕೆ.ಆರ್., ಕಲಾವಿದರು ಹಾಗೂ ರಂಗ ನಿರ್ದೇಶಕರಾದ ಮೈಕೋ ಶಿವಶಂಕರ್, ಹು.ದಾ. ಮುತ್ತುರಾಜು ಮತ್ತು ಅಚ್ಯುತ ಕೆ.ಜಿ.ಎಫ್. ಅವರಿಗೂ, ಕಲಾವಿದರು ಹಾಗೂ ರಂಗ ಸಂಘಟಕರಾದ ಸೋಮಶೇಖರ್ ಅವರಿಗೂ ರಂಗಗೌರವ ಸಲ್ಲಿಸಲಾಯ್ತು.

ನಾಟಕೋತ್ಸವದಲ್ಲಿ ಮೂರು ನಾಟಕಗಳ ಪ್ರದರ್ಶನ

'ಶ್ರಮ ಸಂಸ್ಕೃತಿ' ನಾಟಕೋತ್ಸವದಲ್ಲಿ 'ಜಲಗಾರ', 'ನ್ಯಾಯ ಕೇಳಿದ ನಿಂಗವ್ವ', 'ಕಾಮ್ರೆಡ್ ಸೂರಿ' ಎಂಬ ಮೂರು ನಾಟಕಗಳನ್ನು ಪ್ರದರ್ಶಿಸಲಾಯಿತು.

'ಕಾಮ್ರೆಡ್ ಸೂರಿ' ನಾಟಕ:

ಇದು ಕಾಮ್ರೆಡ್ ಸೂರಿಯವರು ಜೀವನಾಧಾರಿತ ನಾಟಕ ಪ್ರದರ್ಶನವಾಯಿತು. ಸೂರಿಯವರ ಬಾಲ್ಯ, ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿದ್ದು, ಬ್ರಿಟೀಷರ ಆಡಳಿತದಿಂದ ಬಂಧನ, ಜೈಲು ವಾಸ, ಸ್ವಾತಂತ್ರ್ಯ ಬಂದ ನಂತರ ಕಾರ್ಮಿಕರಾಗಿದ್ದು, ಹಲವು ಹೋರಾಟಗಳಿಗೆ ನಾಯಕತ್ವ ನೀಡಿದ್ದು, ನಡೆಸಿದ ಹಲವು ರೀತಿಯ ವೀರೋಚಿತ ಹೋರಾಟಗಳು, ಮಾಲೀಕರ ಗೂಂಡಾ ದಾಳಿ ಎದುರಿಸಿ ನಿಂತಿದ್ದು, ಪೊಲೀಸರ ದಾಳಿ ಎದುರಿಸಿದ್ದು... ಹೀಗೆ ಸೂರಿಯವರ ಹೋರಾಟದ ಬದುಕಿನ ಚಿತ್ರಣವನ್ನು ಈ ನಾಟಕದ ಮೂಲಕ ರಂಗದ ಮೇಲೆ ತರುವ ಪ್ರಯತ್ನಿಸಲಾಗಿದೆ.

ರಚನೆ: ಡಾ. ರಾಜಪ್ಪ ದಳವಾಯಿ. ಸಂಗೀತ: ಡಿಂಗ್ರಿ ನರೇಶ್. ರಂಗವಿನ್ಯಾಸ, ನಿರ್ದೇಶನ: ಮಾಲತೇಶ ಬಡಿಗೇರ. ನಿರ್ವಹಣೆ: ಸೋಮಶೇಖರ್ ಮತ್ತು ಹು.ದಾ. ಮುತ್ತುರಾಜು.

ಪಾತ್ರದಾರಿಗಳು: ಹೇಮಂತ್ ಸುಶೀಲ್, ಸೋಮಶೇಖರ್, ಶಾರದಾಪ್ರಸಾದ್, ಉಪಧ್ಯಾಯ, ರೋರಿಚ್, ಲಿಂಗರಾಜು ಕೆ., ಹು.ದಾ. ಮುತ್ತುರಾಜು, ಪ್ರಶಾಂತ್ ಕುಮಾರ್ ಆರ್.ಎಸ್., ಮಾರುತಿ ಕಟಗೇರಿ, ಶೇಖರ್ ಎಚ್.ಎ., ಹರಿಕೃಷ್ಣ ಎ., ಎಸ್. ತಿಮ್ಮಯ್ಯ, ತೇಜು ಜೆ.ಬಿ., ವಿನೋದ್, ಸತ್ಯಕಾಂತ್, ನಾಗೇಶ್ವರ ಬಿ., ಚಲನ್ ಗೌಡ ಹೆಚ್.ಆರ್., ಅಕ್ಷಯ್ ಎಂ., ವಿನಯ್ ಎಚ್., ನವನೀತ್ ಎಸ್.ಕೆ., ಬೋರೇಗೌಡ ಕೆ.ಆರ್., ದಿನೇಶ್ ಎಚ್.ಎಸ್., ಮಹೇಶ್, ಮೀನಾ ಶಿವಕುಮಾರ್, ಮಹಾಸತಿ ಗೌಡ, ಕೀರ್ತನ, ಮಂಜುಳ ಹಾಗೂ ಯುಕ್ತ.

'ಜಲಗಾರ': ರಾಷ್ಟ್ರಕವಿ ಕುವೆಂಪು ರವರ ನಾಟಕ 'ಜಲಗಾರ' ಪ್ರದರ್ಶನವಾಯಿತು. ಈ ನಾಟಕ ಶ್ರಮವೇ ದೇವರು ಎಂಬುದನ್ನು ಸಾರುತ್ತದೆ.

ರಂಗವಿನ್ಯಾಸ–ನಿರ್ದೇಶನ: ಮೈಕೊ ಶಿವಶಂಕರ್, ಸಂಗೀತ ಮತ್ತು ಗಾಯನ: ವಿ.ಎನ್. ಅಶ್ವಥ್. ತಬಲ: ಸುಧೀಂದ್ರ. ನಿರ್ವಹಣೆ: ಸಂಜೀವ್ ಕೊನ್ನೂರು ಹಾಗೂ ರಮೇಶ್ ಬಾಬು. ಪ್ರಸಾಧನ: ಮೋಹನ್ ಚೌಡೇಶ್ವರಿ, ಬೆಳಕು: ಮಂಚೇಗೌಡರು. ಸಂಗೀತ: ಅಶ್ವತ್, ಶಶಿಕಲಾ, ರಮೇಶ್ ಕುಮಾರ್. ರಂಗಸಜ್ಜಿಕೆ: ವೆಂಕಟೇಶ್ ತಿಕ್ಕೇರಿ, ರಮೇಶ್ ಸಿ.ಜಿ.

ಪಾತ್ರ ವರ್ಗ: ಅಮೂಲ್ಯ, ಮರುಡಯ್ಯ ಸಿ.ಆರ್., ಪ್ರಸನ್ನಕುಮಾರ್ ಹೆಬ್ಬಾಲ್, ರಾಜೇಶ್ ಬಾಬು ಬಿ.ಸಿ., ಉಮಾಕಾಂತ್ ದೊನ್ನಿ, ಪ್ರಶಾಂತ್ ಕುಮಾರ್ ಶೆಟ್ಟಿ, ಕಾಳೇಗೌಡ, ಸಂಜೀವ್ ಕೊನ್ನೂರು, ರಾಜಣ್ಣ, ನರಸಿಂಹಮೂರ್ತಿ, ವೆಂಕಟೇಶಯ್ಯ, ಶಿವುಕುಮಾರ್.

'ನ್ಯಾಯ ಕೇಳಿದ ನಿಂಗವ್ವ': ಮಂಡ್ಯ ಜಿಲ್ಲೆಯ 'ವಿಮಲಾ ರಣಧಿವೆ ಮಹಿಳಾ ತಂಡ'ದಿಂದ 'ನ್ಯಾಯ ಕೇಳಿದ ನಿಂಗವ್ವ' ನಾಟಕ ಪ್ರದರ್ಶನವಾಯಿತು. ಕೃಷಿಕೂಲಿಕಾರ ಮಹಿಳೆಯರ ಸಮಸ್ಯೆಗಳನ್ನು ಆದರಿಸಿದ ಭಾಗ, ಕಟ್ಟಡ ಕಾರ್ಮಿಕರಾಗಿ ದುಡಿಯುವ ಮಹಿಳೆಯರ ಸಮಸ್ಯೆಗಳು, ಮಹಿಳೆಯರಿಗೆ ಪುರುಷರಿಗಿಂತ ಕಡಿಮೆ ಕೂಲಿ, ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಮತ್ತು ಗೆಲವು?. ಇವುಗಳನ್ನು ಆಧರಿಸಿದ ಕತೆಯನ್ನು ಈ ನಾಟಕ ಒಳಗೊಂಡಿದೆ. ಮಂಡ್ಯ ಮತ್ತು ಮೈಸೂರಿನಲ್ಲಿಯೂ ಈ ನಾಟಕ ಪ್ರದರ್ಶನವಾಗಲಿದೆ. ಈ ನಾಟಕದ ಪಾತ್ರದಾರಿಗಳಾಗಿ ಕೃಷಿ ಕೂಲಿಕಾರ ಮಹಿಳೆಯರು, ಬಿಸಿಯೂಟ ಕಾರ್ಮಿಕರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ನಟಿಸಿದ್ದಾರೆ.

ರಚನೆ: ರಾಜಪ್ಪ ದಳವಾಯಿ, ಹಾಡುಗಳು: ಕೆ. ರಾಮಯ್ಯ, ಸುಮತಿ ಕೆ.ಆರ್., ಪರಿಕಲ್ಪನೆ ಮತ್ತು ನಿರ್ದೇಶನ: ಸುಮತಿ ಕೆ.ಆರ್., ನಿರ್ವಹಣೆ: ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಸಿ.ಕುಮಾರಿ.

ಪಾತ್ರ ವರ್ಗ: ಸಿ.ಕುಮಾರಿ, ಜಯಲಕ್ಷ್ಮಿ ಎ.ಎಸ್., ರತ್ನಮ್ಮ, ಗಾಯಿತ್ರಿ ಎಸ್., ಕೆ.ಜೆ. ರತ್ನಜೈನ್, ಜಯಕಾಂತ, ಮಂಜುಳ, ಭಾಗ್ಯ, ಶಶಿಕಲಾ ಎ.ಬಿ., ಮಂಗಳಗೌರಿ, ಜಯಮ್ಮ, ಎಂ.ಲತಾಶಂಕರ್ ಎಲ್ಲರೂ ಶ್ರಮಿಕರಾಗಿದ್ದರಿಂದ, ತಮ್ಮ ಬದುಕಿನ ಅನುಭವಗಳನ್ನು ತಮ್ಮ ತಮ್ಮ ಪಾತ್ರದಲ್ಲಿ ಸಹಜವಾಗಿ ಅಭಿನಯಿಸಿ ತೋರಿಸಿದರು. ಈ ಎಲ್ಲರಿಗೂ ಇದು ಚೊಚ್ಚಲ ನಾಟಕ ಮಾತ್ರವಲ್ಲದೆ, ಕೇವಲ ಒಂದು ತಿಂಗಳ ಅವಧಿಯಲ್ಲಿ ಮಾಡಿದ ಅಭ್ಯಾಸ ಇದಾಗಿತ್ತು ಎಂಬುದು ಇದರ ವಿಷೇಶ.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**